ಲಂಕೇಶ್


ಸೆಪ್ಟೆಂಬರ್ 19, 2007 ರೂ.10/-



ಸ್ಕೂಪ್

ಮಕ್ಕಳ ಕಿಡ್ನಿ-ಕಣ್ಣು ಕಿತ್ತು


ಕೊಲ್ಲುವ ಜಾಲ



ನಾಗರಾಜಶೆಟ್ಟಿ

ಪ್ರೇಮಾಯಣ!


ರವಿ ಪೂಜಾರಿಯ ಮುಂದಿನ ಟಾರ್ಗೆಟ್ ರಾಮಲಿಂಗಾರೆಡ್ಡಿ




ಕೋಲಾರದಲ್ಲಿ ಎಸ್ಪಿ ದಯಾನಂದನ ಮಂಗಾಟ


ಉಡುಪಿ ಕ.ಸಾ.ಪ: ಬ್ರಾಹ್ಮಣರ ಭೋಜನ ಸಮ್ಮೇಳನ

ಣಕರ್-ಪಾಟೀಲ್ ರಕ್ಷಣೆಗಾಗಿ ಶಿಂತ್ರೆ ಎನ್‌ಕೌಂಟರ್!



ಸೋನಿಯಾ-ಗೌಡ ಚರ್ಚೆ?





1320 ಕೋಟಿ ರೂಪಾಯಿಗಳೆಂದರೆ ಎಷ್ಟು?

ದುಬಾರಿ ವಿದೇಶಿ ಗೋಧಿ ಆಮದಿನ

ದಲ್ಲಾಳಿ ರಾಜಕಾರಣ

ಚಾರ್ವಾಕ

■ಶಿವಸುಂದರ್

ಭಾರತ ದೇಶವು ಗೋಧಿ ಉತ್ಪಾದನೆಯಲ್ಲಿ ಪ್ರಪಂಚದಲ್ಲೇ ಎರಡನೇ ಸ್ಥಾನದಲ್ಲಿದೆ. ಸ್ವಾತಂತ್ರ್ಯಂಬದ ಆರಂಭದಲ್ಲಿ ಆಹಾರ ಸ್ವಾವಲಂಬನೆಯ ಪ್ರಶ್ನೆ ತೀರಾ ಗಂಭೀರವಾಗಿ ಕಾಡಿಸಿದ್ದರಿಂದ ಅನಿವಾರ್ಯವಾಗಿ ಆಹಾರ ಧಾನ್ಯಗಳನ್ನು ವಿದೇಶದಿಂದ ಆಮದು ಮಾಡಿಕೊಳ್ಳಬೇಕಾಗಿ ಬಂದಿದ್ದು ನಿಜ. ಆಗ ಗೋಧಿಯನ್ನೂ ಆಮದು ಮಾಡಿಕೊಳ್ಳಲಾಗುತ್ತಿತ್ತು. ಆದರೆ ಕ್ರಮೇಣ ಆಹಾರ ಸ್ವಾವಲಂಬನೆ ಸಾಧಿಸಿರುವ ಭಾರತ 1998ರಿಂದ ಗೋಧಿಯನ್ನು ಇತರ ದೇಶಗಳಿಗೂ ರಫ್ತು ಮಾಡುವಷ್ಟು ಉತ್ಪಾದನೆ ಮಾಡುತ್ತಿದೆ.

ಕಳೆದ ಹಲವಾರು ವರ್ಷಗಳಿಂದ ಭಾರತದಲ್ಲಿ 75 ದಶಲಕ್ಷ ಟನ್ನಿನಷ್ಟು ಗೋಧಿಯನ್ನು ರೈತರು ಉತ್ಪಾದಿಸುತ್ತಿದ್ದಾರೆ. ಇದರಲ್ಲಿ ಈ ದೇಶದ ಅಗತ್ಯ 70 ಮಿಲಿಯನ್ ಟನ್ನಿನಷ್ಟು ಮಾತ್ರ. ಆದ್ದರಿಂದಲೇ 2000-2005ರ ನಡುವೆ ಭಾರತ ಏನಿಲ್ಲವೆಂದರೂ 20 ಮಿಲಿಯನ್ ಟನ್ನಿನಷ್ಟು ಗೋಧಿಯನ್ನು ರಫ್ತು ಮಾಡಿದೆ. ಈ ಬಾರಿಯಂತೂ ಗೋಧಿಯ ಬಂಪರ್ ಬೆಳೆ ಬಂದಿದೆ. ಅಂದರೆ ಕಳೆದ ವರ್ಷ 74 ಲಕ್ಷ ಮಿಲಿಯನ್ ಟನ್ ಉತ್ಪಾದನೆಯಾಗಿದ್ದರೆ ಈ ಬಾರಿ 75 ಲಕ್ಷ ಟನ್ನಿನಷ್ಟು ಉತ್ಪಾದನೆಯಾಗಿದೆ.

ಆದರೆ ವಿದೇಶಿ ಕಂಪನಿಗಳ ದಲ್ಲಾಳಿಗಳಂತಿರುವ ನಮ್ಮ ಸರ್ಕಾರಗಳು ಈ ಬಾರಿ ನಮ್ಮ ರೈತರು ಬೆಳೆದ ಬೆಳೆಗೆ ಸೂಕ್ತ ದರವನ್ನು ಕೊಡಲೇ ಇಲ್ಲ. ಒಂದು ಕ್ವಿಂಟಾಲ್ ಗೋಧಿಗೆ ಭಾರತೀಯ ರೈತರು ಕೇಳಿದ್ದು ಕೇವಲ 700-800 ರೂಪಾಯಿ. ಅಷ್ಟು ದರವನ್ನು ಕೊಡಲು ಸಹಾ ಸರ್ಕಾರ ನಿರಾಕರಿಸಿತು. ಹೀಗಾಗಿ ಈ ಬಾರಿ ಎಫ್‌ಸಿಐ ಗೋದಾಮುಗಳಲ್ಲಿ ಗೋಧಿ ದಾಸ್ತಾನು ಗಣನೀಯವಾಗಿ ಕಡಿಮೆ ಆಗಿದೆ. ಇದರಿಂದಾಗಿ ಬಡವರಿಗೆ ಪಡಿತರದಲ್ಲಿ ಅಗ್ಗದ ದರದಲ್ಲಿ ಗೋಧಿ ನೀಡಲು ಸಹ ಗೋಧಿ ಇಲ್ಲದಂತಾಗುತ್ತದೆ. ಸರಿ ಸರ್ಕಾರದ ಬಳಿ ಹಣವಿಲ್ಲ ಎಂದರೆ ಏನು ಮಾಡಲು ಆಗುತ್ತದೆ ಎಂದೆನಿಸಬಹುದು. ಆದರೆ ಈ ದೇಶದ ಆಳುವ ಜನ ಎಷ್ಟು ನಿರ್ಲಜ್ಜವಾಗಿ ವಿದೇಶಿ ಕಂಪನಿಗಳ ದಲ್ಲಾಳಿತನಕ್ಕೆ ಇಳಿದಿವೆಯೆನ್ನುವುದಕ್ಕೆ ಇತ್ತೀಚೆಗೆ ಸರ್ಕಾರವು ತೆಗೆದುಕೊಂಡ ಗೋಧಿ ಆಮದು ನೀತಿಯೇ ಒಂದು ಉದಾಹರಣೆ.


ಈಗಾಗಲೇ ನಾವು ನೋಡಿದಂತೆ ಈ ಬಾರಿ ಭಾರತದ ರೈತರು ಬಂಪರ್ ಗೋಧಿ ಬೆಳೆಯನ್ನು ಬೆಳೆದಿದ್ದಾರೆ. 75 ಮಿಲಿಯನ್ ಟನ್ನಿನಷ್ಟು. ಇದರಲ್ಲಿ ನಮ್ಮ ಸ್ಥಳೀಯ ಬಳಕೆಗೆ ಬೇಕಾಗುವುದು ಕೇವಲ 72 ಮಿಲಿಯನ್ ಟನ್ನಿನಷ್ಟು ಮಾತ್ರ. ಅಂದರೆ 3 ಮಿಲಿಯನ್ ಟನ್ನಿನಷ್ಟು ಗೋಧಿ ಅಧಿಕವಾಗಿಯೇ ಉತ್ಪಾದನೆಯಾಗಿದೆ. ಅಂದಮೇಲೆ ವಿದೇಶದಿಂದ ಗೋಧಿಯ ಆಮದಿನ ಅಗತ್ಯವಿಲ್ಲವೆಂದು ತಾನೆ ಅರ್ಥ? ಭಾರತ ಸರ್ಕಾರದ ಪ್ರಕಾರ ಇಲ್ಲ. ಹೀಗಾಗಿ ಸರ್ಕಾರ 8 ಲಕ್ಷ ಟನ್ನಿನಷ್ಟು ಗೋಧಿಯನ್ನು ವಿದೇಶದಿಂದ ಆಮದು ಮಾಡಿಕೊಳ್ಳಲು ನಿರ್ಧರಿಸಿದೆ. ಕಾರಣ, ಈ ಬಾರಿ ರೈತರು ತಮ್ಮ ಗೋಧಿಯನ್ನು ಸರ್ಕಾರಕ್ಕೆ ಮಾರಿಲ್ಲ. ಹೀಗಾಗಿ ಸರ್ಕಾರದ ಗೋದಾಮುಗಳಲ್ಲಿ ಮುನ್ನೆಚ್ಚರಿಕೆಗಾಗಿ ಇರಬೇಕಾದಷ್ಟು ಗೋಧಿ ದಾಸ್ತಾನಿಲ್ಲ. ಆದ್ದರಿಂದ ಗೋಧಿಯನ್ನು ವಿದೇಶದಿಂದ ಆಮದು ಮಾಡಿಕೊಳ್ಳಲಾಗುತ್ತಿದೆ ಎಂಬುದು ಸರ್ಕಾರ ಕೊಡುವ ಕಾರಣ.

ಆದರೆ ಭಾರತದ ರೈತರು ಸರ್ಕಾರಕ್ಕೆ ಗೋಧಿ ಮಾರದಿರಲು ಕಾರಣ ಸರ್ಕಾರ ಕ್ವಿಂಟಾಲಿಗೆ 800 ರೂ. ಕೂಡಾ ಕೊಡಲು ಮುಂದೆ ಬರದಿದ್ದು. ಹಾಗಿದ್ದಲ್ಲಿ ಈಗ ವಿದೇಶದಿಂದ ಆಮದು ಮಾಡಿಕೊಳ್ಳುತ್ತಿರುವ ಗೋಧಿಯ ಬೆಲೆ ಅದಕ್ಕಿಂತ ಕಡಿಮೆ ಇರಬೇಕಲ್ಲವೇ?

ಇಲ್ಲ, ಅದೂ ಸಹ ತಪ್ಪು ತಿಳವಳಿಕೆ!! ಭಾರತದ ರೈತರಿಗೆ ಕ್ವಿಂಟಾಲಿಗೆ 800 ರೂ. ಕೊಡಲು ಕೂಡಾ ಸಿದ್ಧವಿಲ್ಲದ ಸರ್ಕಾರ ವಿದೇಶಗಳಿಂದ ಯಾವ ದರಕ್ಕೆ ಆಮದು ಮಾಡಿಕೊಳ್ಳಲು ಒಪ್ಪಂದ ಮಾಡಿಕೊಳ್ಳಲು ಸಿದ್ಧವಾಗಿದೆ ಗೊತ್ತೆ? ಕ್ವಿಂಟಾಲಿಗೆ 1650 ರೂ. ದರದಲ್ಲಿ!! ಅಂದರೆ ಭಾರತದ ರೈತರು ಕೇಳಿದ್ದ ದರದ ದುಪ್ಪಟ್ಟು ದರದಲ್ಲಿ. ಅಂದರೆ ಭಾರತದ ರೈತರು ಕೇಳಿದ್ದ ದರವನ್ನು ಕೊಟ್ಟಿದ್ದರೆ 8 ಲಕ್ಷ ಟನ್ನಿಗೆ ಬದಲು 16 ಲಕ್ಷ ಟನ್ನಿನಷ್ಟು ಗೋಧಿ ದಾಸ್ತಾನಾಗುತ್ತಿತ್ತು. ಇದರಿಂದ ಭಾರತದ ರೈತರಿಗೂ ಉಪಯೋಗವಾಗುತ್ತಿತ್ತು ಹಾಗೂ ಬಡವರಿಗೂ ಕಡಿಮೆ ದರದಲ್ಲಿ ಗೋಧಿ ದೊರೆಯುತ್ತಿತ್ತು. ಈಗ ಇದರಿಂದ ಭಾರತದ ರೈತರಿಗೂ ಲಾಭವಿಲ್ಲ, ಹಾಗೂ ಇಷ್ಟು ದುಬಾರಿ ಗೋಧಿಯನ್ನು ಅಗ್ಗದ ದರದಲ್ಲಿ ಮಾರುವಷ್ಟು ಆಹಾರ ಸಬ್ಸಿಡಿಯನ್ನು ಸರ್ಕಾರ ಕೊಡಲಾಗುವುದಿಲ್ಲವಾದ್ದರಿಂದ ಪಡಿತರದಲ್ಲೂ ಗೋಧಿಯ ಬೆಲೆ ಜಾಸ್ತಿಯಾಗಿ ಬಡಜನತೆಯ ಮೇಲೆಯೇ ಇನ್ನಷ್ಟು ಹೊರೆ ಬೀಳುತ್ತದೆ. ಇದರಿಂದಾಗಿ ಬಡವರ ಆಹಾರ ಬಳಕೆಯೂ ಕಡಿಮೆಯಾಗುತ್ತದೆ.

ಹಾಗಿದ್ದಲ್ಲಿ ಈ ಆಮದಿನಿಂದ ಯಾರಿಗೆ ಲಾಭ?

ಇದರ ಸಂಪೂರ್ಣ ಲಾಭ ಪಡೆಯುತ್ತಿರುವುದು ಭಾರತದಂತಹ ಬಡದೇಶಗಳಿಗೆ ತಮ್ಮ ಕಳಪೆ ಗೋಧಿಯನ್ನು ಅತ್ಯಧಿಕ ಲಾಭಕ್ಕೆ ಮಾರಿಕೊಳ್ಳುವ ವಿದೇಶಿ ಬಹುರಾಷ್ಟ್ರೀಯ ಕಂಪನಿಗಳು. ಈ 8 ಲಕ್ಷ ಟನ್ನಿನಷ್ಟು ಗೋಧಿ ಆಮದಿನ ಕಾಂಟ್ರಾಕ್ಟನ್ನು ಭಾರತ ಸರ್ಕಾರ ಅಮೆರಿಕದ ADM ಮತ್ತು CARGILL, ಜರ್ಮನಿಯ TOEFER ಹಾಗೂ ಆಸ್ಟ್ರೇಲಿಯಾದ CONCO RDIA ಎಂಬ ಬಹುರಾಷ್ಟ್ರೀಯ ವಾಣಿಜ್ಯ ಕಂಪನಿಗಳಿಗೆ ಪ್ರಧಾನವಾಗಿ ವಹಿಸಿದೆ. ಇವೆಲ್ಲವೂ ಈ ವಹಿವಾಟನಲ್ಲಿರುವ ದೈತ್ಯ ಸಂಸ್ಥೆಗಳಾಗಿದ್ದು ಒಬ್ಬೊಬ್ಬರ ವಾರ್ಷಿಕ ವಹಿವಾಟು ಹಲವಾರು ಬಡದೇಶಗಳ ಒಟ್ಟಾರೆ ವಾರ್ಷಿಕ ಆದಾಯಕ್ಕಿಂತ ಜಾಸ್ತಿ. ಹಾಗೂ ಅವು ಅಷ್ಟೊಂದು ಕೊಬ್ಬಿರುವುದಕ್ಕೆ ಕಾರಣವೂ ಸಹ ಭಾರತದಂತಹ ಬಡ ದೇಶದ ದಲ್ಲಾಳಿ ಆಳುವ ವರ್ಗಗಳು ತಮ್ಮ ಲಾಭಕ್ಕಾಗಿ ದುಬಾರಿ ದರದಲ್ಲಿ ಅವರ ದಾಸ್ತಾನನ್ನು ಕೊಂಡುಕೊಂಡು ಅವರು ಬೇರೆ ಎಲ್ಲೂ ಪಡೆಯಲಾಗದಷ್ಟು ಲಾಭವನ್ನು ನೀಡಿರುವುದೇ ಆಗಿದೆ. ವಿಶ್ವ ಮಾರುಕಟ್ಟೆಯಲ್ಲಿ ಒಂದು ಬುಷೆಲ್ ಗೋಧಿಗೆ 9 ಡಾಲರಿಗಿಂತ ಕಡಿಮೆ ದರವಿದೆ. 2006ರಲ್ಲಿ ಅದು ಕೇವಲ 4 ಡಾಲರ್ ಇತ್ತು. ಹಾಗಿದ್ದರೂ ಭಾರತ ಅಂತರಾಷ್ಟ್ರೀಯ ಮಾರುಕಟ್ಟೆ ದರಕ್ಕಿಂತ ಒಂದೂವರೆ ಡಾಲರ್ ಹೆಚ್ಚು ಅಂದರೆ 10.5 ಡಾಲರ್ ಕೊಟ್ಟು ಗೋಧಿ ಖರೀದಿ ಮಾಡುತ್ತಿದೆ. ಅಂದರೆ ನಮ್ಮ ರೈತರಿಗೆ ಹೋರಾಡಿದರೂ ಮಾರುಕಟ್ಟೆ ದರ ಕೊಡಲು ನಿರಾಕರಿಸಿದ ಸರಕಾರ ವಿದೇಶಿ ಕಂಪೆನಿಗಳಿಗೆ ತಾನಾಗಿಯೇ ಹೆಚ್ಚು ದರ ಕೊಟ್ಟು ಖರೀದಿಸುತ್ತಿದೆ.



ಅಲ್ಲದೆ ಈಗ ಭಾರತಕ್ಕೆ 8 ಲಕ್ಷ ಟನ್ ಗೋಧಿ ಆಮದಿನ ಅಗತ್ಯವೇ ಇರಲಿಲ್ಲ. ಭಾರತದಲ್ಲಿ ಮಾತ್ರವಲ್ಲ, ಪ್ರಪಂಚದಲ್ಲೇ ಉತ್ತಮ ಗೋಧಿ ಬೆಳೆ ಬಂದಿರುವುದರಿಂದ ಈ ಬಹುರಾಷ್ಟ್ರೀಯ ಕೃಷಿ ವಾಣಿಜ್ಯ ಕಂಪನಿಗಳ ವ್ಯಾಪಾರಕ್ಕೆ ದೊಡ್ಡ ಅಡಚಣೆಯುಂಟಾಗಿದೆ. ಹೀಗಾಗಿ ಅವರು ಕೃತಕ ಅಭಾವ ಅಥವಾ ಬೇಡಿಕೆಗಳನ್ನು ಸೃಷ್ಟಿಸಿ ಮಾರುಕಟ್ಟೆ ಪಡೆದುಕೊಳ್ಳಲು ಯತ್ನಿಸುತ್ತಿದ್ದಾರೆ. ಭಾರತಕ್ಕೆ ಅವರು ಸರಬರಾಜು ಮಾಡುವ ಕಾಂಟ್ರಾಕ್ಟಿನ ಮೊತ್ತ 1320 ಕೋಟಿ ರೂಪಾಯಿಗಳು. ಅಷ್ಟು ಹಣವನ್ನು ಭಾರತ ಸರ್ಕಾರ ಅಂದರೆ ಚುಕ್ಕಾಣಿ ಹಿಡಿದಿರುವ ಪಕ್ಷಗಳು ಮತ್ತು ಅದನ್ನು ವಿರೋಧಿಸದ ವಿರೋಧ ಪಕ್ಷಗಳು ತಮ್ಮ ದಲ್ಲಾಳಿತನದಿಂದಾಗಿ ಬಹುರಾಷ್ಟ್ರೀಯ ಕಂಪನಿಗಳ ಪರಭಾರೆ ಮಾಡುತ್ತಿವೆ. ಇದೇ ಹಣ ಆತ್ಮಹತ್ಯೆ ಮಾಡಿಕೊಳ್ಳುವಂತಹ ಬಿಕ್ಕಟ್ಟಿನಲ್ಲಿರುವ ಭಾರತದ ರೈತನಿಗೆ ದಕ್ಕಿದ್ದರೆ ರೈತ ಉಳಿಯುತ್ತಿದ್ದ. ಮಾತ್ರವಲ್ಲ ಅಷ್ಟು ಹಣ ಭಾರತದ ಆರ್ಥಿಕತೆಯಲ್ಲೇ ಪುನರ್ ಹೂಡಿಕೆಯಾಗುತ್ತಿತ್ತು.

ಈಗ ವಿದೇಶಿ ಲಾಭಕೋರರಿಗೆ ಕೊಡುತ್ತಿರುವ 1320 ಕೋಟಿ ರೂಪಾಯಿಗಳೆಂದರೆ ಎಷ್ಟು?

ಇದು ಈ ಬಾರಿ ಸರ್ಕಾರವು ಸಣ್ಣ ಹಾಗೂ ಅತಿ ಸಣ್ಣ ರೈತರಿಗೆಂದು ವೆಚ್ಚ ಮಾಡುತ್ತಿರುವ ಮೂರನೇ ಒಂದು ಭಾಗದಷ್ಟು! ಅಷ್ಟು ಮಾತ್ರವಲ್ಲ, ಇಷ್ಟು ಹಣದಿಂದ ದೇಶದ ಎಲ್ಲಾ ಬಡ ರೈತ ಮತ್ತು ಕೂಲಿಗಳಿಗೆ ಬಡತನ ರೇಖೆಯ ಕೆಳಗೆ/ಮೇಲೆ ಎಂಬ ತಾರತಮ್ಯ ಮಾಡದಂತೆ ಎಲ್ಲರಿಗೂ ಹೊಟ್ಟೆ ತುಂಬುವಷ್ಟು ಆಹಾರ ಧಾನ್ಯ ಸರಬರಾಜು ಮಾಡಬಹುದು. ಏಕೆಂದರೆ ಈ ಬಾಬತ್ತಿಗೆ ರಾಜ್ಯ ಸರ್ಕಾರ ಖರ್ಚು ಮಾಡುತ್ತಿರುವುದು ಕೇವಲ 2000 ಕೋಟಿ ಮಾತ್ರ. ಅಂದರೆ ವಿದೇಶಿ ಕಂಪನಿಗಳಿಗೆ ಕೊಡುತ್ತಿರುವ ಈ ಹಣ ಉಳಿದರೆ ಇನ್ನೂ ಶೇ.50 ರಷ್ಟು ಬಡವರಿಗೆ ಅಗ್ಗದ ದರದಲ್ಲಿ ಆಹಾರ ಸರಬರಾಜು ಮಾಡಬಹುದು. 1320 ಕೋಟಿ ರೂ.ಗಳೆಂದರೆ ರೈತರ ಆತ್ಮಹತ್ಯೆ ತಡೆಯಲು ಈ ಬಾರಿ ನಮ್ಮ ರಾಜ್ಯ ಸರ್ಕಾರವು ರೂಪಿಸಿರುವ ಯೋಜನೆಗಳ ಎರಡು ಪಟ್ಟು. ಅಂದರೆ ಆ ಹಣ ಉಳಿದರೆ ಆತ್ಮಹತ್ಯೆ ತಡೆಗಟ್ಟುವ ಯೋಜನೆಗಳನ್ನು ಎರಡು ಪಟ್ಟು ಹೆಚ್ಚು ಮಾಡಬಹುದು ಎಂದರ್ಥ.

ಅಂದರೆ ಭಾರತದ ಬಡಜನತೆಗೆ ಮತ್ತು ಬಡ ರೈತರಿಗೆ ದಕ್ಕಬೇಕಾಗಿರುವ ಮತ್ತು ಹಕ್ಕಾಗಿರುವ ಹಣವನ್ನು ವಿದೇಶಿ ಕಂಪನಿಗಳು ದೋಚಲು ನಮ್ಮ ದಲ್ಲಾಳಿ ಸರ್ಕಾರಗಳೇ ಅವಕಾಶ ಮಾಡುತ್ತಿರುವುದರಿಂದಲೇ ಭಾರತೀಯರ ಬಡತನ ಮತ್ತು ರೈತರ ಆತ್ಮಹತ್ಯೆಗಳು ಹೆಚ್ಚಾಗುತ್ತಿದೆ ಎಂದರ್ಥ.

ಅಷ್ಟು ಮಾತ್ರವಲ್ಲ, ಈ ವಿದೇಶಿ ಕಂಪನಿಗಳು ಸರಬರಾಜು ಮಾಡುವ ಗೋಧಿಯೂ ಸಹ ಅತ್ಯಂತ ಕಳಪೆ ಮಟ್ಟದ್ದು. ಈ ಹಿಂದೆಯೂ ನಮ್ಮ ಸರ್ಕಾರಗಳು ವಿದೇಶಗಳಲ್ಲಿ ಪರವಾನಗಿಯಿರುವ ಪ್ರಮಾಣಕ್ಕಿಂತ 50 ಪಟ್ಟು ಜಾಸ್ತಿ ಕ್ರಿಮಿನಾಶಕ ಅಂಶಗಳನ್ನು ಹೊಂದಿರುವ ಗೋಧಿಯನ್ನು ಆಮದು ಮಾಡಿಕೊಂಡಿದ್ದವು. 1950ರ ದಶಕದಲ್ಲಿ ಅಮೆರಿಕದಿಂದ ಕಳಪೆ ಅಂಶಗಳುಳ್ಳ ಗೋಧಿಯನ್ನು ಆಮದು ಮಾಡಿಕೊಂಡಿದ್ದರಿಂದಲೇ ಭಾರತದಲ್ಲಿ ಪಾರ್ಥೇನಿಯಂ ಮತ್ತು ಲಂಟಾನ ಕಳೆಗಳು ದೇಶಾದ್ಯಂತ ಹಬ್ಬಿದವು. ಅದೇ ರೀತಿ 1996ರಲ್ಲಿ ನಿಯಮಗಳನ್ನು ಸಡಿಲಿಸಿ ಆಸ್ಟ್ರೇಲಿಯಾದಿಂದ ಗೋಧಿ ಆಮದು ಮಾಡಿಕೊಂಡಿದ್ದರಿಂದ ಅದರ ಜೊತೆಗೆ 44 ಕಳೆಗಳು, 8 ಫಂಗೈಗಳು ಮತ್ತು 3 ವೈರಸ್‌ಗಳೂ ಭಾರತಕ್ಕೆ ಬಂದವು.

ಈಗ ಯಾವ ದೇಶಗಳು ಸಡಿಲಿಸಿದಷ್ಟು ಮಟ್ಟಿಗೆ ಆಮದು ಮಾಡಿಕೊಳ್ಳುವ ಗೋಧಿಯ ಗುಣಮಟ್ಟದ ನಿಯಮವನ್ನು ಸಡಿಲಿಸಿರುವುದರಿಂದ ಬರಲಿರುವ ಗೋಧಿ ಅಪಾರ ಪ್ರಮಾಣದ ವೈರಸ್‌ಗಳನ್ನೂ ತರುತ್ತದೆ. ಇದರ ಜೊತೆಗೆ ಈ ಪ್ರಮಾಣದಲ್ಲಿ ನಿಯಮಗಳನ್ನು ಸಡಿಲಿಸಿರುವುದರ ಹಿಂದೆ ಅಮೆರಿಕ ನಡೆಸುತ್ತಿರುವ ಹುನ್ನಾರವೂ ಇದೆ. ಈವರೆಗೆ ಭಾರತದ ಗೋಧಿ ಆಮದು ವ್ಯವಹಾರದಲ್ಲಿ ಅಮೆರಿಕ ಭಾಗವಹಿಸಿರಲಿಲ್ಲ. ಏಕೆಂದರೆ ಭಾರತ ನಿಗದಿಪಡಿಸಿದ ಗುಣಮಟ್ಟವನ್ನು ಅಮೆರಿಕ ಕಾಯ್ದುಕೊಳ್ಳುವಂತಿರಲಿಲ್ಲ. ಈಗ ಈ ಗುಣಮಟ್ಟವನ್ನು ಸರ್ಕಾರವೇ ಕೆಳಗಿಳಿಸಿರುವುದರಿಂದ ಅಧಿಕೃತವಾಗಿ ಅಮೆರಿಕವೂ ದೊಡ್ಡಮಟ್ಟದಲ್ಲಿ ಆಮದಿನ ಲಾಭವನ್ನು ಪಡೆಯಲಿದೆ. ವಾಸ್ತವವಾಗಿ 8 ಲಕ್ಷ ಟನ್ನಿನಲ್ಲಿ 4 ಲಕ್ಷ ಟನ್ನಿನಷ್ಟು ಗೋಧಿಯನ್ನು ಅಮೆರಿಕದ ADM ಮತ್ತು CARGILL ಕಂಪನಿಗಳೆ ಸರಬರಾಜು ಮಾಡಲಿವೆ.

ಅಂದರೆ ಭಾರತದ ರೈತನನ್ನು ಬಲಿಪಶು ಮಾಡಿ ಭಾರತದ ಗ್ರಾಹಕನಿಗೆ ಕಳಪೆ ಗುಣಮಟ್ಟದ ಗೋಧಿಯನ್ನು ದುಬಾರಿ ದರದಲ್ಲಿ ಸರ್ಕಾರ ಪೂರೈಸಲಿದೆ ಮತ್ತು ಇವೆಲ್ಲವನ್ನೂ ವಿದೇಶಿ ಕಂಪನಿಗಳ ಲಾಭದ ದರವನ್ನು ಜಾಸ್ತಿ ಮಾಡಲು ಮತ್ತು ಅವರಿಗೆ ಮಾರುಕಟ್ಟೆ ಒದಗಿಸಲು ಮಾಡಲಾಗುತ್ತಿದೆ. ಇಂತಹ ದೇಶವನ್ನು ಸ್ವತಂತ್ರ ದೇಶವೆಂದು ಕರೆಯಲಾದೀತೆ? ಅಥವಾ ಭಾರತ ದೇಶವು ವಿದೇಶಿ ಕಂಪನಿಗಳ ನವವಸಾಹತು ಆಗಿದೆ ಯೆನ್ನಬೇಕೆ? ಮತ್ತು ಅದಕ್ಕೆ ಕಾರಣ ಯುದ್ಧಗಳೂ ಅಲ್ಲ, ಆಕ್ರಮಣಗಳೂ ಅಲ್ಲ, ನಮ್ಮನ್ನು ಆಳುತ್ತಿರುವ ಆಳುವ ವರ್ಗಗಳ ದೇಶದ್ರೋಹಿ, ಜನದ್ರೋಹಿ ದಲ್ಲಾಳಿತನವೇ ಅಲ್ಲವೇ? ■

No Comments




"ಕುಮಾರಸ್ವಾಮಿಗೆ ಮುಖ್ಯಮಂತ್ರಿ ಪಟ್ಟ ಮುಂದುವರೆಯುವುದಿಲ್ಲ ವೆಂದರೆ ಮಧ್ಯಂತರ ಚುನಾವಣೆ ಖಚಿತ."

-ಮೆರಾಜುದ್ದೀನ್ ಪಟೇಲ್

"ನಾನು ಸ್ವಂತ ಕುದುರೆ ಮೇಲೆ ಸವಾರಿ ಮಾಡುತ್ತಿದ್ದೇನೆ. ಕುಮಾರಸ್ವಾಮಿ ಬೇರೆಯವರು ಸಾಕಿದ ಕುದುರೆ ಮೇಲೆ ಸವಾರಿ ಮಾಡುತ್ತಿದ್ದಾರೆ."

ಸಿದ್ದರಾಮಯ್ಯ



"ಜೆಡಿಎಸ್ ಅನ್ನು ಕಟ್ಟುವುದರಲ್ಲಿ ನನ್ನ ಮತ್ತು ನನ್ನ ಕುಟುಂಬದವರ ಶ್ರಮ ಸಿದ್ದರಾಮಯ್ಯನವರಿಗಿಂತ ಹತ್ತು ಪಟ್ಟು ಹೆಚ್ಚಿದೆ."

-ಕುಮಾರಸ್ವಾಮಿ


"ದೇವೇಗೌಡರು ಪದ್ಮನಾಭನಗರದ ಮೌಂಟ್ ಬ್ಯಾಟನ್."

-ಹೆಚ್. ವಿಶ್ವನಾಥ್

ನಂಬಿದ್ರೆನಂಬಿ ಬಿಟ್ರೆಬಿಡಿ

"ಬೇರೆ ಪಕ್ಷಗಳು ದಲಿತರನ್ನು ಲೆಕ್ಕಕ್ಕೇ ಇಟ್ಟಿಲ್ಲ. ಇಂತಹ ಸ್ಥಿತಿಯಲ್ಲಿ ದೇವೇಗೌಡರು ಕಾರಜೋಳರನ್ನು ಗುರುತಿಸಿರುವುದು ಸ್ವಾಗತಾರ್ಹ."

-ರಮೇಶ್ ಜಿಗಜಿಣಗಿ



"ನನಗೆ ಮಂತ್ರಿಗಿರಿಯೇ ಬೇಸರ ತಂದುಬಿಟ್ಟಿದೆ."

-ಬಸವರಾಜ ಹೊರಟ್ಟಿ

"ಅಣುಬಂಧದ ವಿಷಯದಲ್ಲಿ ಸರ್ಕಾರದ ವಿರುದ್ಧದ ನಮ್ಮ ಹೋರಾಟದಲ್ಲಿ ಬಿಜೆಪಿಯೂ ಬಂದು ಸೇರಲಿ."

-ಪ್ರಕಾಶ್ ಕಾರಟ್



"ನನ್ನ ಮನಸ್ಸು ನಿವೃತ್ತಿಯ ಯೋಚನೆಯನ್ನೇ ಮಾಡಿಲ್ಲ."

-ಸಚಿನ್ ತೆಂಡೂಲ್ಕರ್

"ನಮ್ಮದು ದೇಶದ ನಂ.1 ಜಾತ್ಯತೀತ ಪಕ್ಷ. ಅದಕ್ಕೆ ಬೇರೆಯವರಿಂದ ಸರ್ಟಿಫಿಕೇಟ್ ಬೇಕಿಲ್ಲ."

ವೆಂಕಯ್ಯ ನಾಯ್ಡು

"ಕಳೆದ ಜುಲೈವರೆಗೆ ರೈತರ ಆತ್ಮಹತ್ಯೆ ಹೆಚ್ಚಿರುವ ನಾಲ್ಕು ರಾಜ್ಯಗಳ 31 ಜಿಲ್ಲೆಗಳಿಗಾಗಿ 9000 ಕೋಟಿ ರೂಪಾಯಿಗಳನ್ನು ವೆಚ್ಚ ಮಾಡಲಾಗಿದೆ."

-ಶರದ್ ಪವಾರ್, ಕೇಂದ್ರ ಕೃಷಿ ಮಂತ್ರಿ

ಏಕಿರಬಹುದು?

"ಮಲೆನಾಡು ಶಾಸಕರಿಗೆ ಬೇಡವಾದ ಅಂಗರಕ್ಷಕರು."

ಪತ್ರಿಕಾ ವರದಿ

ಏನದು ಡೀಲ್?

"ನಾವು ಡೀಲ್ ಮಾಡಿಕೊಂಡಿರುವುದು ಕುಮಾರಸ್ವಾಮಿಯವರೊಂದಿಗೆ. ದೇವೇಗೌಡರೊಂದಿಗಲ್ಲ!"

-ವೆಂಕಯ್ಯ ನಾಯ್ಡು

ಆಮರಣಾಂತ ಎಂದರೇನು?



"ಅಕ್ಟೋಬರ್ ವೇಳೆಗೆ ಕನ್ನಡಕ್ಕೆ ಶಾಸ್ತ್ರೀಯ ಭಾಷೆ ಸ್ಥಾನಮಾನ ಸಿಗದಿದ್ದರೆ ಆಮರಣಾಂತ ಉಪವಾಸ ಸತ್ಯಾಗ್ರಹ ಕೂತುಕೊಳ್ಳುತ್ತೇನೆ."

-ದೇಜಗೌ

ಕನ್ನಡ ಸೇನೆ ಕಟ್ಟುವ ಪರಿಯೇ?

"ಭಾರತೀಯ ಸೇನಾವಲಯದಲ್ಲಿ ಕನ್ನಡ ಯೋಧರು ಹೆಚ್ಚಿರುವುದರಿಂದ ಕನ್ನಡದಲ್ಲಿಯೇ ಸೇನಾ ತರಬೇತಿ ಕೇಂದ್ರ ಪ್ರಾರಂಭಿಸಬೇಕು."

-ಸುನಿಲ್ ಗೌಡ, ಸಮರಸೇನೆ

ಸಮಸ್ಯೆ ಮೀನಿನದ್ದೇ?

"ನಮ್ಮ ಹಳ್ಳಿ ಕಡೆ ಮೀನು ಹಿಡಿಯುವಾಗ ಸಣ್ಣ ಮೀನುಗಳು ಬಚಾವಾಗಿ ದೊಡ್ಡ ಮೀನುಗಳು ಸಿಕ್ಕಿಬೀಳುತ್ತವೆ. ಆದರೆ ಇಲ್ಲಿ ಉಲ್ಟಾ! ದೊಡ್ಡ ಮೀನುಗಳು ಬಚಾವಾಗಿ ಸಣ್ಣ ಮೀನುಗಳು ಸಿಗಬೀಳುತ್ತವೆ."

-ಎ.ಟಿ. ರಾಮಸ್ವಾಮಿ, ಭೂಕಬಳಿಕೆ ಸಮಿತಿಯ ಅಧ್ಯಕ್ಷ

ಅರಣ್ಯ ನ್ಯಾಯ

"ಸಲ್ಮಾನ್ ಖಾನ್‌ಗೆ ಜಿಂಕೆ ಸಾಯಿಸಿದ್ದಕ್ಕೆ ಐದು ವರ್ಷ ಶಿಕ್ಷೆ. ಆದರೆ ಮನುಷ್ಯರನ್ನು ಸಾಯಿಸಿದ್ದಕ್ಕೆ ಕೇವಲ ದಂಡ ಕಟ್ಟಿದರೂ ಸಾಕು!"

ವಾರದ ಪ್ರಶ್ನೆ

"ಭಾರತದ ಮಹಿಳಾ ಹಾಕಿ ತಂಡ ಥಾಯ್‌ಲೆಂಡಿನ ವಿರುದ್ಧ 16-0 ಜಯ ಪಡೆದಿದ್ದರೂ ಪತ್ರಿಕೆಗಳು ಏಕೆ ಪ್ರಧಾನವಾಗಿ ಪ್ರಕಟಿಸಲಿಲ್ಲ?"

-ಅನಿತಾ, 'ಚಕ್ ದೆ' ಹಿಂದಿ ಚಿತ್ರದಲ್ಲಿ ಹಾಕಿ ಪಟುವಾಗಿ ನಟಿಸಿದ ನಟಿ

ಮನುಷ್ಯನಿಂದ ಮಾತ್ರ ಆಸಿಡ್ ದಾಳಿ ಎಂಬ ಮೃಗತ್ವ ಸಾಧ್ಯ



ಕಂಡಹಾಗೆ

ಆಕೆಯ ಮುಖ ನೋಡಲಸಾಧ್ಯವಾಗಿತ್ತು. ಕಣ್ಣು, ಮೂಗು, ಬಾಯಿ ಎಲ್ಲವೂ ಸುಟ್ಟು, ಕರಕಲಾಗಿದ್ದ ಮುದ್ದೆಯಂತಾಗಿದ್ದವು. ಆವಳ ಮತ್ತು ಅವಳಂತೆಯೇ ಆಸಿಡ್ ದಾಳಿಗೆ ಬಲಿಯಾದ ಇತರೆ ಮಹಿಳೆಯರನ್ನು ನೆನೆದು ಮನುಷ್ಯನಿಂದ ಮಾತ್ರವೇ ಇಂತಹ ಮೃಗತ್ವ ಸಾಧ್ಯ ಎಂದೆನಿಸಿ ಮನಸ್ಸು ಇನ್ನಷ್ಟು ಹಿಂಡಿತು.

ಪ್ರೀತಿಯ ಹೆಸರಲ್ಲಿ, ತಿರಸ್ಕಾರದ ನೆಪದಲ್ಲಿ, ವರದಕ್ಷಿಣೆ ಎಂಬ ದಾಹದಲ್ಲಿ ಮಹಿಳೆಯರ ಮೇಲೆ ನಡೆಯುವ ಅತ್ಯಾಚಾರಗಳೆಲ್ಲಕ್ಕಿಂತ ಆಸಿಡ್ ದಾಳಿ ತೀರಾ ಕ್ರೂರವಾದದ್ದು. ಅತ್ತ ಸಾವಿನ ಬಿಡುಗಡೆಯೂ ಇಲ್ಲದೆ, ಇತ್ತ ಯಾರೂ ತಮ್ಮತ್ತ ನೋಡದಂತಹ ಬದುಕನ್ನು ಉಳಿಸುವ ಆಸಿಡ್ ದಾಳಿಗಳಲ್ಲಿ ಮಹಿಳೆಯರು ಮಾತ್ರ ಕುರೂಪಗೊಳ್ಳುವುದಿಲ್ಲ, ಬದಲಾಗಿ ನಮ್ಮ ಸಮಾಜವೇ ತನ್ನ ಒಡಲಲ್ಲಿ ಎಷ್ಟು ಕ್ರೌರ್ಯ ಮತ್ತು ಕುರೂಪಿತನವನ್ನು ಹೊಂದಿದೆ ಎಂಬುದನ್ನು ಎತ್ತಿ ತೋರಿಸುತ್ತದೆ.

ವಿಪರ್ಯಾಸ ನೋಡಿ. ನಾಡಿದ್ದು, ಅಂದರೆ ಸೆಪ್ಟೆಂಬರ್ 11 ನ್ನು ಮಹಿಳೆಯರ ಮೇಲಿನ ಹಿಂಸಾ ವಿರೋಧಿ ದಿನವನ್ನಾಗಿ ಆಚರಿಸಲು ಎಲ್ಲೆಡೆ ಸಿದ್ಧತೆಗಳು ನಡೆದಿವೆ. ನಮ್ಮ ಸರ್ಕಾರಗಳು ಮತ್ತು ಹಲವಾರು ಎನ್‌ಜಿಓಗಳು ಇಂತಹ ಬಹಳಷ್ಟು ಸಾಂಕೇತಿಕ ದಿನಗಳನ್ನೂ, ಕಾರ್ಯಕ್ರಮಗಳನ್ನೂ ಆಚರಿಸುತ್ತವೆ. ಆದರೆ ಇವುಗಳಿಂದ ಮಹಿಳೆಯರ ಬದುಕಿನಲ್ಲಿ ಸುಧಾರಣೆಗಳಾಗಿವೆಯೇ? ಈ ಪ್ರಶ್ನೆಗೆ ಹಿನಾ ಫಾತಿಮಾಳ ಸಾವು ಮತ್ತು ಆಸಿಡ್ ದಾಳಿಗಳನ್ನು ಕುರಿತಂತೆ ರಾಜ್ಯ ಸರ್ಕಾರ ಸಾಧಿಸದೇ ಇರುವ ಯೋಜನೆಗಳೇ ಉತ್ತರ.

ಮಹಿಳಾ ದಿನಾಚರಣೆಯಾಗಲಿ, ಮದರ್ಸ್ ಡೆ ಆಗಲಿ, ಮಹಿಳೆಯರ ಮೇಲಿನ ಹಿಂಸಾ ವಿರೋಧಿ ದಿನವಾಗಲಿ, ಇಂತಹ ಯಾವ ದಿನಗಳ ಆಚರಣೆ, ಮಹತ್ವಗಳ ಅರಿವಿಲ್ಲದೆ ಬದುಕಿದ್ದವಳು ಹಿನಾ ಫಾತಿಮಾ. ಬದುಕನ್ನು ಕೇವಲ ಹಿಂಸೆ, ದುಡಿಮೆಗಳ ಹೊರೆಯನ್ನಾಗಿಯಷ್ಟೇ ಅನುಭವಿಸಿದ್ದ ಮೈಸೂರಿನ ಹಿನಾ ಫಾತಿಮಾ ತನ್ನ ದಾಂಪತ್ಯ ಜೀವನದಲ್ಲಿ ಸುಖ, ಸಂತೋಷ, ನೆಮ್ಮದಿಯನ್ನು ಎಂದೂ ಕಂಡಿರಲಿಲ್ಲ.

ಮದುವೆಯಾದಾಗಿನಿಂದಲೂ ವಿಕೃತ ಮನಸ್ಸಿನ ಗಂಡನಿಂದ ಚಿತ್ರವಿಚಿತ್ರವಾದ ಹಿಂಸೆಯನ್ನು ಅನುಭವಿಸಿದ ಫಾತಿಮಾ, ಅದನ್ನು ತಾಳಲಾರದೆ ಅದೆಷ್ಟೋ ಬಾರಿ ಗಂಡನ ಮನೆಯನ್ನು ತೊರೆದು ತವರಿಗೆ ಬಂದಿದ್ದಳು. ಆದರೆ ಆಕೆಯ ಗಂಡನ ವರದಕ್ಷಿಣೆಯ ದಾಹವನ್ನು ತೀರಿಸುವ ಶಕ್ತಿ ಆಕೆಯ ಬಡ ತಂದೆ-ತಾಯಿಗೆ ಇರಲಿಲ್ಲ. ಅವರಲ್ಲಿದ್ದ ಒಂದೇ ಪರಿಹಾರ "ಅದ್ಹೇಗೋ ಗಂಡನೊಂದಿಗೆ ಅನುಸರಿಸಿಕೊಂಡು ಹೋಗು" ಎಂಬ ಉಪದೇಶ ಮಾತ್ರ. ಹಡೆದವರ ಅಸಹಾಯಕತೆ, ಕೈಹಿಡಿದವನ ಹಿಂಸೆ, ಹೆತ್ತ ನಾಲ್ಕು ಪುಟ್ಟ ಮಕ್ಕಳ ಪೋಷಣೆ-ಈ ಮೂರರ ನಡುವೆ ಹೈರಾಣಾದ ಹಿನಾ ಫಾತಿಮಾ ಪ್ರತಿ ಬಾರಿ ಬರಿಗೈಯಲ್ಲಿ ಗಂಡನ ಮನೆಗೆ ಹಿಂದಿರುಗಿ ಆತನ ಹಿಂಸೆಯನ್ನು ಸಹಿಸುತ್ತಾ ಜೀವನ ಸಾಗಿಸಿದ್ದಳು.

ಆದರೆ ಎಲ್ಲ ಪ್ರಾಣಿಸಂಕುಲಗಳನ್ನು ಮೀರಿದ, ಮನುಷ್ಯನ ಕಲ್ಪನೆಗೂ ಸಿಲುಕದ ಕ್ರೌರ್ಯ ಆಕೆಯ ಗಂಡನ ಪೈಶಾಚಿಕ ಮನಸ್ಸಿನಲ್ಲಿ ಹುದುಗಿತ್ತು. ಅದು ಯಾವ ಮಟ್ಟದ್ದು ಎಂದರೆ ಕೊನೆಗೊಂದು ದಿನ ಅವಳಿಗೆ ಬಲವಂತವಾಗಿ ಆಸಿಡ್ ಕುಡಿಸಿ, ಅವಳ ಕಣ್ಣುಗಳನ್ನು ಸಿಗರೇಟಿನಿಂದ ಸುಟ್ಟು, ಅವಳ ಇಡೀ ದೇಹದ ಮೇಲೆ ಆಸಿಡ್ ಸುರಿದು, ಅವಳು ನರಕದಂತಹ ಯಾತನೆಯಿಂದ ನರಳುತ್ತಿದ್ದರೆ ಆಕೆಯ ಪಕ್ಕ ಕೂತು ಕುಡಿಯುತ್ತಾ, ಸಿಗರೇಟ್ ಸೇದುತ್ತಾ ಮಜಾ ಉಡಾಯಿಸುತ್ತಿದ್ದ.

ಹಿನಾ ಫಾತಿಮಾಳ ದೇಹ ಶೇ. 80 ರಷ್ಟು ಸುಟ್ಟಿತ್ತು. ಆಕೆ ಜೀವಂತ ಶವವಾಗಿದ್ದಳು. ಮೊದಲು ಮೈಸೂರಿನ ಸರ್ಕಾರಿ ಆಸ್ಪತ್ರೆ, ಆನಂತರ ಬೆಂಗಳೂರಿನ ವಿಕ್ಟೋರಿಯಾ ಆಸ್ಪತ್ರೆಗಳಿಗೆ ಆಕೆಯನ್ನು ದಾಖಲಿಸಲಾಯಿತು. ಆದರೆ ಅಲ್ಲೂ ಉತ್ತಮ ಚಿಕಿತ್ಸಾ ಸೌಲಭ್ಯಗಳಿಲ್ಲದ ಕಾರಣ 13 ದಿನಗಳ ಕಾಲ ಅದು ಹೇಗೋ ನರಳಾಡುತ್ತಾ 'ಜೀವಂತ' ಇದ್ದ ಹಿನಾ ಫಾತಿಮಾ ಆಗಸ್ಟ್ 21 ರಂದು ಸೋಲನ್ನೊಪ್ಪಿ ಉಸಿರಾಡುವುದನ್ನು ನಿಲ್ಲಿಸಿದಳು.



ಆಸಿಡ್ ದಾಳಿಯಿಂದ ಕೊನೆಯುಸಿರೆಳೆದ ಹಿನಾ ಫಾತಿಮಾಳ ಮನೆಯವರ ರೋದನ

ಇದು ಹಿನಾ ಫಾತಿಮಾಳೊಬ್ಬಳ ಕತೆಯಲ್ಲ. ಕಳೆದ ಹತ್ತು ವರ್ಷಗಳಲ್ಲಿ ನಮ್ಮ ರಾಜ್ಯದಲ್ಲಿ ಆಸಿಡ್ ದಾಳಿಗೆ ಗುರಿಯಾದ ಮಹಿಳೆಯರಲ್ಲಿ ಈಕೆ ಇತ್ತೀಚಿನ ಬಲಿಯಷ್ಟೇ.

ತನ್ನ ಪ್ರೇಮವನ್ನು ತಿರಸ್ಕರಿಸಿದಳು ಎಂದು ಪುಂಡನೊಬ್ಬ ಶೃತಿ ಎಂಬ ಸುಂದರ ಹುಡುಗಿಯ ಮೇಲೆ ಆಸಿಡ್ ಎರಚಿ ಅವಳ ಜೀವನವನ್ನೇ ನಾಶ ಮಾಡಿದ. ಸಾಕಷ್ಟು ವರದಕ್ಷಿಣೆ ತರಲಿಲ್ಲವೆಂದು ಶಾಂತಿಯ ಗಂಡ ಅವಳ ಮೇಲೆ ಆಸಿಡ್ ಎರಚಿದ. ತನ್ನ ಬಾಡಿಗೆ ಮನೆಯಲ್ಲಿ ವಾಸವಿದ್ದ ಡಾ. ಮಹಾಲಕ್ಷ್ಮಿ ತನ್ನೊಂದಿಗೆ ದೈಹಿಕ ಸಂಬಂಧ ಹೊಂದಲು ನಿರಾಕರಿಸಿದಳೆಂದು ಅವಳ ಮೇಲೆ ಇದೇ ಪೈಶಾಚಿಕ ಕೃತ್ಯವನ್ನು ಮನೆಯ ಮಾಲೀಕ ಮಾಡಿದ. ಹೀಗೆ ಕ್ಷುಲ್ಲಕ ಕಾರಣಗಳಿಗೆ ಆಸಿಡ್ ದಾಳಿಗಳಿಗೆ ತುತ್ತಾಗಿರುವ ಮಹಿಳೆಯರ ಸಂಖ್ಯೆ 62. ಆದರಲ್ಲಿ ಸಾವನ್ನಪ್ಪಿದ ಒಂಭತ್ತನೆ ಮಹಿಳೆ ಹಿನಾ ಫಾತಿಮಾ.

ಈ ಎಲ್ಲ ಪ್ರಕರಣಗಳಿಗಿಂತ ಬೆಂಗಳೂರಿನ ಹಸೀನಾ ಪ್ರಕರಣ ಆಸಿಡ್ ದಾಳಿಯೆಂಬ ಘೋರ ಕೃತ್ಯದ ಬಗ್ಗೆ ಸಾರ್ವಜನಿಕರ ಗಮನ ಮತ್ತು ಅನುಕಂಪವನ್ನು ಸೆಳೆದಿತ್ತು. ಸರಿಯಾಗಿ ಒಂದು ವರ್ಷದ ಹಿಂದೆ ಹಸೀನಾಳ ಮೇಲೆ ಆಸಿಡ್ ಎರಚಿದ್ದ ಜೋಸೆಫ್ ರಾಡ್ರಿಗೆಸ್ ಎಂಬ ವಿಕೃತನಿಗೆ ಶಿಕ್ಷೆ ನೀಡುವ ಸಂದರ್ಭದಲ್ಲಿ ರಾಜ್ಯದ ಹೈಕೋರ್ಟ್ ಮಹತ್ವದ ತೀರ್ಪನ್ನು ನೀಡುತ್ತಾ "ಕೂಡಲೇ ಸರ್ಕಾರ ಈ ವಿಚಾರದಲ್ಲಿ ಮಧ್ಯ ಪ್ರವೇಶಿಸಬೇಕು" ಎಂದು ಆದೇಶಿಸಿತ್ತು. ಆ ತೀರ್ಪು ಹೊರಬಿದ್ದ ಒಂದು ವರ್ಷದಲ್ಲಿ ಇನ್ನೂ ನಾಲ್ಕು ಹೆಣ್ಣುಮಕ್ಕಳು ಆಸಿಡ್ ದಾಳಿಗೆ ತುತ್ತಾಗಿದ್ದಾರೆ.

ಇವತ್ತು ಸಾಮಾಜಿಕ ಪಿಡುಗಿನ ಮಟ್ಟಕ್ಕೆ ವೇಗವಾಗಿ ಬೆಳೆಯುತ್ತಿರುವ ಹಿಂಸೆಯ ಈ ಭಯಾನಕ ರೂಪವನ್ನು ತಡೆಗಟ್ಟಲು ಕರ್ನಾಟಕದಲ್ಲಿ ಹಲವಾರು ಪ್ರಯತ್ನಗಳು ನಡೆಯುತ್ತಿವೆ. ಹಲವು ಮಹಿಳಾ ಸಂಘಟನೆಗಳು, ಮಾನವಹಕ್ಕುಗಳ ಪ್ರತಿಪಾದಕರು ಮತ್ತು ಕಾಳಜಿಯುಳ್ಳ ವ್ಯಕ್ತಿಗಳು ಜೊತೆಗೂಡಿ 'ಮಹಿಳೆಯರ ಮೇಲಿನ ಆಸಿಡ್ ದಾಳಿ ವಿರೋಧಿ ಪ್ರಚಾರಾಂದೋಲನ ಮತ್ತು ಹೋರಾಟ' (CSAAAW) ಎಂಬ ಒಕ್ಕೂಟವನ್ನು ರಚಿಸಿಕೊಂಡ ಆ ನಿಟ್ಟಿನಲ್ಲಿ ಕಾರ್ಯಪ್ರವೃತ್ತರಾಗಿದ್ದಾರೆ. ಇವರ ಹೋರಾಟದಿಂದಾಗಿ ನ್ಯಾಯಾಲಯಗಳು, ಸರ್ಕಾರ, ಅದರ ಅಂಗಸಂಸ್ಥೆಗಳಾದ ಪೊಲೀಸ್ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಮಹಿಳಾ ಆಯೋಗ ಮುಂತಾದವು ಈ ಪಿಡುಗಿನತ್ತ ಗಮನಹರಿಸುವಂತಾಗಿದೆ. ಇದೆಲ್ಲಕ್ಕಿಂತ ಮಾಧ್ಯಮಗಳು ಕೂಡ ಈ ವಿಷಯದಲ್ಲಿ ತಮ್ಮ ಎಂದಿನ ಡೋಂಟ್‌ಕೇರ್ ನಿಲುವನ್ನು ತೊರೆದು ಸ್ಪಂದಿಸಿರುವುದರಿಂದ ಇಂತಹ ಕೃತ್ಯಗಳ ವಿರುದ್ಧ ಸಾಕಷ್ಟು ಪ್ರಚಾರ ಸಿಕ್ಕಿದೆ.

ಈ ಮಧ್ಯೆ, ಒಂದೆಡೆ ಸಾಮಾಜಿಕ ಸಂಘಟನೆಗಳ ಒತ್ತಡ, ಮತ್ತೊಂದೆಡೆ ಹೈಕೋರ್ಟ್ ಆದೇಶದಿಂದಾಗಿ ಅನಿವಾರ್ಯವಾಗಿ ಸರ್ಕಾರ ಏನಾದರೂ ಮಾಡಬೇಕಿತ್ತು. ಆದ್ದರಿಂದ 2007 ರ ಆರಂಭದಲ್ಲಿ ಆಸಿಡ್ ದಾಳಿಗೊಳಗಾದ ಮಹಿಳೆಯರ ಪರಿಹಾರ ಮತ್ತು ಪುನರ್ವಸತಿಗಾಗಿ ಒಂದು ಕೋಟಿ ರೂಪಾಯಿಗಳನ್ನು ಹಾಗೂ ಕೆಲ ಯೋಜನೆಗಳನ್ನೊಳಗೊಂಡ ಪ್ಯಾಕೇಜ್ ಅನ್ನು ಸರ್ಕಾರ ಘೋಷಿಸಿತು. ಹಸು ಸಾಕಣೆಗಾಗಿ, ಯಾವುದೋ ಹೋಮ-ಹವನ ಮಾಡುವುದಕ್ಕಾಗಿ, ಪೂಜೆ-ಪುರಸ್ಕಾರಗಳಲ್ಲಿ ತೊಡಗುವುದಕ್ಕಾಗಿ ಮಠ ಮಾನ್ಯಗಳಿಗೆ ಎರಡೆರಡು ಕೋಟಿ ರೂಪಾಯಿಗಳನ್ನು ದಾನ ಮಾಡುವ ಸರ್ಕಾರ, ಆಸಿಡ್ ದಾಳಿಗೆ ತುತ್ತಾದ ಎಲ್ಲಾ ಮಹಿಳೆಯರಿಗೆಂದು ಎತ್ತಿಟ್ಟಿದ್ದು ಕೇವಲ ಒಂದು ಕೋಟಿ ರೂಪಾಯಿ. ಆಸಿಡ್ ಎಸೆದವರ ವಿಕೃತ ಮನಸ್ಸಿಗೂ, ಸರ್ಕಾರದ ಈ ಜುಗ್ಗತನಕ್ಕೂ ತುಂಬಾ ವ್ಯತ್ಯಾಸಗಳಿಲ್ಲ ಅನ್ನಿಸುತ್ತೆ.

ಅದೇನೇ ಇರಲಿ, ಹೀಗೊಂದು ಯೋಜನೆ ಮತ್ತು ಪ್ಯಾಕೇಜನ್ನು ಘೋಷಿಸಿದ ಸರ್ಕಾರ ಅದರ ಒಟ್ಟಾರೆ ನಿರ್ವಹಣೆಗೆ ಒಂದು ಸಮಿತಿಯನ್ನು ರಚಿಸಿತು. ಆ ಸಮಿತಿಯು CSAAAW ಸಹಾಯದೊಂದಿಗೆ ರಾಜ್ಯಾದ್ಯಂತ ಆಸಿಡ್ ದಾಳಿಗೆ ತುತ್ತಾದವರ ಸರ್ವೆಯೊಂದನ್ನು ನಡೆಸಿತು. ಅಷ್ಟೇ! ಅದಾದನಂತರ ಇವತ್ತಿನವರೆಗೂ ಆ ಪ್ಯಾಕೇಜಿನಿಂದ ದಾಳಿಗೊಳಗಾದ ಮಹಿಳೆಯರಿಗೆ ಯಾವ ಪ್ರಯೋಜನವೂ ಆಗಿಲ್ಲ; ಇನ್ನು ಮುಂದಾದರೂ ಇಂತಹ ದಾಳಿಗಳನ್ನು ತಡೆಯುವುದಕ್ಕೆ ಸರ್ಕಾರದ ಯಾವ ಕ್ರಮಗಳನ್ನೂ ತೆಗೆದುಕೊಳ್ಳುವ ಸೂಚನೆಗಳೂ ಕಂಡುಬರುತ್ತಿಲ್ಲ.

ಇನ್ನು ಮುಂದಾದರೂ ಇನ್ನೆಷ್ಟು ಮಹಿಳೆಯರು ಆಸಿಡ್ ದಾಳಿ ಎಂಬ ಭೀಕರ ಕೃತ್ಯಕ್ಕೆ ಬಲಿಯಾಗದಂತೆ ಸರ್ಕಾರ ಹಲವು ಕ್ರಮಗಳನ್ನು ತೆಗೆದುಕೊಳ್ಳಬೇಕಿದೆ. ಸುಲಭವಾಗಿ ಲಭ್ಯವಿರುವ ಆಸಿಡ್ ಮಾರಾಟವನ್ನು ನಿಯಂತ್ರಿಸುವುದು, ಆಸಿಡ್ ದಾಳಿ ನಡೆಸಿದವರಿಗೆ ಶಿಕ್ಷೆಯನ್ನು ಹೆಚ್ಚಿಸುವುದು, ಟೀವಿ-ಸಿನಿಮಾಗಳಲ್ಲಿ ಆಸಿಡ್ ದಾಳಿಯ ಚಿತ್ರೀಕರಣವನ್ನು ನಿಷೇಧಿಸುವುದು, ಪರಿಹಾರ ಪ್ಯಾಕೇಜನ್ನು ಹೆಚ್ಚಿಸಿ ಅದು ಇಂತಹ ದಾಳಿಗಳಿಗೆ ತುತ್ತಾದವರಿಗೆ ತಲುಪುವಂತೆ ನೋಡಿಕೊಳ್ಳುವುದು... ಇವೆಲ್ಲ ಕಷ್ಟದ ಕೆಲಸಗಳೇನಲ್ಲ, ಇಷ್ಟನ್ನು ಮಾಡಿದರೆ ಅದೆಷ್ಟೋ ಮಹಿಳೆಯರ ಬದುಕನ್ನು ರಕ್ಷಿಸಲು ಸಾಧ್ಯ.


ಬೀದರಿನ ವಿದ್ಯಾವತಿ, ಕೊಳ್ಳೇಗಾಲದ ನಿರ್ಮಲಾ, ಮೈಸೂರಿನ ಶಾಂತಿ, ಗದಗಿನ ತಾರಾ, ಬೆಂಗಳೂರಿನ ಹೇಮಾವತಿ, ಹಸೀನಾ, ಶೃತಿ ಮತ್ತು ಮೊನ್ನೆ ತೀರಿಕೊಂಡ ಹಿನಾ ಫಾತಿಮಾ ಎಂಬ ಮಹಿಳೆಯರ ಕಣ್ಣೀರಿಗೆ ಸಂಕಷ್ಟಗಳಿಗೆ ಇಷ್ಟನ್ನೂ ಮಾಡದಿದ್ದರೆ ಹೇಗೆ....

-ಗೌರಿ ಲಂಕೇಶ್

ಮುಂದಿನ ಟಾರ್ಗೆಟ್ ರಾಮಲಿಂಗಾರೆಡ್ಡಿ!

ರವಿಪೂಜಾರಿಗೆ 2 ಕೋಟಿ?


ಸದ್ಯ ಬೆಂಗಳೂರು ಪೊಲೀಸರ ಮಟ್ಟಿಗೆ ಇದೇ ಅಪಾಯಕಾರಿ ತಂಡ. ಹಾಗೊಮ್ಮೆ ಸಮೀ ಕೈಗೆ ಸಿಗಲೇ ಇಲ್ಲವೆಂದರೆ ಇನ್ನೊಬ್ಬ ಬಿಲ್ಡರ್ ಸಿಕ್ಕೇ ಸಿಗುತ್ತಾನೆ. ಅಥವಾ ಆತನ ಗಾಡ್‌ಫಾದರ್ ರಾಮಲಿಂಗಾರೆಡ್ಡಿಗೇ ಥ್ರೆಟ್ ಕೊಟ್ಟರೆ ದುಡ್ಡು ಹುಟ್ಟುವುದು ಕಷ್ಟವೇನಲ್ಲ. ಇದು ರವಿ ಪೂಜಾರಿಯ ಲೆಕ್ಕಾಚಾರ. ಸದ್ಯ ಆತ ಆಸ್ಟ್ರೇಲಿಯಾದಲ್ಲಿ ಸೇಫಾಗಿದ್ದಾನೆ. ಆತನ ಇಶಾರೆಯ ಮೇರೆಗೆ ಬೆಂಗಳೂರನ್ನು ನಡುಗಿಸಲು ಶ್ಯಾಮ್ ಮತ್ತು ಕವಿರಾಜ್ ಗ್ಯಾಂಗ್ ಸಜ್ಜಾಗಿದೆ.


ರಾಮಲಿಂಗಾರೆಡ್ಡಿ

ರಾಮಲಿಂಗಾರೆಡ್ಡಿಯ ಬಂಟ ಗುರುಪ್ಪನಪಾಳ್ಯದ ಮಾಜಿ ಕೌನ್ಸಿಲರ್ ಸಮೀವುಲ್ಲಾ ಮುಂಬಯಿ ಪಾತಕಿ ರವಿಪೂಜಾರಿಗೆ ಎರಡು ಕೋಟಿ ರೂಪಾಯಿ ಕಪ್ಪ ಸಲ್ಲಿಸಿದ್ದಾನೆಂಬುದು ಒಂದು ಸುದ್ದಿ!

ಎಲ್ಲಾದರೂ ಉಂಟಾ? ಶುಟ್ಟಾ ಕಂಜೂಸ್ ಸಮೀವುಲ್ಲಾ ಎರಡು ಕೋಟಿಯಲ್ಲ; ರೌಡಿ ಅಂತ ಬಂದರೆ ಒಂದೇ ಒಂದು ದಮ್ಮಡಿಯನ್ನೂ ಬಿಚ್ಚುವ ಗಿರಾಕಿಯೇ ಅಲ್ಲ ಎಂಬುದು ಇಡೀ ಮುಸ್ಲಿಂ ಅಂಡರ್‌ವರ್ಲ್ಡ್‌ನ ವಾದ!

ಇದರಲ್ಲಿ ಯಾವುದು ಸತ್ಯ ಯಾವುದು ಸುಳ್ಳು? ಪೊಲೀಸರಿಗೆ ಕನ್‌ಫ್ಯೂಸು. ಶಬನಂ ಡೆವಲಪರ್ಸ್ ಅಡ್ಡೆಗೆ ನುಗ್ಗಿದ ರವಿ ಪೂಜಾರಿಯ ಬಾಡಿಗೆ ಬಂಟರು ಡ್ರೈವರ್ ರವಿ ಮತ್ತು ರಿಸೆಪ್ಷನಿಸ್ಟ್ ಶೈಲಾಜಳನ್ನು ಗುಂಡಿಟ್ಟು ಕೊಂದರು. ಕೊಲ್ಲುವುದಕ್ಕೂ ಮುನ್ನ ರವಿ ಪೂಜಾರಿಯ ವಿಸಿಟಿಂಗ್ ಕಾರ್ಡ್ ಇಟ್ಟೇ ಗುಂಡು ಹಾರಿಸಿದ್ದರು.


ಸಮೀವುಲ್ಲಾ


ಇದೆಲ್ಲ ತನ್ನದೇ ಕೃತ್ಯವೆಂದು ರವಿ ಪೂಜಾರಿಯೇ ಟೀವಿಗೆ ಇಂಟರ್‌ವ್ಯೂ ಕೊಟ್ಟ. ಸಮಿ ದಾವೂದ್ ಬಂಟನಾಗಿದ್ದರಿಂದಲೇ ತಾನು ದೇಶಭಕ್ತಿಗೋಸ್ಕರ ಆತನನ್ನು ಕೊಲ್ಲುತ್ತೇನೆಂದು ಸೋಕಾಲ್ಡ್ ರವಿ ಪೂಜಾರಿ ಡೈಲಾಗ್ ಹೊಡೆದ. ಅದರ ಬೆನ್ನಿಗೆ ಎರಡು ಕೋಟಿಯ ಡಿಮ್ಯಾಂಡಿಟ್ಟ.

ಇದು ರವಿ ಪೂಜಾರಿ ಎಂಬ ಮುಂಬಯಿ ಕ್ರಿಮಿಯ ಪಾತಕ ಶೈಲಿಯಷ್ಟೇ ಆಗಿದ್ದರೆ ಪೊಲೀಸರಾಗಲಿ, ಬೆಂಗಳೂರಿನ ಬಿಲ್ಡರುಗಳಾಗಲಿ ತಲೆ ಕೆಡಿಸಿಕೊಳ್ಳುತ್ತಿರಲಿಲ್ಲ. ಒಮ್ಮೆ ಒಬ್ಬ ಬಿಲ್ಡರ್ ಜೀವಕ್ಕೆ ಹೆದರಿ ಈ ರೀತಿ ಡಾನ್ ಒಬ್ಬನಿಗೆ ಕೋಟಿ ಲೆಕ್ಕದಲ್ಲಿ ದುಡ್ಡು ಬಿಚ್ಚಿದನೆಂದರೆ ಅಲ್ಲಿಗೆ ಮಿಕ್ಕೆಲ್ಲ ಬಿಲ್ಡರುಗಳೂ ಅಂಡರ್‌ವರ್ಲ್ಡಿಗೆ ಶರಣಾಗುತ್ತಾರೆ. ದುಡ್ಡು ಬಿಚ್ಚಿದವರನ್ನು ಶೂಟರುಗಳು ಅಟಕಾಯಿಸತೊಡಗುತ್ತಾರೆ. ಅಲ್ಲಿಗೆ ಬೆಂಗಳೂರು ಪೊಲೀಸರ ಮಾನಮರ್ಯಾದೆಯ ಗತಿ ಏನು?

ಕನಿಷ್ಠ ಪೊಲೀಸರಿನ್ನೂ ಬದುಕಿದ್ದಾರೆಂದು ತೋರಿಸಿಕೊಳ್ಳುವುದಕ್ಕಾದರೂ ಮದ್ದು ಮಾಡಬೇಕಲ್ಲ? ಹಾಗಂತ ರವಿ ಪೂಜಾರಿ ಸಿಗಬೇಕಲ್ಲ? ಒಂದು ಪಕ್ಷ ಆತ ಸಿಗದಿದ್ದರೂ ಆತನ ಬೆಂಗಳೂರಿನ ಬೇರು ಕತ್ತರಿಸಬೇಕೆಂದರೆ ತುರ್ತಾಗಿ ಎರಡು ತಲೆ ಉರುಳಿಸಲೇಬೇಕು. ಈ ಪೈಕಿ ಒಂದು ರವಿ ಪೂಜಾರಿಯ ಧೂತ ಕವಿರಾಜ್‌ನದ್ದಾದರೆ ಮತ್ತೊಂದು ಹೊಸಕೋಟೆಯ ಸೀರಿಯಲ್ ಕಿಲ್ಲರ್ ಶ್ಯಾಮ್!

ಸದ್ಯ ಬೆಂಗಳೂರಿನಲ್ಲಿ ರವಿ ಪೂಜಾರಿಯ ಧೂತರು ಅಂತಿರುವುದು ಮತ್ತು ಪೊಲೀಸರು ಬೆನ್ನಟ್ಟಿರುವುದು ಈ ಇಬ್ಬರನ್ನೇ!

ಶಬನಂ ಡೆವಲಪರ್ಸ್ ಶೂಟೌಟಿಗೆ ಸಂಬಂಧಪಟ್ಟಂತೆ ಜೈಲು ಸೇರಿದ್ದ ಕವಿರಾಜ್ ಇಲ್ಲಿಗೆ ತಿಂಗಳ ಹಿಂದೆಯೇ ಕೋಲಾರ ಜೈಲಿನಿಂದ ಬಿಡುಗಡೆಯಾದ. ಹಾಗೇ ಬಿಡುಗಡೆಯಾದವನು ಸುಮ್ಮನೇ ಕೂರಲಿಲ್ಲ. ತನ್ನ ಅಳಿದುಳಿದ ಸಹಚರರನ್ನೆಲ್ಲ ಒಗ್ಗೂಡಿಸಿ ಅದೇ ಕೋಲಾರ ಜೈಲಿನಿಂದ ಹೊಸಕೋಟೆಯ ಸೀರಿಯಲ್ ಕಿಲ್ಲರ್ ಶ್ಯಾಮ್‌ನನ್ನು ಸಿನಿಮೀಯವಾಗಿ ಎಸ್ಕೇಪ್ ಮಾಡಿಸಿದ. ಆ ಹೊತ್ತಿಗಾಗಲೇ ರವಿ ಪೂಜಾರಿ ಗ್ಯಾಂಗ್ ಜೊತೆ ಶ್ಯಾಮ್ ಕೋಲಾರ ಜೈಲಿನಲ್ಲಿ ಸಾಧಿಸಿದ್ದ ಸಖ್ಯವನ್ನು ಪತ್ರಿಕೆ ವರದಿ ಮಾಡಿತ್ತು. ಕಳೆದ ಫೆಬ್ರವರಿಯಲ್ಲಿ ಸಮೀವುಲ್ಲಾನ ಶಬನಂ ಡೆವಲಪರ್ಸ್ ಮೇಲೆ ನಡೆದ ದಾಳಿಯ ಮೂಲ ಸೂತ್ರಧಾರನೇ ಕವಿರಾಜ್ ಎಂಬ ಗೂರ್ಖಾ.


ರವಿ ಪೂಜಾರಿ

ಬೆಂಗಳೂರು ಪಾತಕ ಲೋಕಕ್ಕೆ ತೀರ ಅಪರಿಚಿತನಾದ ಈ ಕವಿರಾಜ್ ಮೂಲತಃ ಮುಂಬಯಿಯವನು. ಬಹುಶಃ ಈತನ ತಂದೆ ನೇಪಾಳಿಯಿರಬೇಕು. ಈತ ಬೆಂಗಳೂರಿಗೆ ಹೇಗೆ ಬಂದ ಎಂಬುದೂ ನಿಗೂಢ. ಪ್ರಾರಂಭದಲ್ಲಿ ಜೇತು ವೀರ್ವಾನಿ ಎಂಬ ಮಾರ್ವಾಡಿಯ ಎಂಬೇಸ್ಸೀ ಬಿಲ್ಡರ್ಸ್‌ನಲ್ಲಿ

ರಾ. ಸೋಮನಾಥ್

ಈತ ವಾಚ್‌ಮನ್ ಆಗಿದ್ದ. ಈತನಿಗೂ ರವಿ ಪೂಜಾರಿಗೂ ನಿಜಕ್ಕೂ ನಂಟಿದೆಯಾ? ಅಥವಾ ಬೇರೆ ಯಾರಾದರೂ ಈತನನ್ನು ಮುಂದಿಟ್ಟುಕೊಂಡು ಬೆಂಗಳೂರಿನ ಬಿಲ್ಡರ್‌ಗಳನ್ನು ದೋಚಲು ಹವಣಿಸುತ್ತಿದ್ದಾರಾ?

ಇದು ಪೊಲೀಸರನ್ನು ಕಾಡುತ್ತಿರುವ ಪ್ರಶ್ನೆ. ರವಿ ಪೂಜಾರಿ ಶಬನಂ ಡೆವಲಪರ್ಸ್ ಶೂಟ್‌ಔಟಿಗೆಂದು ಕವಿರಾಜ್‌ಗೆ 16 ಲಕ್ಷ ರೂಪಾಯಿ ಸುಪಾರಿ ಕೊಟ್ಟಿದ್ದನಂತೆ. ಕಳೆದ ಮಾರ್ಚ್‌ನಲ್ಲಿ ಡಿಸಿಪಿ ಅಲೋಕ್ ಕುಮಾರ್ ಪಡೆ ಈ ಕವಿರಾಜ್‌ನನ್ನು ಬಂಧಿಸಿ ಬಾಯಿ ಬಿಡಿಸಿದಾಗ ಈ ಅಂಶವನ್ನು ಆತ ಬಾಯಿಬಿಟ್ಟಿದ್ದ. ಕವಿರಾಜ್ ಜೊತೆ ಶಬನಂ ಡೆವಲಪರ್ಸ್ ದಾಳಿಯಲ್ಲಿ ಭಾಗವಹಿಸಿದ್ದ ಇಬ್ರಾಹಿಂ, ಮಹೇಶ್, ಮೋಹನ್ ಮತ್ತು ನಟರಾಜ್ ಶರ್ಮಾ ಎಂಬ ಪಾತಕಿಗಳ್ಯಾರೂ ಈ ಹಿಂದೆ ಬೆಂಗಳೂರು ಭೂಗತಲೋಕದಲ್ಲಿದ್ದವರಲ್ಲ. ಅಲ್ಲಿಗೆ ಇಡೀ ಶೂಟ್‌ಔಟ್‌ಗೆ ಮುಂಬಯಿಯೇ ಮೂಲ ಎಂಬುದರಲ್ಲಿ ಪೊಲೀಸರಿಗೆ ಯಾವುದೇ ಅನುಮಾನಗಳಿರಲಿಲ್ಲ. ತಿಲಕ್‌ನಗರದ ಇನ್ಸ್‌ಪೆಕ್ಟರ್ ಸತ್ತಾರ್ ತಂಡ ಹೇಗೋ ಕವಿರಾಜ್‌ನನ್ನು ಹಿಡಿದು ಹಾಕಿತ್ತಾದರೂ ಆತನನ್ನು ಇಂಟರಾಗೇಟ್ ಮಾಡಿದ್ದು ಮಾತ್ರ ಡಿಸಿಪಿ ಅಲೋಕ್ ಕುಮಾರ್. ಸಾಮಾನ್ಯವಾಗಿ ಐಪಿಎಸ್ ಅಧಿಕಾರಿಗಳು ನಡೆಸುವ ವಿಚಾರಣೆಗೂ ಅನುಭವಿ ಕ್ರೈಂ ಪೇದೆಯೊಬ್ಬ ಬಾಯಿಬಿಡಿಸುವ ರೀತಿಗೂ ವ್ಯತ್ಯಾಸವಿರುತ್ತದೆ.


ಸುರೇಶ್ ಪೂಜಾರಿ

ಅಲೋಕ್ ಕುಮಾರ್ ತರಾತುರಿಯಲ್ಲಿ ಕವಿರಾಜ್‌ನ ಕೌಟುಂಬಿಕ ಹಿನ್ನೆಲೆ, ಆತನ ಬೆಂಗಳೂರು ಲಿಂಕ್ ಇತ್ಯಾದಿ ಯಾವುದನ್ನೂ ಬಾಯಿಬಿಡಿಸಲೇ ಇಲ್ಲ. ಅಪರಾಧಿಗಳು ಪತ್ತೆಯಾದ ಖುಷಿಯಲ್ಲಿ ಮೀಡಿಯಾ ಪ್ರಚಾರಕ್ಕೇ ಹೆಚ್ಚು ಒತ್ತು ಕೊಟ್ಟರೇ ಹೊರತು ಕವಿರಾಜ್‌ನ ಮೂಲ ಕೆದಕಲಿಲ್ಲ. **Once again** ಇದರ ಲಾಭ ಪಡೆದವನು ಕವಿರಾಜ್.

ಅದರಲ್ಲೂ ಕೋಲಾರ ಜೈಲು ಆತನ ಪಾತಕ ದುರುದ್ದೇಶಗಳಿಗೆ ಹೇಳಿಮಾಡಿಸಿದಂತಿತ್ತು. ಜೈಲಲ್ಲಿದ್ದು ಕೊಂಡೇ ಹೊಸಕೋಟೆಯ ಸರಣಿ ಹಂತಕ ಶ್ಯಾಮ್‌ಗೆ ಕವಿರಾಜ್ ಆತ್ಮೀಯನಾದ. ಮೊಬೈಲ್ ತರಿಸಿಕೊಂಡ. ಆ ಮೂಲಕ ತನ್ನ ಭೂಗತ ಲಿಂಕುಗಳ ಜೊತೆ ಮತ್ತೆ ಕಾಂಟ್ಯಾಕ್ಟ್ ಸಾಧಿಸಿಬಿಟ್ಟ. ಇಲ್ಲಿಗೆ ತಿಂಗಳ ಹಿಂದೆ ಕೋರ್ಟ್ ಆತನಿಗೆ ಜಾಮೀನು ಕೊಟ್ಟಿದೆ. ಅದು ಪೊಲೀಸರಿಗೂ ಗೊತ್ತಿದೆ. ಹಾಗಿದ್ದೂ ಕವಿರಾಜ್ ಕೋಲಾರ ಜೈಲಿಂದ ಸೀರಿಯಲ್ ಕಿಲ್ಲರ್ ಶ್ಯಾಮ್‌ನನ್ನು ಎಸ್ಕೇಪ್ ಮಾಡಿಸಿ ತನ್ನ ವಸೂಲಿ ದಂಧೆಯನ್ನು ಮತ್ತೆ ಮುಂದುವರಿಸುತ್ತಾನೆಂದರೆ ಅದು ಪೊಲೀಸ್ ದುರವಸ್ಥೆಯಲ್ಲದೇ ಮತ್ತೇನು?

ಬಹುಶಃ ಶ್ಯಾಮ್‌ನಂಥ ಭಯಾನಕ ಪಾತಕಿ ಜೈಲಲ್ಲಿ ಪರಿಚಯವಾದ ನಂತರವೇ ಕವಿರಾಜ್ ತನ್ನ ಹಳೇ ಚಾಳಿಗೆ ವಾಪಸ್ಸಾಗಲು ನಿರ್ಧರಿಸಿದನೆ?

ಮುಂದಿನ ಬಿಲ್ಡರ್ ಯಾರು?

ಸಮೀವುಲ್ಲಾನಿಗೂ ಕರಾಚಿ ಡಾನ್ ದಾವೂದ್‌ಗೂ ಲಿಂಕ್ ಇರೋದಿಕ್ಕೇ ತಾನು ಆತನನ್ನು ಮುಗಿಸ್ತೀನಿ ಅನ್ನುವ ರವಿ ಪೂಜಾರಿ ನಿಜಕ್ಕೂ ದಾವೂದ್ ವಿರೋಧಿಯೇ? ಬೇರೆ ಯಾರನ್ನೂ ಮುಟ್ಟದೇ ಆತ ಸಮೀವುಲ್ಲಾನ ಬೆನ್ನಿಗೆ ಬಿದ್ದಿರುವುದೇಕೆ?

ಈತನಕ ಈ ಪ್ರಶ್ನೆಗೆ ಉತ್ತರ ಸಿಕ್ಕಿಲ್ಲ. ಸಮೀವುಲ್ಲಾ ದಾವೂದ್ ಇಬ್ರಾಹಿಂನ ಲಿಂಕ್ ಸಾಧಿಸುವಷ್ಟು ದೊಡ್ಡಕುಳ ಅಲ್ಲವೇ ಅಲ್ಲ. ಈ ಸಮೀ ಮತ್ತು ಆತನ ತಮ್ಮ ಅಕ್ರಂಪಾಷಾ ಇಬ್ಬರೂ ಖುದ್ದು ರೌಡಿಗಳೆ. ತಮ್ಮ ಎದುರಾಳಿಗಳಾದ ರಿಜ್ವಾನ್ ಮತ್ತು ರೇಹಾನ್ ವಿರುದ್ಧ ಇವತ್ತಿಗೂ ಬಡಿದಾಡುತ್ತಲೇ ಇದ್ದಾರೆ. ತಮ್ಮದೇ ಸಣ್ಣದೊಂದು ಗ್ಯಾಂಗ್ ಕಟ್ಟಿಕೊಂಡಿದ್ದಾರೆ. ಪ್ರಾರಂಭದಲ್ಲಿ ಸೀಮೆಎಣ್ಣೆ ಕಲಬೆರಕೆ ಮಾಡಿ ಗಾಡಿಯಲ್ಲಿ ತಳ್ಳಿಕೊಂಡು ಮಾರುತ್ತಿದ್ದ ಸಮೀವುಲ್ಲಾ ಕ್ರಮೇಣ ಗ್ರಾನೈಟ್ ದಂಧೆಗೆ ನಿಂತ. ಬಂದ ದುಡ್ಡಲ್ಲಿ ಭೂಕಬಳಿಕೆಗೆ ಕೈಯಿಟ್ಟ.

ಲ್ಯಾಂಡ್ ಗ್ರ್ಯಾಬಿಂಗ್ ಕಸುಬಿನಲ್ಲಿ ಈತನಿಗೆ ಗುರುಗಳಾದ ಬಿಲ್ಡರ್ ಅಮ್ಜದ್ ಮತ್ತು ಸ್ಯಾಂಡಲ್‌ವುಡ್ ಸ್ಮಗ್ಲರ್ ಖುದ್ದೂಸ್ ಥರದ ಕೋಟಿಯ ಕುಳಗಳನ್ನೇ ಕೈಬಿಟ್ಟು ರವಿ ಪೂಜಾರಿ ಸಮೀವುಲ್ಲಾನ ಬೆನ್ನಿಗೆ ಬಿದ್ದಿದ್ದೇಕೆ ಎಂಬುದೇ ಇವತ್ತಿಗೂ ನಿಗೂಢ. ಬಹುಶಃ ಸಮೀವುಲ್ಲಾ ಕೈಯಿಟ್ಟ ಯಾವುದೋ ಲ್ಯಾಂಡ್ ಡೀಲಿನ ಪ್ರತಿಸ್ಪರ್ಧಿಯೊಬ್ಬ ಆತನ ರವಿ ಪೂಜಾರಿಗೆ ಹಾಕಿಕೊಟ್ಟಿರಬಹುದೆ? ಯಾರದು?

ಈ ಪ್ರಶ್ನೆಗೂ ಪೊಲೀಸರಿಗಿನ್ನೂ ಉತ್ತರ ಸಿಕ್ಕಿಲ್ಲ. ಹಾಗಂಥ ಸುಲಭಕ್ಕೆ ಈತ ಕಾಸು ಬಿಚ್ಚುವ ಆಸಾಮಿಯಲ್ಲ. ಅದೇನೇ ಎಡವಟ್ಟಾದಾಗಲೂ ಸಮೀ ಬೆಂಗಳೂರಿನ ಕೇಡಿಗಳಾದ ತನ್ವೀರ್ ಮತ್ತು ಇಫಿಯಾಕ್ ಪೈಲ್ವಾನ್ ಥರದವರಿಗೇ ಮಣಿ ಹಾಕಿದವನಲ್ಲ. ಬೇಕಾದರೆ ಮಸೀದಿ ಕಟ್ಟೋಕೆ ದುಡ್ಡು ಕೊಡ್ತೀನಿ. ಯಾರೇ ಹಿಂದೂಗಳು ಬಂದು ದೇವಸ್ಥಾನ ಕಟ್ಟೋಕೆ ಅಂತ ದುಡ್ಡು ಕೇಳ್ಲೀ.... ಅವರಿಗೆ ಬೇಕಾದ್ರೆ ನನ್ನ ಇಡೀ ಆಸ್ತೀನ ಬರೆದುಕೊಡ್ತೀನಿ. ದೇವರ ಕೆಲಸಕ್ಕೆ ಫಕೀರ್ ಬಂದ್ರೂ ತಲೆ ಬಗ್ಗಿಸ್ತೇನೆಯೇ ಹೊರತು ರೌಡಿ ಅಂತ ಬಂದ್ರೆ ನನ್ನ ಪ್ರಾಣ ಹೋದ್ರೂ ನಯಾಪೈಸೆ ಕೊಡೋನು ನಾನಲ್ಲ. ಬೇಕಾದ್ರೆ ನನ್ನ ಪ್ರಾಣ ಹೋದ್ರೂ ಸರಿಯೇ ನಾನು ಮಾತ್ರ ರವಿ ಪೂಜಾರಿಗೆ ಹೆದರಿ ಕಾಸು ಬಿಚ್ಚೋನಲ್ಲ. ಅವನಿಗೆ ಎರಡು ಕೋಟಿ ಕೊಡೋ ಹಾಗಿದ್ರೆ ನಾನೇಕೆ ನಾಲ್ಕು ಮಂದಿ ಗನ್‌ಮ್ಯಾನ್‌ಗಳನ್ನು ಇಟ್ಕೋಬೇಕಿತ್ತು?


ತನ್ವೀರ್

ಆ ದುಡ್ಡನ್ನು ಸೆಕ್ಯೂರಿಟಿಯವರಿಗೇ ಕೊಡ್ತೀನಿ. ಇವತ್ತು ರವಿ ಪೂಜಾರಿ ಕೇಳ್ತಾನೆ. ನಾಳೆ ಇನ್ಯಾರೋ ಶೆಟ್ಟಿ ಕೇಳ್ತಾನೆ. ಪ್ರಾಣಕ್ಕೆ ಹೆದರ್ಕೊಂಡ್ರೆ ಎಷ್ಟು ಜನಕ್ಕೆ ಅಂತ ದುಡ್ಡು ಕೊಡೋದು?

ಇದು ಸಮೀವುಲ್ಲಾನ ಪ್ರಶ್ನೆ. ಹಾಗೊಮ್ಮೆ ಕೊನೆತನಕ ಸಮೀವುಲ್ಲಾ ರವಿ ಪೂಜಾರಿಗೆ ಜಗ್ಗದೇ ಹೋದರೆ ಆತ ಬಿಡಬೇಕಲ್ಲ. ಹೇಗೂ ಮುಂಬಯಿಯ ಹಿಂದುಗಟ್ಟಲೇ ಬಿಲ್ಡರುಗಳು ಬೆಂಗಳೂರಿಗೆ ಬಂದಿದ್ದಾರೆ. ಸಮೀವುಲ್ಲಾನಿಗಾದ ಗತಿ ಹೇಳಿ ಇಂಥ ಯಾರೇ ಬಿಲ್ಡರ್‌ಗೆ ಫೋನ್ ಮಾಡಿದರೂ ದುಡ್ಡು ಉದುರುತ್ತದೆ. ಇನ್ನು ಮುಸ್ಲಿಂ ಬಿಲ್ಡರ್‌ಗಳಾದ ಇರ್ಫಾನ್, ರಜಾಕ್, ಎಚ್.ಎಂ. ಕನ್‌ಸ್ಟ್ರಕ್ಷನ್‌ನ ಶಿವಾನಿ ಥರದವರಿಂದ ದುಡ್ಡು ಬಾಚುವುದು ಎಷ್ಟು ಹೊತ್ತು?

ಬಿಡಿ ಚಿತ್ರಗಳು

● ಪಾರ್ವತೀಶ ●

ಬೂಟಿನೇಟು- ಕರೀಕೋಟು

"ಇದೆಲ್ಲಾ ಒಂಥರಾ ತಿಕ್ಕಲು ಸನ್ನಿವೇಶದಂತಿದೆ.

ಮೊನ್ನೆ ಶಾಸಕ ವಾಟಾಳ್ ನಾಗರಾಜ್ 'ಬೂಟ್ಸ್ ಏಟು 46' ಅಂತ ಪತ್ರಿಕಾ ಜಾಹೀರಾತು ಕೊಟ್ಟು, ಬ್ಯಾನರ್ ಬರೆಸಿಕೊಂಡು ತಮ್ಮ ಬರ್ತ್‌ಡೇ ಮಾಡಿಕೊಂಡಿದ್ದಾರೆ. 1962 ರಲ್ಲೊಮ್ಮೆ ಪೊಲೀಸರು ವಾಟಾಳ್‌ಗೆ ಬೂಟಿನಲ್ಲಿ ಹೊಡೆದಿದ್ದರಂತೆ. ಕಳೆದ ಎರಡುಮೂರು ವರ್ಷಗಳಿಂದ ಅದನ್ನೇ ತಮ್ಮ ಸಾಧನೆ ಎಂದು ವಾಟಾಳ್ ಬಿಂಬಿಸಿಕೊಂಡು ಬರ್ತ್‌ಡೇ ಆಚರಿಸಿಕೊಂಡು ಬರುತ್ತಿದ್ದಾರೆ.



ಈಗ ಬಿಡಿ, ನಮ್ಮ ಪೊಲೀಸರು ಬೂಟಿನ ಬದಲು ಬಂದೂಕು ಕೈಗೆತ್ತಿಕೊಂಡಿದ್ದಾರೆ. ಅದಿರಲಿ, ಇವೆಲ್ಲಾ ಒಂಥರಾ ತಿಕ್ಕಲು ಸನ್ನಿವೇಶ ಅಂದಿದ್ದೇಕೆಂದರೆ ಈ ಪ್ರೋಗ್ರಾಂನಲ್ಲಿದ್ದ ಅನೇಕರು ಅಸಂಗತ ನಾಟಕದ ಪಾತ್ರಗಳಂತೆ ಮಾತಾಡಿ ಹೋಗಿದ್ದಾರೆ.

ಪೊಲೀಸರ ದಡ್ಡತನವನ್ನೇ ಬಂಡವಾಳ ಮಾಡಿಕೊಂಡು ವಕೀಲ ವೃತ್ತಿಯಲ್ಲಿ ಸಕ್ಸಸ್ ಆಗಿದ್ದ ಹನುಮಂತರಾಯ ಎಂಬುವರು "ಇನ್ನು ಮುಂದೆ ಸರ್ಕಾರವೇ ಬೂಟಿನೇಟಿನ ಸ್ಮರಣ ಕಾರ್ಯಕ್ರಮ ನಡೆಸಲಿ" ಅಂತ ಒಂದು ಉದ್ರಿ ಸಲಹೆ ಕೊಟ್ಟಿದ್ದಾರೆ. ಕವಿ ಸಿದ್ಧಲಿಂಗಯ್ಯ "ವಾಟಾಳರದು ಕ್ರಾಂತಿಕಾರಿ ಜೀವನ ಹೋರಾಟ" ಎಂದು ತಮ್ಮ ಚಿಲ್ಲರೆ ಚಿಂತನೆಗಳನ್ನು ಹರಿಬಿಟ್ಟಿದ್ದಾರೆ. ಇದೇ ರೀತಿ ನಾಳೆ ಇನ್ನೊಬ್ಬ ಅವಿವೇಕಿ "ಅವತ್ತು ವಾಟಾಳರಿಗೆ ಯಾವ ಬೂಟಿನಲ್ಲಿ ಹೊಡೆಯಲಾಗಿತ್ತೋ ಅವೇ ಬೂಟುಗಳನ್ನು ಪತ್ತೆಹಚ್ಚಿ ಮ್ಯೂಸಿಯಂನಲ್ಲಿಡಿ" ಅನ್ನುವ ಅಪಾಯವಿದೆ. ಆಮೇಲೆ ವಾಟಾಳರಿಗೆ ಪೊಲೀಸರು ಬೂಟ್ಸ್‌ನಲ್ಲಿ ಹೊಡೆಯುತ್ತಿರುವಂತೆ ಕಾಣುವ ಪ್ರತಿಮೆ ಸ್ಥಾಪಿಸಿ ಅಂತಲೂ ಬೇಡಿಕೆ ಬರಬಹುದು.

ನಿಮಗೆ ಇದೆಲ್ಲಾ ತಮಾಷೆ ಅನ್ನಿಸಬಹುದು.

ಆದರೆ ಕನ್ನಡ ಚಳವಳಿಯೆಂಬ ಗದ್ದಲದ ಬರಡು ಜಾತ್ರೆಯಲ್ಲಿ ಇಂಥ ಕಾಮಿಡಿಗಳನ್ನೂ ಗಂಭೀರವಾಗಿ ಪರಿಗಣಿಸುವ ಜೋಕರ್‌ಗಳಿದ್ದಾರೆ. ವಾಟಾಳರು ಓರ್ವ ಶಾಸಕರಾಗಿ ಇನ್ನಿತರ ಎಷ್ಟೋ ಜನರಿಗಿಂತ ಜವಾಬ್ದಾರಿಯುತವಾಗಿ ಕೆಲಸ ಮಾಡಿದ್ದಾರೆ. ಆದರೆ ಅವರ ಕನ್ನಡ ಚಳವಳಿ ಮಾತ್ರ ಕಾಮಿಡಿ ಲೆವೆಲ್ ದಾಟ ಮೇಲೇಳಲೇ ಇಲ್ಲ.

ಮೊನ್ನಿನ ಬೂಟಿನೇಟು ಪ್ರೋಗ್ರಾಂನಲ್ಲಿ ಭಾಗವಹಿಸಿ ವಾಟಾಳರನ್ನು ಹೀನಾಮಾನ ಹೊಗಳಿರುವ ಬಹುತೇಕರು ಇಂಥ ತಿಕ್ಕಲು ಸನ್ನಿವೇಶದ ಖಾಯಂ ಪಾತ್ರಧಾರಿಗಳಂತಿದ್ದಾರೆ. ಇಂಥವರ ಒದರಾಟ ಇರುವವರೆಗೂ ಕನ್ನಡ ಚಳವಳಿಗೆ ಹಿಡಿದಿರುವ ಗ್ರಹಣ ಬಿಡಲ್ಲ ಬಿಡಿ.

* * * * * * * *

ಸಿದ್ಧಗಂಗಾ ಶ್ರೀಗಳಿಗೆ ಅಪಚಾರ

ಸಿದ್ಧಗಂಗಾ ಸ್ವಾಮಿಗಳಿಗೆ 101 ವರ್ಷ ಆಯಿತೆಂದು 101 ಕೆಜಿ ಚಿನ್ನದ ತುಲಾಭಾರ ಮಾಡಲು ಯಡಿಯೂರಪ್ಪ ಓಡಾಡುತ್ತಿದ್ದಾರೆ. ತಲಾ 1 ಕೆ.ಜಿ. ಚಿನ್ನ ಕೊಡುವ ದಾನಿಗಳ ಹೆಸರನ್ನು ಬೋರ್ಡು ಬರೆಸಿ ತೂಗು ಹಾಕುವುದಾಗಿಯೂ ಯಡ್ಡಿ ಪ್ರಚಾರ ಮಾಡುತ್ತಿದ್ದಾರೆ.

ಪರಮ ವೈರಾಗ್ಯಮೂರ್ತಿ ಸಿದ್ಧಗಂಗಾ ಶ್ರೀಗಳು ಇಂಥ ಅಸಂಬದ್ಧಗಳನ್ನು ಒಪ್ಪಿಕೊಳ್ಳುವ ಮೂಲಕ ಅವರ ಬಗ್ಗೆ ಗೌರವವಿರುವವರ ವಿಶ್ವಾಸ ಕಳೆದುಕೊಳ್ಳುತ್ತಾರಷ್ಟೇ. ಹೆಚ್ಚುಕಡಿಮೆ 8 ಕೋಟಿ ರೂ. ಮೊತ್ತದ ತುಲಾಭಾರ ಇದು. ಈ ತುಲಾಭಾರದ ನೆಪದಲ್ಲೇ ಸಿಕ್ಕಷ್ಟು ದುಡ್ಡು ನುಂಗಿ ನೀರು ಕುಡಿಯಲು ಕೆಲವರು ರೆಡಿಯಾಗಿದ್ದಾರೆ. ಯಡ್ಡಿ ಸಂಗ್ರಹಿಸಲಿರುವ ಚಿನ್ನದ ಕೆಲವಂಶ ನೆಕ್ಲೇಸು, ಬಳೆಯಾಗಿ ರೂಪಾಂತರವಾಗುವ ಸಾಧ್ಯತೆಯೂ ಇದೆ.

'ಭಕ್ತಿಯೆಂಬುದು ತೋರುಂಭ ಲಾಭ' ಎಂಬ ಮಾತು ಸ್ವಾಮಿಗಳಿಗೆ ತಿಳಿಯದೆ?

* * * * * * * *

ಸಂಶೋಧಕನೊಬ್ಬ ಕಣ್ಮರೆ



ಚಿಮೂ ಇತ್ತೀಚೆಗೆ ಏನೇ ಪತ್ರಿಕಾ ಹೇಳಿಕೆ ಕೊಟ್ಟರೂ ಅದು ಒಂದೋ ಮುಸ್ಲಿಮರ ವಿರುದ್ಧ, ಇಲ್ಲಾ ಕ್ರಿಶ್ಚಿಯನ್ ಮಿಷನರಿಗಳ ಬಗ್ಗೆ ಮಾತ್ರ ಎಂಬಂತಾಗಿ ಹೋಗಿದೆ. ಇದೊಂದು ರೋಗಗ್ರಸ್ತ ಮನಸ್ಥಿತಿ. ಒಂದು ಕಾಲದಲ್ಲಿ ಚಿಮೂ ಸಾಹಿತ್ಯ ಸಾಂಸ್ಕೃತಿಕ ಇತಿಹಾಸಗಳ ಸಂಶೋಧಕರಾಗಿದ್ದರೆಂಬುದನ್ನು ಜನ ಮರೆತಿದ್ದಾರೆ. ಹಂಪೆ ಕನ್ನಡ ವಿ.ವಿ.ಗೆ ಉಪಕುಲಪತಿಯಾಗಬೇಕೆಂಬ ಮಹದಾಸೆ ಚಿಮೂಗಿತ್ತು. ಆದರೆ ಅದೃಷ್ಟವಶಾತ್ ಅಂತ ದುರ್ಘಟನೆ ನಡೆಯಲಿಲ್ಲ. ಕೊನೆ ಪಕ್ಷ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷನಾಗುವ ಗೌರವವಾದರೂ ಸಿಗುವುದೆಂದು ಚಿಮೂ ಕಾದಿದ್ದೇ ಬಂತು, ಅದೂ ಈಡೇರಲಿಲ್ಲ. ಆ ಹತಾಶೆಯಿಂದ ಈಗ 'ಚಂಪಾ ಅಧ್ಯಕ್ಷರಾದ ಮೇಲೆ ಕಸಪಾ ಕಳೆ ಗುಂದಿದೆ' ಎಂದು ಚಿಮೂ ಗೋಳಾಡುತ್ತಿದ್ದಾರೆ. ಜೊತೆಗೆ ಬ್ಯಾರಿ ಅಕಾಡೆಮಿ ರಚಿಸಬಾರದೆಂದೂ ಅಪ್ಪಣೆ ಕೊಡಿಸಿದ್ದಾರೆ. ಅವಿವೇಕಿ ಚಿಮೂ ತನಗೆ ಎಲ್ಲಾ ಗೊತ್ತು, ಹಾಗೊಂದು ವೇಳೆ ಗೊತ್ತಿರದಿದ್ದರೆ ಅಂತಾದ್ದು ಈ ಜಗತ್ತಿನಲ್ಲಿ ಅಸ್ತಿತ್ವದಲ್ಲಿರಲ್ಲ ಎಂದು ನಂಬಿಕೊಂಡಂತಿದೆ. ಕರ್ನಾಟಕ ಎಂದರೆ ಬರೀ ಕನ್ನಡ ಮಾತ್ರ ಅಲ್ಲ, ಉರ್ದು, ಕೊಡವ, ತುಳು, ಬ್ಯಾರಿ, ಕೊಂಕಣಿ, ಲಂಬಾಣಿ ಹಾಗೂ ಅಲ್ಪಸಂಖ್ಯಾತರ ಭಾಷೆಗಳೂ ಸೇರುತ್ತವೆಂಬುದು ಸ್ವತಃ ವಿದ್ವಾಂಸರಾಗಿದ್ದ ಚಿಮೂಗೂ ಗೊತ್ತಿರಬೇಕಿತ್ತು. ತನ್ನ ಕಾರ್ಯಕ್ಷೇತ್ರ ಯಾವುದೆಂದು ಅರ್ಥ ಮಾಡಿಕೊಳ್ಳದೆ ಚಿಲ್ಲರೆ ಕೆಲಸಗಳಲ್ಲೇ ಬದುಕು ಸವೆಸುತ್ತಿರುವ ಚಿಮೂಗೆ ಈಗ ಕಷ್ಟವಿಲ್ಲ. ಎಲ್ಲಾ ಮಾಡ್ಕೆ ಸಿಗದೆ ಹೋದಾಗ ಮೆದುಳು ಕೈಕೊಡದಿರುತ್ತದೆಯೇ?

* * * * * * * *

ಇಂಡಿಯಾ ಲೀಡ್ ಮಾಡುವ ಚಟ

ಟೈಮ್ಸ್ ಆಫ್ ಇಂಡಿಯಾದವರು ನೆಲದ ಮೇಲೆ ನಿಂತು ಯೋಚಿಸುವ ಜನ ಅಲ್ಲಾ ಎನ್ನಲು ಇನ್ನೊಂದು ಪುರಾವೆ ಸಿಕ್ಕಿದೆ.

'ಲೀಡ್ ಇಂಡಿಯಾ' ಅಂತ ತಾವೇ ಒಂದು ಪ್ರಚಾರಾಂದೋಲನ ಲಾಂಚ್ ಮಾಡಿರುವ ಟೈಮ್ಸ್‌ನವರು ಭಾರತ ದೇಶವನ್ನು ಯಾರು ಮುನ್ನಡೆಸಬಲ್ಲರೆಂಬ ಬಗ್ಗೆ ಅನಿಸಿಕೆ ನೀಡಲು ತಿಳಿಸಿತ್ತು, ಅದಕ್ಕೊಂದು ವೆಬ್‌ಸೈಟೂ ಹುಟ್ಟಿಕೊಂಡಿತ್ತು. ಈಗ ನೋಡಿದರೆ ಸಾವಿರಾರು ಜನ ಇಂಡಿಯಾವನ್ನು ಲೀಡ್ ಮಾಡುವ ತಾಕತ್ತಿರುವವರ ಲಿಸ್ಟ್ ರೆಡಿ ಮಾಡಿಬಿಟ್ಟಿದ್ದಾರೆ.

ಅವರ ಪೈಕಿ 50% ಸಾಫ್ಟ್‌ವೇರ್ ಇಂಜಿನಿಯರ್‌ಗಳು, 15% ವೈದ್ಯರು ಹಾಗು ಉಳಿದವರ ಬ್ಯುಸಿನೆಸ್‌ಮ್ಯಾನ್‌ಗಳಾಗಿದ್ದಾರೆ. ಅಂದಹಾಗೆ ಇವರಿಗೆಲ್ಲಾ ನಾಯಕತ್ವ ಗುಣ ಇದೆ ಅಂತ ಪತ್ತೆಹಚ್ಚಿರುವುದು ಬೇರೆ ಯಾರೂ ಅಲ್ಲ, ಅವರವರೇ ತಮ್ಮ ಹೆಸರನ್ನು ಶಿಫಾರಸ್ಸು ಮಾಡಿಕೊಂಡು ಬಿಟ್ಟಿದ್ದಾರೆ.

ಇದರ ಹತಾಶೆ ಏನೆಂದರೆ "ಈ ಇಂಡಿಯಾದಲ್ಲಿ ಯಾವುದೂ ಸರಿಯಾಗಿ ನಡೆಯುತ್ತಿಲ್ಲ, ನಮಗೆ ಅವಕಾಶ ಸಿಕ್ಕರೆ ಎಲ್ಲವನ್ನು ರಿಪೇರಿ ಮಾಡಿಬಿಡುತ್ತೇನೆ ಆದರೆ ಪ್ರಜಾಪ್ರಭುತ್ವ ಎಲೆಕ್ಷನ್ ಇವೆಲ್ಲಾ ನಮ್ಮ ಕೈಲಾಗಲ್ಲ" ಎಂಬುದು.

ಅಂದರೆ ಇವರೆಲ್ಲಾ ಅವತಾರ ಪುರುಷರೆಂದು ಜನ ನಂಬಿ ತಮ್ಮ ಹಾಗೂ ದೇಶದ ಹಣೆಬರ ತೀರ್ಮಾನಿಸುವ ಅವಕಾಶ ಕೊಡಬೇಕು. ಇದು ಟೈಮ್ಸ್‌ನವರ 'Lead India' ಪ್ರಚಾರಾಂದೋಲನದ ತಾತ್ಪರ್ಯ. ಇದೊಂತರ ತಿಮಿರು ಅನ್ನೋದರಲ್ಲಿ ಸಂಶಯ ಇಲ್ಲ. ಆದರೆ ಟೈಮ್ಸ್ ಇಂಥ ಅಸಂಬದ್ಧಗಳಿಗೆಲ್ಲಾ ಇಷ್ಟೊಂದು ಪ್ರಚಾರ ಯಾಕೆ ಕೊಡುತ್ತಿದೆ ಗೊತ್ತೆ?

ತನ್ನ elite ಓದುಗರ ಅಹಂ ಕೆರಳಿಸಲು ಹಾಗೂ ಅದೇ ego ತಣಿಸಲು ಇಂಥ ಸರ್ಕಸ್ ಆಗಾಗ್ಗೆ ಬೇಕಾಗುತ್ತದೆ. ಈ ಐಟಿ ನಾಯಕರನ್ನು ಜನ ಮೂಸಿ ನೋಡದಿದ್ದರೂ 'ನಾನೂ ಈ ದೇಶದ ನಾಯಕನಾಗಬಹುದಾದ ವ್ಯಕ್ತಿ' ಅಂತ ಭ್ರಮಿಸಿಕೊಳ್ಳಲು IT (Income Tax) ಕಟ್ಟಬೇಕಿಲ್ಲವಲ್ಲ. ■


ಯಾವತ್ತು ಶ್ಯಾಮ್ ಎಸ್ಕೇಪಾಗಿ ಕವಿರಾಜ್‌ಗೆ ಜೊತೆಯಾದನೋ ಆವತ್ತಿನಿಂದಲೇ ಗುರಪ್ಪನಪಾಳ್ಯದ ಮಾಜಿ ಕೌನ್ಸಿಲರ್ ಬಿಲ್ಡರ್ ಸಮೀವುಲ್ಲಾನ ಗ್ರಹಚಾರ ಕೆಟ್ಟಿದೆ. ಆತನಕ ಸಮೀವುಲ್ಲಾ ರವಿ ಪೂಜಾರಿಗೆ ಕಪ್ಪ ಸಲ್ಲಿಸಿದ್ದಾನೆಂದೇ ಯಾರೆಲ್ಲ ಭಾವಿಸಿದ್ದರೋ ಅವರೆಲ್ಲರಿಗೂ ಅಚ್ಚರಿ ಕಾದಿತ್ತು.

ಅದು ಆಗಸ್ಟ್ 12 ನೇ ತಾರೀಖು. ಸಮೀವುಲ್ಲಾನ ಮೊಬೈಲ್ ನಂಬರ್ 9845268816 ಕ್ಕೆ ಡೈರೆಕ್ಟಾಗಿ ರವಿ ಪೂಜಾರಿಯೇ ಫೋನ್ ಮಾಡಿ ಮತ್ತೆ ಧಮಕಿ ಹಾಕಿದ್ದಾನೆ. ಈ ಹೊತ್ತಿಗಾಗಲೇ ನಾಲ್ಕು ಮಂದಿ ಗನ್‌ಮ್ಯಾನ್‌ಗಳನ್ನು ತನ್ನ ರಕ್ಷಣೆಗೆಂದು ನೇಮಕ ಮಾಡಿಕೊಂಡಿದ್ದ ಸಮೀವುಲ್ಲಾ ಆವತ್ತಿನಿಂದ ತನ್ನ ಮೊಬೈಲನ್ನು ಸ್ವಿಚ್ ಆಫ್ ಮಾಡಿಕೊಂಡ. ಹಾಗಂತ ಪಾತಕಿಗಳು ಬಿಡಬೇಕಲ್ಲ, ಅದಾಗಿ ವಾರಕ್ಕೇ ತನ್ನ ಗಾಡ್‌ಫಾದರ್ ರಾಮಲಿಂಗಾರೆಡ್ಡಿಯ ಮನೆಗೆಂದು ಬಂದಿದ್ದ ಸಮೀ ವುಲ್ಲಾನಿಗೆ ಎಂಥಾ ಶಾಕ್ ಕಾದಿತ್ತೆಂದರೆ ರವಿ ಪೂಜಾರಿ ನೇರವಾಗಿ ರಾಮಲಿಂಗಾರೆಡ್ಡಿಗೇ ಫೋನ್ ಮಾಡಿ ಧಮಕಿಕೊಟ್ಟಿದ್ದ!

ಹೆದರಿದ ರಾ.ಲಿಂ. ರೆಡ್ಡಿ ಪಕ್ಕದಲ್ಲೇ ಇದ್ದ ಸಮಿಗೆ ತನ್ನ ಫೋನ್ ಕೊಟ್ಟರೆ ಅತ್ತಲಿಂದ ರವಿ ಪೂಜಾರಿ ಮತ್ತೆ ಗುಡುಗಿದ. 'ಸಾಲೇ.... ಅಭೀಬೀತೆರಿಕೊ ಗಾಂಡ್ ಮಸ್ತಿ ಹೈಕ್ಯಾ? ತೆರಿಕೋ ಗೋಲಿ ಉಡಾದೂಂಗ. ಸುರೇಶ್ ಪೂಜಾರಿ ಕಳಿಸ್ತೀನಿ ಮೊದಲು ಆತನಿಗೆ ಎರಡು ಕೋಟಿ ಕೊಟ್ಟು ಜಾನ್ ಬಚಾಲೇ....!' ಎಂದೇ ಪೂಜಾರಿ ಅಬ್ಬರಿಸಿದ. ಜೊತೆಗೇ ರಾಮಲಿಂಗಾರೆಡ್ಡಿಗೂ ಒಂದು ಗತಿ ಕಾಣಿಸ್ತೀನಿ ಎಂದ.

ಗಾಡ್‌ಫಾದರ್ ರೆಡ್ಡಿ ಮತ್ತು ಚೇಲಾ ಸಮಿಗೆ ಎಂಥಾ ಶಾಕ್ ಕಾದಿತ್ತೆಂದರೆ, ಅಲ್ಲಿಗೆ ಸಮಿಯನ್ನು ರವಿ ಪೂಜಾರಿ ಗ್ಯಾಂಗ್ ಕಣ್ಣಿಟ್ಟು, ಕಣ್ಣಿಟ್ಟು ಹಿಂಬಾಲಿಸುತ್ತಿದೆ ಎಂಬುದು on the spot ಗೊತ್ತಾಗಿತ್ತು. ಹಾಗಾದರೆ ರಾ.ಲಿಂ.ರೆಡ್ಡಿಯ ನಂಬರ್ ರವಿ ಪೂಜಾರಿಗೆ ಗೊತ್ತಾಗಿದ್ದು ಹೇಗೆ? ಕೊಟ್ಟವರು ಯಾರು? ಸಮಿಯನ್ನು ಆತನ ಮನೆಯಿಂದ ರಾ.ಲಿಂ.ರೆಡ್ಡಿಯ ಮನೆತನಕ ಫಾಲೋ ಮಾಡಿದ್ದು ಯಾರು? ಅಥವಾ ಪೂಜಾರಿ ಬಂಟರ ಒಂದು ತಂಡ ಇಡೀ ರೆಡ್ಡಿಯ ಮನೆಯನ್ನೇ ಸುತ್ತುವರಿದಿತ್ತೇ?

ಹಕೀಕತ್ತು ತನ್ನ ಬುಡಕ್ಕೇ ಬರುತ್ತಿದೆ ಎಂಬುದು ಗೊತ್ತಾಗಿದ್ದೇ ತಡ ರೆಡ್ಡಿ ಆಡುಗೋಡಿ ಪೊಲೀಸರಿಗೆ ಫೋನ್ ಮಾಡಿದ್ದಾರೆ. ತಾನು ಸೇಫಾಗಿ ಇರಬೇಕಲ್ಲ; ಫೋನು ಸಮಿಯ ನಂಬರಿಗೇ ಬಂದಂತೆ ಲಿಖಿತ ಕಂಪ್ಲೇಂಟ್ ಕೊಡಿಸಿದ್ದಾರೆ. ಪೊಲೀಸರು ತಾನೇ ಎಲ್ಲಿಂತ ಹುಡುಕುತ್ತಾರೆ? ಪೂಜಾರಿ ಫೋನ್ ಮಾಡಿದ್ದು ಮುಂಬೈನಿಂದಲಾ? ಅಥವಾ ಆಸ್ಟ್ರೇಲಿಯಾದಿಂದಲಾ? ಎಂಬುದು ಅವರಿಗೇ ನಿಗೂಢ. ಇನ್ನು ರವಿ ಪೂಜಾರಿ ಕಳಿಸಲಿರುವ ಸುರೇಶ್ ಪೂಜಾರಿ ಯಾದರೂ ಯಾರು? ಅಂತ ತಲೆ ಕೆಡಿಸಿಕೊಂಡರೆ ಆತನದೂ ವಿಚಿತ್ರ ಕತೆಯೇ!



ಶ್ಯಾಮ್

ಈ ಸುರೇಶ್ ಪೂಜಾರಿ ಓರ್ವ ಮುಂಬಯಿಯ ಅಬ್ಬೇಪಾರಿ. ಹಿಂದ್ಯಾವತ್ತೋ ಸಣ್ಣ ಪೆಟ್ಟಿ ಕೇಸೊಂದರಲ್ಲಿ ಭೀವಂಡಿ ಪೊಲೀಸರು ಈತನನ್ನು ಬಂಧಿಸಿದ್ದರ ಹೊರತಾಗಿ ಸುರೇಶ್ ಪೂಜಾರಿಯ ಮೇಲೆ ದೊಡ್ಡ ಕೇಸುಗಳಿಲ್ಲ. ಹೇಳಿಕೊಳ್ಳುವಂಥ ಅನುಕೂಲಸ್ಥನಲ್ಲ. ಹಿಂದೆ ಬೆಂಗಳೂರಿನ ಬಿಲ್ಡರ್ ಸುಬ್ಬರಾಜು ಕೊಲೆ ಕೇಸಿನಲ್ಲಿ ರವಿ ಪೂಜಾರಿಯ ಹೆಸರು ಬಂದಾಗಲೂ ಸುರೇಶ್ ಪೂಜಾರಿಯ ಹೆಸರು ಕೇಳಿಬಂದಿರಲಿಲ್ಲ. ಈಗ 'ಸುರೇಶ್ ಪೂಜಾರಿಯನ್ನು ಕಳಿಸ್ತೀನಿ ಆತನ ಕೈಗೆ ಎರಡು ಕೋಟಿ ಕೊಡು' ಎಂದು ರವಿ ಪೂಜಾರಿ ಹೇಳುತ್ತಿರುವುದೇಕೆ? ಸಮೀವುಲ್ಲಾ ಆತನಿಗೆ ದುಡ್ಡು ಮುಟ್ಟಿಸಲಿ ಎಂದೇ? ಅಥವಾ ಆ ಹೆಸರಲ್ಲಿ ಯಾರೇ ಬಂದರೂ ಅವರಿಗೆ ದುಡ್ಡು ಮುಟ್ಟಬೇಕೆಂದೆ?

ಆದರೆ ಪೊಲೀಸರು ಮಾತ್ರ ಕವಿರಾಜ್‌ನ ಬೆನ್ನಿಗೆ ಬಿದ್ದಿದ್ದಾರೆ. ಆತನ ಜೊತೆಗೆ ಹೊಸಕೋಟೆಯ ಹಂತಕ ಶ್ಯಾಮ್ ಪಳಗಿಬಿಟ್ಟನೆಂದರೆ ಬೆಂಗಳೂರು ಪೊಲೀಸರ ಪಾಲಿಗದು ದೊಡ್ಡ ತಲೆನೋವೆ. ಅದೂ ಎಂಥಾ ಅಪಾಯಕಾರಿ ಕೆಲಸಕ್ಕೆ ಶ್ಯಾಮ ಮತ್ತು ಕವಿರಾಜ್ ಕೈಹಾಕಿದ್ದಾರೆಂದರೆ ಜೈಲಿಂದ ಎಸ್ಕೇಪಾಗಿ ಬಂದಿದ್ದೇ ನೇರವಾಗಿ ಗುರಪ್ಪನಪಾಳ್ಯಕ್ಕೆ ಬಂದಿದ್ದೇ ಸಮೀವುಲ್ಲಾನ ಬಲಗೈಯಂತಿದ್ದ ಅಬ್ಬಾಸ್ ಎಂಬ ಹುಡುಗನನ್ನು ಅಟಕಾಯಿಸಿಕೊಂಡು ಎರಡು ಕೋಟಿ ಕೊಡದಿದ್ದರೆ ಮುಗಿಸ್ತೀವಿ ಅಂತ ಹೇಳು ಎಂದು ನಡುರಸ್ತೆಯಲ್ಲೇ ಧಮ್ಕಿ ಕೊಟ್ಟಿದ್ದಾರೆ. ಇದು ರಾ.ಲಿಂ.ರೆಡ್ಡಿ ಮೊಬೈಲಿಗೆ ಫೋನ್ ಬಂದು ನಾಲ್ಕು ದಿನಗಳಾದ ಮೇಲೆ ನಡೆದ ಘಟನೆ. ಆಗಸ್ಟ್ 28 ರ ಅಪರಾಹ್ನ ಬೈಕಲ್ಲಿ ಬರುತ್ತಿದ್ದ ಅಬ್ಬಾಸ್‌ನನ್ನು ಮೊದಲು ಒಂದು ಬೈಕ್ ಅಡ್ಡಗಟ್ಟಿದೆ. ಬೈಕಲ್ಲಿ ಕೂತ ಇಬ್ಬರ ಪೈಕಿ ಒಬ್ಬ ಕವಿರಾಜ್ ಆದರೆ ಮತ್ತೊಬ್ಬ ಶ್ಯಾಮ್!

ಅವರಿಬ್ಬರೂ ಹಾಗೇ ಥ್ರೆಟ್ ಮಾಡುತ್ತಿದ್ದರೆ ಅನತಿ ದೂರದಲ್ಲಿ ಇನ್ನೂ ನಾಲ್ಕು ಬೈಕುಗಳಲ್ಲಿ ಹೆಲ್ಮೆಟ್‌ಧಾರಿ ಪಾತಕಿಗಳು ಹೊಂಚು ಹಾಕುತ್ತಿದ್ದದ್ದನ್ನು ಅಬ್ಬಾಸ್ ನೋಡಿದ್ದಾನೆ. ಅಷ್ಟೇ ವೇಗವಾಗಿ ಮಾಯವಾದ ಬೈಕುಗಳ ನಂಬರ್ ಪ್ಲೇಟುಗಳೂ ಅಸ್ಪಷ್ಟವಾಗಿದ್ದವು. ನಿಜಕ್ಕೂ ಸಮೀ ಎರಡು ಕೋಟಿಯನ್ನು ಮುಟ್ಟಿಸಿದ್ದೇ ಆಗಿದ್ದರೆ ರೆಡ್ಡಿಯ ಮೊಬೈಲಿಗೇಕೆ ಪೂಜಾರಿ ಫೋನ್ ಮಾಡುತ್ತಿದ್ದ? ಆತನ ಕಡೆಯ ಹುಡುಗರನ್ನು ಏಕೆ ನಡುರಸ್ತೆಯಲ್ಲೇ ಅಡ್ಡಗಟ್ಟಿಸುತ್ತಿದ್ದ?

ರವಿ ಪೂಜಾರಿಗೆ ಮೊದಲೇ ಪೊಲೀಸರ ಅಂಕೆಯಿಲ್ಲ, ಆತನ ಲೋಕಲ್ ಏಜೆಂಟರಿಗೆ ಪೊಲೀಸ್ ಭೀತಿ ಇಲ್ಲವೇ ಇಲ್ಲ. ಸದ್ಯ ಬೆಂಗಳೂರು ಪೊಲೀಸರ ಮಟ್ಟಿಗೆ ಇದೇ ಅಪಾಯಕಾರಿ ತಂಡ. ಹಾಗೊಮ್ಮೆ ಸಮೀ ಕೈಗೆ ಸಿಗಲೇ ಇಲ್ಲವೆಂದರೆ ಇನ್ನೊಬ್ಬ ಬಿಲ್ಡರ್ ಸಿಕ್ಕೇ ಸಿಗುತ್ತಾನೆ. ಅಥವಾ ಆತನ ಗಾಡ್‌ಫಾದರ್ ರಾಮಲಿಂಗಾರೆಡ್ಡಿಗೇ ಥ್ರೆಟ್ ಕೊಟ್ಟರೆ ದುಡ್ಡು ಹುಟ್ಟುವುದು ಕಷ್ಟವೇನಲ್ಲ. ಇದು ರವಿ ಪೂಜಾರಿಯ ಲೆಕ್ಕಾಚಾರ. ಸದ್ಯ ಆತ ಆಸ್ಟ್ರೇಲಿಯಾದಲ್ಲಿ ಸೇಫಾಗಿದ್ದಾನೆ. ಆತನ ಇಶಾರೆಯ ಮೇರೆಗೆ ಬೆಂಗಳೂರನ್ನು ನಡುಗಿಸಲು ಶ್ಯಾಮ್ ಮತ್ತು ಕವಿರಾಜ್ ಗ್ಯಾಂಗ್ ಸಜ್ಜಾಗಿದೆ.

ಪೊಲೀಸರಿಗೆ ಶ್ಯಾಮ್ ಮತ್ತು ಕವಿರಾ ಜೋಡಿಯ ಎನ್‌ಕೌಂಟರ್‌ನ ಹೊರತಾಗಿ ಬೇರೆ ಯಾವ ದಾರಿ ತಾನೇ ಉಳಿದಿದೆ? ●

ದರ್ಶನಾಪುರ ಮತ್ತವರ ಪಟಾಲಂಗೆ ಟಾಂಗುಕೊಡಬಲ್ಲ

ಯುವಕರಿಗೆ ಶಹಾಪುರ ನಗರಸಭೆ ಕಾದಿದೆ!?

ಗುಲ್ಬರ್ಗಾ

ಸ್ಥಳೀಯ ನಗರಸಭೆ ಚುನಾವಣೆ ದಿನಾಂಕ ಘೋಷಣೆಯಾಗುತ್ತಲೇ ಶಹಾಪುರದ ಕಾಂಗ್ರೆಸ್ ಪಕ್ಷದವರು ಎಚ್ಚರವಾದಂತೆ ಕಂಡುಬರುತ್ತಿದ್ದಾರೆ. ಕಳೆದ ಸಲದ ಚುನಾವಣೆಯಲ್ಲಿ 11 ವಾರ್ಡಗಳಲ್ಲಿ ಕಾಂಗ್ರೆಸ್,12 ವಾರ್ಡಗಳಲ್ಲಿ ಜನತಾದಳ ಜಯಗಳಿಸಿತ್ತು. ಒಂದು ಮಾತ್ರ ಸಿದ್ರಾಮಯ್ಯ ಬಣದ ಅಭ್ಯರ್ಥಿ ಗೆದ್ದು ಬಂದಿದ್ದ. ಆದರೆ ಅಧಿಕಾರದ ಗದ್ದುಗೆಯನ್ನು ಹೇಗಾದರೂ ಕೈ ವಶವಾಗಲೇ ಬೇಕು ಎಂದು ಪಣ ತೊಟ್ಟ ಮಂತ್ರಿ ದರ್ಶನಾಪುರನ ಗುಂಪು ಆ ಒಬ್ಬ ಪಕ್ಷೇತರನನ್ನು ಖರೀದಿಸಿ ತಮ್ಮ ಬುಟ್ಟಿಯಲ್ಲಿ ಹಾಕಿಕೊಂಡು ಬಿಟ್ಟಿತ್ತು. ಆರಂಭದ ದಿನಗಳಲ್ಲಿ ವಿರೋಧ ಪಕ್ಷದಂತೆ ಕೆಲಸ ಮಾಡಿಕೊಂಡಿದ್ದ ಕಾಂಗ್ರೆಸ್ ಪಕ್ಷದ ಅಭ್ಯರ್ಥಿಗಳು ದಿನಗಳೆದಂತೆಲ್ಲ ತಮ್ಮ ಪಕ್ಷದ ಅಸ್ತಿತ್ವವನ್ನೇ ಮರೆತವರಂತೆ ಆಡಳಿತಾರೂಢ ಜನತಾದಳ ಎಸ್ ಜೊತೆ ಶಾಮೀಲಾಗಿ ಬಿಟ್ಟರು.




ದರ್ಶನಾಪುರ

ಇದರಿಂದ ಹೇಳುವ ಅರಸ-ಕೇಳುವ ಪ್ರಧಾನಿ ಇಲ್ಲದಂತಾಗಿ ಇಡೀ ನಗರಸಭೆಯನ್ನು ದರ್ಶನಾಪುರ ಅಂಡ್ ಕಂಪನಿ ತಮ್ಮ ಬುಡಕ್ಕೆ ಹಾಕಿಕೊಂಡು ಕುಳಿತುಕೊಂಡಿತು. ಸ್ವಭಾವತಃ ಸಂಭಾವಿತನೂ ಪರ ಊರಿನವನೂ ಮೇಲಾಗಿ ದಲಿತನೂ ಆಗಿರುವ ಸುರೇಶ್ ಕರುಣ ಎಂಬುವನನ್ನು ಆಯ್ಕೆ ಮಾಡಿಕೊಂಡು ಮಾಡಿದ ನಾಟಕ, ಆದಿದ ಆಟಗಳು ಒಂದೆರಡಲ್ಲ. ತಮಗೆ ಯಾವುದು ಸರಿಕಾಣುತ್ತದೋ ಅದನ್ನು ಯಾವುದೇ ಎಗ್ಗಿಲ್ಲದೆ ಮಾಡಿಕೊಂಡು ಬಂದರು. ಮೊದಮೊದಲು 2.1/2 ವರ್ಷ ದಲಿತನಾದ ಸುರೇಶ ಕರುಣನಿಗೆಂದು, ಇನ್ನೊಂದು ಅವಧಿಗೆ ಬಸ್ಸನಗೌಡ ಮರ್ಕಲ್ ಎಂಬ ಯುವಕನಿಗೆ ಅಧಿಕಾರ ಹಂಚಿಕೆ ಮಾಡೋಣ ಎಂಬ ಇಂಗಿತದೊಂದಿಗೆ ಆರಂಭವಾದ ನಗರಸಭೆಯ ಅಧ್ಯಕ್ಷಗಿರಿ ಎರಡನೆ ಅವಧಿಗೂ ಕರುಣನೇ ಮುಂದುವರೆದು ಬಿಟ್ಟ.

ಏಕೆಂದರೆ ಕರುಣ ಎಷ್ಟಾದರೂ ಪರ ಊರಿನವನು, ಮೇಲಾಗಿ ಫರ್ಸೆಂಟೇಜ್‌ನಲ್ಲಿ ಯಾವುದೇ ತಕರಾರು ಮಾಡದೆ ಕೊಟ್ಟಷ್ಟನ್ನು ಇಟ್ಟುಕೊಂಡು ಸುಮ್ಮನೆ ಕೂಡುತ್ತಾನೆ ಎಂಬುದು ದರ್ಶನಾಪುರರ ದುರ್-ದೃಷ್ಟಿ. ಇದು ಸತ್ಯವೂ ಕೂಡ. ಬಸ್ಸನಗೌಡ ಮರ್ಕಲ್‌ನನ್ನು ಪುರಸಭೆ ಗದ್ದುಗೆ ಏರಿಸ ಕುಳ್ಳಿರಿಸಿದರೆ ಆತ ಕರುಣ ಕೇಳಿದಂತೆ ತಮ್ಮ ಮಾತು ಕೇಳಲಾರ, ರಬ್ಬರ್ ಸ್ಟ್ಯಾಂಪ್ ಆಗಲಾರ ಎಂಬುದಾಗಿತ್ತು. ಅಲ್ಲದೆ ಬಸ್ಸನಗೌಡ ರಾಜಕೀಯದಲ್ಲಿ ಬೆಳೆಯತೊಡಗಿದರೆ ಮುಂದೆ ತಮ್ಮ ರಾಜಕೀಯಕ್ಕೂ ಮುಳುವಾಗಬಹುದು ಎಂಬುದು ಇವರ ಮುಂದಾಲೋಚನೆ. ಅಂದಂತೆ ಬಸ್ಸನಗೌಡ ಯುವಕ, ಮೇಲಾಗಿ ಹಣವಂತ. ಜೊತೆಗೆ ಜನಸಾಮಾನ್ಯರಿಗೆ ತನ್ನ ಅಧಿಕಾರದ ಅವಧಿಯಲ್ಲಿ ಒಳ್ಳೆಯದನ್ನೇನಾದರೂ ಮಾಡಬೇಕು ಎಂಬ ಹಂಬಲ ಉಳ್ಳವ. ಇದನ್ನು ಸೂಕ್ಷ್ಮವಾಗಿ ಅರಿತ ದರ್ಶನಾಪುರ ಆತನನ್ನು ರಾಜಕೀಯದಿಂದ ದೂರ ಇಡುವಲ್ಲಿ ಯಶಸ್ವಿಯಾದರು.

ಇದಲ್ಲದೆ ಹಣಮಂತಗೌಡ ಎಂಬ ತಮ್ಮ ಸಂಬಂಧಿಯೊಬ್ಬನನ್ನು ಚೀಫ್ ಆಫೀಸರ್‌ನನ್ನಾಗಿ ತಂದು ಕುಳ್ಳಿರಿಸಿಕೊಂಡು ಬೆಳ್ಳಿತ್ತಿನ ಮರೆಯಲ್ಲಿದ್ದು ಹುಲ್ಲೆಗೆ ಅಂಬುಕೊಡುವಂತೆ ಎಂಬಂತೆ ನಾನಾ ಬಗೆಯ ಗಿಮಿಕ್‌ಗಳನ್ನು ಮಾಡಿಕೊಂಡೇ ಬಂದಿದ್ದಾರೆ. ದರ್ಶನಾಪುರರಿಗೆ ಶಹಾಪುರದಲ್ಲಿ ವಿರೋಧ ಪಕ್ಷದವರ ಭಯ ಇಲ್ಲವೇ ಇಲ್ಲ. ಇದ್ದರೆ ಅದು ತಮ್ಮದೇ ಪಕ್ಷದ ತಾಲೂಕು ಅಧ್ಯಕ್ಷನಾಗಿರುವ ಮಡ್ಡಿ ಮಲ್ಲಣ್ಣನದು. ಇದನ್ನು ಸರಿಯಾಗಿ ಗ್ರಹಿಸಿಕೊಂಡ ದರ್ಶನಾಪುರ ಹಾಗೂ ಗಣಂಗಳು ಮಲ್ಲಣ್ಣಮಡ್ಡಿ ಎಂದಿಗೂ ಸಂತೋಷದಿಂದ ಇರದಂತೆ ನೋಡಿಕೊಂಡಿವೆ. ಶರಣಬಸವಪ್ಪ ದರ್ಶನಾಪುರ ಕ್ಲಾಸ್‌ಮೆಟ್ ಆಗಿರುವ ರಾಜಕುಮಾರ ಪತ್ತಾರ ಎಂಬ ಚಾರಿತ್ರ್ಯವೇ ಇಲ್ಲದ ಜೆ.ಇ. ಯನ್ನು ತಂದು ನಗರಸಭೆಯ ಎಲ್ಲಾ ಬಿಲ್‌ಗಳನ್ನು ತಮ್ಮ ಬತ್ತಳಿಕೆಗೆ ಸೇರುವಂತೆ ನೋಡಿಕೊಂಡಿದ್ದಾರೆ.



ಮಾಜಿ ಶಾಸಕ ಶಿವಶೇಖರಪ್ಪ ಪಾಟೀಲ್

ರಾಜಕೀಯ ದಾಳಗಳನ್ನು ಒಂದೊಂದೆ ಹೊಡೆದು ಉರುಳಿಸುವಲ್ಲಿ ಸದಾ ನಿರತವಾಗಿರುವ ಶರಣಬಸವಪ್ಪ ಅವರ ಸಹೋದರ ಅಮರೇಶ ಗೌಡ, ಕಾಕ ಬಸವರಾಜಪ್ಪ ಮುತ್ತವರ ಸಂಬಂಧಿಗಳಿಂದ ಶಹಾಪುರ ನಗರಸಭೆ ಕೋಟ್ಯಂತರ ಬಿಲ್ ಖರ್ಚಾಗಿದೆಯಾದರೂ, ಸಾಧನೆ ಮಾತ್ರ ಶೂನ್ಯ. ಇದನ್ನು ಕೇಳಬೇಕಾದ ಕಾಂಗ್ರೆಸ್ ಪಕ್ಷದ ತಾಲೂಕ್ ಅಧ್ಯಕ್ಷ ಚಂದ್ರಶೇಖರ ಆರಬೋಳ್ ಸಂಭಾವಿತ, ಮೇಲಾಗಿ ದುಷ್ಟ ರಾಜಕೀಯ ನೀತಿಯಿಂದ ದೂರವಿರುವವ. ಮಾಜಿ ಶಾಸಕ ಶಿವಶೇಖರಪ್ಪ ಪಾಟೀಲ್ ಹೇಳಿಕೇಳಿ ಫೇರ ಅಂಡ್ ಲವ್ಲಿ ಕಂಪನಿ ಜಾಹೀರಾತುದಾರನಂತೆ ಸದಾ ಟ್ರಿಮ್ ಆಗಿರುವುದೊಂದನ್ನು ಹೊರತು ಪಡಿಸಿ, ಯಾವುದೇ ಗೋಜಿಗೆ ಹೋಗದವ. ಅಷ್ಟಿಷ್ಟು ಆಕ್ಟೀವ್ ಆಗಿರುವ ಸುರೇಂದ್ರ ಪಾಟೀಲ್ ಎಂಬ ಮಾಜಿ ನಗರಸಭೆಯ ಕಾಂಗ್ರೆಸ್ ಸದಸ್ಯನಿಗೂ ಹೇಗೆ ಬಾಯಿ ಮುಚ್ಚಿಸಬೇಕೆಂಬುದು ಕಲಿತಿರುವ ದರ್ಶನಾಪುರ ಗ್ಯಾಂಗ್ ಹಾಗೇ ಮಾಡಿತು. ಇನ್ನು ಬಜೆಪಿ ಇಲ್ಲಿ ಆಟಕ್ಕುಂಟು ಲೆಕ್ಕಕ್ಕಿಲ್ಲ.

ಈ ಎಲ್ಲಾ ಕಾರಣಗಳಿಂದ ದರ್ಶನಾಪುರ ಮತ್ತು ಅವರ ಕಂಪನಿ ಕಳೆದ ನಗರಸಭೆಯ ಅವಧಿಯಲ್ಲಿ ಮಾಡಿದ ಲೂಟಿಗೆ ಮಿತಿಯೇ ಇಲ್ಲ. ಇದನ್ನು ಜನಸಾಮಾನ್ಯರೂ ಬಲ್ಲರು.

ಆದರೆ ದರ್ಶನಾಪುರರಿಗೆ ಟಾಂಗು ಕೊಡಬಲ್ಲ ಯುವಕರನ್ನು ಹುಡುಕಾಡಿ ಕಾಂಗ್ರೆಸ್ ಈ ಸಲ ಟಿಕೆಟು ನೀಡಿದರೆ ಶಹಾಪುರದ ನಗರಸಭೆಯ ಇತಿಹಾಸವೆ ಬದಲಾಗುವುದು. ಆದರೆ ಈ ವಿವೇಚನೆ, ದೂರದೃಷ್ಟಿ ಕಾಂಗ್ರೆಸ್ ಜನಗಳಿಗೆ ಇದೆಯೆ?

-ವರದಿಗಾರ

ಮಾನಪ್ಪನ ಕೊಲೆಯೂ, ಮಾರುತಿ ಮುತ್ಯಾನ ಘಟಿಂಗತನವೂ

ಗುಲ್ಬರ್ಗಾ

ಆಧುನಿಕ ಯುಗದ ಈ ದಿನಮಾನಗಳಲ್ಲಿ ಮಾಧ್ಯಮಗಳು ಸ್ವಲ್ಪವೇ ಎಚ್ಚರ ತಪ್ಪಿ ನಡೆದುಬಿಟ್ಟರೆ ಎಂತೆಂಥ ಅನಾಹುತಗಳು ಸೃಷ್ಟಿಯಾಗಬಲ್ಲವು ಎಂಬುದಕ್ಕೆ ತಾಜಾ ಉದಾಹರಣೆಯೊಂದು ಇಲ್ಲಿದೆ. ಈಗ್ಗೆ ಸರಿಯಾಗಿ ಮೂರು ತಿಂಗಳ ಹಿಂದೆ "ಟಿವಿ 9" ಎಂಬ ಚಾನೆಲ್ ಒಂದು "ಹೀಗೂ ಉಂಟೆ?" ಎಂಬ ವಿಸ್ಮಯಗಳ ಸರಮಾಲೆಯೊಂದರಲ್ಲಿ ಕಲಬುರ್ಗಿ ಜಿಲ್ಲೆಯ ಶಹಾಪುರ ತಾಲ್ಲೂಕಿನ ಸಗರ ಗ್ರಾಮದ ಮಾರುತಿ ಮುತ್ಯಾನ ಬಗ್ಗೆ ಅತಿರಂಜಿತ ವರದಿ ಮಾಡಿತು.

ಸದರಿ ಮುತ್ಯಾನ ಕೈಚಳಕಕ್ಕೆ ಏನೆಲ್ಲವೂ ದಕ್ಕಬಲ್ಲವು. ಈ ಮಹಾಶಯನಿಗೆ ಭಾಗ್ಯವಂತಿದೇವಿ ಬೇರೆ ಒಲಿದು ಬಿಟ್ಟಿದ್ದಾಳೆ. ಹೀಗಾಗಿ ಮಾರುತಿ ಮುತ್ಯಾ ಮಕ್ಕಳಿಲ್ಲದವರಿಗೆ ಮಕ್ಕಳನ್ನು, ಹಲವಾರು ರೋಗರುಜಿನಗಳನ್ನು ಕೇವಲ ಆಶೀರ್ವಾದ ಮಾತ್ರದಿಂದಲೇ ಗುಣಪಡಿಸಬಲ್ಲ ಎಂದೂ ಮುಂತಾಗಿ ಬೊಗಳೆಬಿಡಲಾಗಿತ್ತು. ಭೀಮಾ ತೀರದ ಅಫ್ಜಲಪುರದ ಗ್ರಾಮ ವಾಸಿಯಾದ ಘತ್ತರಗಿ ಭಾಗ್ಯವಂತಿ ಎಂಬ ದೇವಿಯೇ ತನ್ನ ಮೂಲ ಸ್ಥಾನವನ್ನು ತೊರೆದು ಇದೀಗ ಈ ಹಣಮಂತ ಮುತ್ಯಾನ ವಶವಾಗಿದ್ದಾಳೆ ಎಂದೂ ಬಿಂಬಿಸಲಾಗಿತ್ತು.



ಮಾನಪ್ಪ

ದೃಶ್ಯ ಮಾಧ್ಯಮದಲ್ಲಿ ಬಂದಿದ್ದೆಲ್ಲ ನೂರಕ್ಕೆ ನೂರರಷ್ಟು ಸತ್ಯ ಎಂದೇ ಭಾವಿಸಿರುವ ಮುಗ್ಧ ಜನರು ಹಿಂದು ಮುಂದೆ ಎನ್ನದ ಕರ್ನಾಟಕದ ಶಿವಮೊಗ್ಗ, ಮಂಡ್ಯ, ಮೈಸೂರು, ಉಡುಪಿ, ಧರ್ಮಸ್ಥಳ, ಮಂಗಳೂರು ಮುಂತಾದವುಗಳಲ್ಲದೆ ನೆರೆಯ ಆಂಧ್ರ ಹಾಗೂ ಮಹಾರಾಷ್ಟ್ರದ ಕೆಲವು ಭಾಗಗಳಿಂದ ಸಾಗರೋಪಾದಿಯಲ್ಲಿ ಹರಿದುಬಂದರು. ಹೀಗಾಗಿ ಸಗರ ಎಂಬ ಕುಗ್ರಾಮದಲ್ಲಿ ಪ್ರತಿ ದಿನವೂ ಜಾತ್ರೆಯ ವಾತಾವರಣ ಏರ್ಪಟ್ಟಿತು.

ಇದನ್ನೆಲ್ಲ ಮೊದಲೇ ಗ್ರಹಿಸಿದವರಂತೆ ಇಲ್ಲಿನ ಕೆಲವು ಪಾಕಡಾ ಆಸಾಮಿಗಳು ಮಾರುತಿಯನ್ನು ತಮ್ಮ ಕಬ್ಜಾದಲ್ಲಿ ತಗೊಂಡು ಭರ್ಜರಿ ವ್ಯಾಪಾರವೇ ಶುರುವಿಟ್ಟುಕೊಂಡು ಕುಳಿತಿದ್ದಾರೆ. ಮುತ್ಯಾ ತಾಯಿತ ಕಟ್ಟಿದರೆ, ನಿಂಬೆಕಾಯಿ ಮಂತ್ರಿಸಿ ಕೊಟ್ಟರೆ, ಮೈಮೇಲೆ ಸಣ್ಣ ಕೊಂಡಿಗಳನ್ನು ಇಳಿಬಿಟ್ಟು ಪರೀಕ್ಷಿಸುವ ನಾಟಕವಾಡಿದರೆ-ಹೀಗೆ ಒಂದೊಂದಕ್ಕೆ ಒಂದೊಂದು ರೀತಿಯ ದರಪಟ್ಟಿಯನ್ನು ನಿಗದಿಮಾಡಲಾಗಿದೆ. ಆದರೂ ಜನರು ಮಾತ್ರ ನಾಮುಂದು-ತಾ ಮುಂದು ಎಂದು ಒಬ್ಬರ ಮೈಮೇಲೆ ಒಬ್ಬರು ಬಿಟ್ಟು ಹನುಮಂತ ಮುತ್ಯಾನನ್ನೇ ಮುಕುರಿಕೊಂಡಿದ್ದಾರೆ. ಹಣಮಂತ ಮುತ್ಯಾನನ್ನೇ ಬಂಡವಾಳ ಮಾಡಿಕೊಂಡ ಸ್ಥಳೀಯ ಘಟಿಂಗರು ತಮ್ಮ ಕತ್ತಿಯನ್ನು ಮತ್ತಷ್ಟು ಹರಿತ ಮಾಡಿಕೊಂಡು ಕುಳಿತಿದ್ದಾರೆ.

ಸ್ವಭಾವತಃ ಸಜ್ಜನನೂ, ದುಡಿದುಣ್ಣುತ್ತಾ ತನ್ನಷ್ಟಕ್ಕೆ ತಾನು (ಕ್ಷೌರಿಕ ವೃತ್ತಿ ಮಾಡಿ) ಬದುಕುತ್ತಿದ್ದ ಮಾರುತಿ, ನೋಡನೋಡುತ್ತಿದ್ದಂತೆ ಮುತ್ಯಾ ಆಗಿಬಿಟ್ಟ. ಆತ ಊಟ ಮಾಡುವುದಕ್ಕೂ, ಚಹಾ ಕುಡಿಯುವುದಕ್ಕೂ ಪುರಸೊತ್ತಿಲ್ಲದಷ್ಟು ಜನರು ತಮ್ಮ ಕಷ್ಟಗಳನ್ನು ಹೇಳಿಕೊಂಡು ಬಂದದ್ದೇ ಬಂದದ್ದು. ಹೀಗೆ ತಮ್ಮ ಬೇಕುಬೇಡಗಳನ್ನು ಪಟ್ಟಿ ಮಾಡಿಕೊಂಡು ಬಂದವರಲ್ಲಿ ಅನಕ್ಷರಸ್ಥರಿಗಿಂತ ಅಕ್ಷರ ಕಲಿತಂತೆ ಕಾಣುವ ಭಾರಿ ಭಾರಿ ಕಾರುಗಳ, ಝುಗಮಗಿಸುವ ಬಟ್ಟೆ ತೊಟ್ಟ ವೈಟ್‌ಕಾಲರ್ ಜನ ಹರಿದು ಬರುತ್ತಲೇ ಇದ್ದಾರೆ. ಹಲವು ಜನ ನ್ಯಾಯಾಧೀಶರೂ ಇಲ್ಲಿಗೆ ಬಂದುಹೋಗಿದ್ದಾರೆ.



ಮಾರುತಿ ಮುತ್ಯಾ

ಇದನ್ನೆಲ್ಲ ನೋಡಿ ದಿಗ್ಮೂಢನಾಗಿರುವ ಹಣಮಂತ ಅಕ್ಷರಶಃ ತನ್ನಲ್ಲಿ ಭಾಗ್ಯವಂತಿದೇವಿಯೇ ಸೇರಿಕೊಂಡಿದ್ದಾಳೆ, ತಾನು ದೇವಾಂಶಸಂಭೂತನೆಂದೆ ಭ್ರಮಿಸಿಕೊಂಡಿದ್ದಾನೆ. ಯಾರೇ ಬಂದರೂ ಅವರ ಮೈಮುಟ್ಟಿ, ಕೈಮುಟ್ಟಿ ಕೆಲವೇ ದಿನಗಳಲ್ಲಿ ಅವರೆಲ್ಲ ಸಮಸ್ಯೆಗಳು ನೀಗಿ ಹೋಗುತ್ತವೆ ಎಂಬ ಭ್ರಾಮಕ ಕಲ್ಪನೆಯನ್ನು ತನ್ನ ಮೌನ ನಡತೆಯ ಮೂಲಕ ಹುಟ್ಟುಹಾಕಿದ್ದಾನೆ. ಕಾಂಗ್ರೆಸ್ ಪಕ್ಷದ ನೇತಾರನಂತೆ ತನ್ನ ಬಲಗೈಯನ್ನು ಆಗಾಗ ಮೇಲಕ್ಕೆತ್ತಿ ಆಶೀರ್ವದಿಸುವುದು, ಕಾಲಿಗೆ ಬೀಳಿಸಿಕೊಳ್ಳುವುದನ್ನು ಯಾವುದೇ ನಾಚಿಕೆ ಇಲ್ಲದೆ ನಡೆಸಿದ್ದಾನೆ. ಜನ ಮಾತ್ರ ಇವನನ್ನು ಕಾಣುತ್ತಲೇ ತಮ್ಮ ಕಷ್ಟಗಳೆಲ್ಲ, ಅನಾರೋಗ್ಯವೆಲ್ಲ ಹೊರಟುಹೋಯಿತು ಎಂದು ಭಾವಿಸಿ ತಮ್ಮ ಊರಿಗೆ ಹೋಗಿದ್ದಾರೆ. ಹೀಗೆ ಹಲುಬಿಕೊಂಡು ಹೋದವರ ಹಣೆಬರಹ ಏನೇನಾಯಿತೋ ಗೊತ್ತಾಗಿಲ್ಲ!

ಆದರೆ ನಾಲ್ಕಾರು ಜನರನ್ನು ಮಾತ್ರ ಈ ಮುತ್ಯಾ ಅಕ್ಷರಶಃ ಕೊಂದಿದ್ದಾನೆ ಎಂಬ ಸಂಗತಿ ಮಾತ್ರ ಸುಳ್ಳಲ್ಲ. ರಾಯಚೂರು ಜಿಲ್ಲೆಯ ಗ್ರಾಮವೊಂದರ ಯುವತಿಯೂ ಸೇರಿದಂತೆ ಶಹಾಪುರ ತಾಲ್ಲೂಕಿನ ಹಾರಣಗೇರಾ ಗ್ರಾಮದ 14 ವರ್ಷದ ಎಳೆಯ ಹುಡುಗ ಮಾನಪ್ಪ, ಮಾತ್ರ ಅಕ್ಷರಶಃ ಮುತ್ಯಾನ ಮೂಢ ಪ್ರಯೋಗಕ್ಕೆ ಹೆಣವಾಗಿ ಹೋಗಿದ್ದಾನೆ.

ದೇವತೆಯನ್ನು ತನ್ನ ಮೈಮೇಲೆ ಪ್ರವಹಿಸಿಕೊಂಡ ಮಾರುತಿ, ಮಾನಪ್ಪನ ಅಂಗವೈಕಲ್ಯವನ್ನು ಸರಿಪಡಿಸುವ ಭರದಲ್ಲಿ ಅವನ ಎರಡೂ ಕಾಲಿಗೆ ಎಣ್ಣೆಯನ್ನು ಹಚ್ಚಿ ಬಲವಂತವಾಗಿ ಎಳೆದುಬಿಟ್ಟಿದ್ದಾನೆ. ಸುಮಾರು 14 ವರ್ಷಗಳಿಂದಲೂ ಹಾಗೆಯೇ ಸೆಟೆದುಕೊಂಡಿದ್ದ (ಪೋಲೀಯೋ ರೋಗಕ್ಕೆ ತುತ್ತಾಗಿದ್ದ) ಮಾನಪ್ಪನ ಕಾಲುಗಳು ಒಮ್ಮಿದೊಮ್ಮೆ ಎಳೆದುದರ ಪರಿಣಾಮವಾಗಿ ನರಮಂಡಲಕ್ಕೆ ಭಾರಿ ಪೆಟ್ಟಾಗಿ ಜೀವವೇ ಹಾರಿಹೋಗಿದೆ. ಕಾಲು ಸರಿಯಾಗಬಹುದು ಎಂಬ ಆಶಯ (ಮೌಢ್ಯ) ದಿಂದ ಭೀಮರಾಯ ಹೊಳೀರ ತನ್ನ ಮಗ ಮಾನಪ್ಪನನ್ನು ಹೊತ್ತುತಂದಿದ್ದ. ಈಗ ಒಮ್ಮಿದೊಮ್ಮೆ ಹೆಣವಾಗಿ (25 ಆಗಸ್ಟ್ 2007) ಹೋದ ಮಗನನ್ನು ಕಂಡು ಹೌಹಾರಿ ಹೊಯ್ಕಕೊಳ್ಳುತ್ತಾ ಹೋಗಿದ್ದಾನೆ. ಕಾಲು ತೆವಳಿಕೊಂಡಾದರೂ ಆರೋಗ್ಯವಾಗಿ ಇದ್ದ ಹುಡುಗ ಒಮ್ಮಿದೊಮ್ಮೆ ಹೆಣವಾಗಿದನ್ನು ಕಂಡ ಮುತ್ಯಾ ಆಕಾಶವನ್ನೇ ನೋಡುತ್ತ ಕುಳಿತಿದ್ದಾನೆ.

ಹೀಗೆ ಹಾಡೇ ಹಗಲು ದೇವತೆಯ ಹೆಸರನ್ನು ಹೇಳಿ ಮೂಢನಂಬಿಕೆಯನ್ನು ಬೆಳೆಸುತ್ತಿರುವ, ಜನಸಾಮಾನ್ಯರ ಜೀವದ ಜೊತೆಗೆ ಚೆಲ್ಲಾಟ ಆಡುತ್ತಿರುವ ಈ ಮಾರುತಿ ಸಗರನನ್ನು ಕೊಲೆ ಆರೋಪದ ಮೇಲೆ ಬಂಧಿಸಿ ಜೈಲಿಗೆ ಅಟ್ಟಬೇಕು. ಆತನ ಸುತ್ತಮುತ್ತ ನೆರೆದ ಜನರ ಜೇಬಿಗೆ ಕತ್ತರಿ ಹಾಕುತ್ತಿರುವ ಘಟಿಂಗರನ್ನೂ, ಅತಿರಂಜಿತ ವರದಿ ಮಾಡಿದ ಮಾಧ್ಯಮದವರನ್ನೂ ಶಿಕ್ಷೆಗೆ ಗುರಿಪಡಿಸಬೇಕು.

-ವಿಶ್ವಾರಾಧ್ಯ ಸತ್ಯಂಪೇಟೆ

ಉಡುಪಿ: ಬ್ರಾಹ್ಮಣರ ಭೋಜನ ಸಮ್ಮೇಳನ!

74ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅಕ್ಟೋಬರ್ 25 ರಿಂದ 28 ರವರೆಗೆ ಉಡುಪಿಯಲ್ಲಿ ನಡೆಯಲಿದೆ. ಈಗಾಗಲೇ ಅಸ್ತಿತ್ವಕ್ಕೆ ಬಂದಿರುವ ಸಮ್ಮೇಳನದ ಸ್ವಾಗತ ಸಮಿತಿ, ಆಯ್ಕೆಯಾಗಿರುವ ಸಮ್ಮೇಳನಾಧ್ಯಕ್ಷರು, ಆರಂಭಗೊಂಡಿರುವ ಗೋಷ್ಠಿಗಳ ಮತ್ತು ಅತಿಥಿಗಳ ಆಯ್ಕೆ ಪ್ರಕ್ರಿಯೆಗಳನ್ನು ಅವಲೋಕಿಸಿದರೆ; ಇದನ್ನು ಸಂಘ ಪರಿವಾರ ಆಯೋಜಿಸುತ್ತಿರುವ 'ಬ್ರಾಹ್ಮಣರ ಭೋಜನ ಸಮ್ಮೇಳನ' ಎಂದು ಕರೆಯಬೇಕಾಗುತ್ತದೆ.

ಜನಿವಾರಿಗಳ ಜಮಾನಾ

ಪರ್ಯಾಯ ಕೃಷ್ಣಾಪುರ ಮಠದ ವಿದ್ಯಾಸಾಗರ ಸ್ವಾಮಿ, ಶ್ರೀಕ್ಷೇತ್ರ ಧರ್ಮಸ್ಥಳದ ಡಾ. ಡಿ. ವೀರೇಂದ್ರ ಹೆಗ್ಗಡೆ, ಮಣಿಪಾಲ ಸಮೂಹ ಸಂಸ್ಥೆಗಳ ಅಧ್ಯಕ್ಷ ಕೆ.ಕೆ. ಪೈ, ಡಾ. ಎಚ್. ಶಾಂತಾರಾಮ, ಜಿಲ್ಲಾ ಉಸ್ತುವಾರಿ ಸಚಿವ ಬಜೆಪಿಯ ಡಾ. ವಿ.ಎಸ್. ಆಚಾರ್ಯ, ಬಜೆಪಿ ಶಾಸಕ ಕೆ. ರಘುಪತಿ ಭಟ್ ಹಾಗೂ ಕನ್ನಡ ಸಾಹಿತ್ಯ ಪರಿಷತ್ ಜಿಲ್ಲಾಧ್ಯಕ್ಷ ಉಪ್ಪುಂದ ಚಂದ್ರಶೇಖರ ಹೊಳ್ಳ, ಕೆ. ಪದ್ಮನಾಭ ಭಟ್ಟ ಮೊದಲಾದವರು ಸಮ್ಮೇಳನದ ಮತ್ತು ವಿವಿಧ ಉಪಸಮಿತಿಗಳ ಒಟ್ಟಾರೆ ನಿರ್ದೇಶಕರೂ, ನಿಯಂತ್ರಕರೂ ಆಗಿ ಕಾರ್ಯಾಚರಣೆ ಆರಂಭಿಸಿದ್ದಾರೆ.

ಈಗಾಗಲೇ 43 ಉಪಸಮಿತಿಗಳನ್ನು ರಚಿಸಲಾಗಿದ್ದು ಇವುಗಳ ಮುಖ್ಯಸ್ಥರಾಗಿಯೂ, ಸಂಚಾಲಕರಾಗಿಯೂ ಆಯ್ಕೆಯಾದ ಹೆಚ್ಚಿನವರೂ ಹಿಂದೂತ್ವವಾದಿಗಳಾಗಿದ್ದಾರೆ.

ಬ್ರಾಹ್ಮಣ್ಯದ ವಕ್ತಾರರಾಗಿರುವ ದಾಮೋದರ ಐತಾಳ, ಎಂ.ವಿ. ಮಯ್ಯ, ರಂಗಪ್ಪಯ್ಯ ಹೊಳ್ಳ, ಪೇಜಾವರ ಮಠದ ದಿವಾನ ರಘುರಾಮ ಆಚಾರ್ಯ, ಪ್ರೊ. ಶ್ರೀಪತಿ ತಂತ್ರಿ, ಡಾ. ಪಾದೆಕಲ್ಲು ವಿಷ್ಣುಭಟ್, ಪ್ರೊ. ಹೇರಂಜೆ ಕೃಷ್ಣಭಟ್, ಯು. ರಮೇಶ್ ವೈದ್ಯ, ಯು. ರಮೇಶ್ ಕಾರಂತ, ಸತ್ಯನಾರಾಯಣ ಉಡುಪ, ಪ್ರೊ. ಎಂ.ಎಲ್. ಸಾಮಗ, ಪ್ರೊ. ಎ.ಪಿ. ಮಿತ್ತಂತ್ತಾಯ ಮುಂತಾದವರು ವಿವಿಧ ಸಮಿತಿಗಳಲ್ಲಿ ಮುಖ್ಯಸ್ಥರ ಹೊಣೆ ಹೊತ್ತಿದ್ದಾರೆ.


ಸಂಘ ಪರಿವಾರದ ನಾಯಕರುಗಳಾದ ಬೈಕಾಡಿ ಸುಪ್ರಸಾದ ಶೆಟ್ಟಿ, ಕಟಪಾಡಿ ಶಂಕರ ಪೂಜಾರಿ, ಮೋಹನ ಆಳ್ವ, ಕಿರಣ ಕೊಡ್ಗಿ, ಗುಜ್ಜಾಡಿ ಪ್ರಭಾಕರ ನಾಯಕ್, ಶೀಲಾ ಕೆ. ಶೆಟ್ಟಿ, ಚಿತ್ತರಂಜನ್ ದಾಸ್ ಹೆಗ್ಡೆ ಭುವನೇಂದ್ರ ಕಿದಿಯೂರು, ವಿಜಯಕುಮಾರ ಉದ್ಯಾವರ, ಲಾಲಾಜಿ ಆರ್. ಮೆಂಡನ್ ಮೊದಲಾದವರೂ ಸ್ಥಾನ ಪಡೆದಿದ್ದಾರೆ.


ಬಜೆಪಿಯ ತಿಂಗಳೆ ವಿಕ್ರಮಾರ್ಜುನ ಹೆಗ್ಡೆ, ಸುವರ್ಧನ ನಾಯಕ್, ಹರಿಕೃಷ್ಣ ಶಿವತ್ತಾಯ, ಪುಂಡಲೀಕ ಮರಾಠೆ, ಕೃಷ್ಣಮಠದ ಶ್ರೀಧರ ಭಟ್ಟ, ಶಾಂತಾರಾಜ ಐತಾಳ್, ಸಹನಶೀಲ ಪೈ, ಸುಭಾಷಿತ್ ಕುಮಾರ್, ವಸಂತಿ ಶೆಟ್ಟಿ ಬ್ರಹ್ಮಾವರ, ಡಾ. ಗಣಪತಿ ಭಟ್.... (ಹೀಗೆ ಪಟ್ಟಿ ಮುಂದುವರಿಯುತ್ತಿದೆ) ಸಂಚಾಲಕರುಗಳಾಗಿ ಅಧಿಕಾರ ಸ್ವೀಕರಿಸಿದ್ದಾರೆ.


ಸ್ವಾಗತ ಸಮಿತಿಯಲ್ಲಿರುವ ಬಹುತೇಕ ಮಂದಿ ಮನುವಾದಿಗಳೂ, ಬ್ರಾಹ್ಮಣ್ಯದ ಪ್ರತಿಪಾದಕರೂ, ಸಂಘ ಪರಿವಾರದ ವಕ್ತಾರರೂ ಆಗಿದ್ದಾರೆ. ಕನ್ನಡ ನಾಡು-ನುಡಿಯ ಹಿತರಕ್ಷಣೆಗಾಗಿಯಾಗಲಿ, ಸೌಹಾರ್ದ-ಸಾಮರಸ್ಯದ ಬದುಕಿಗಾಗಿ ಇವರ ಕೊಡುಗೆ ನಗಣ್ಯ. ಜಾತಿ-ಜಾತಿಗಳ ನಡುವೆ, ಮತ ಧರ್ಮಗಳ ಮಧ್ಯೆ, ಗಂಡು-ಹೆಣ್ಣಿನ ನಡುವೆ ವಿಷ ಬಿತ್ತಿದ್ದೇ ಇವರ ಸಾಧನೆ.

ಅಯೋಧ್ಯೆಯಲ್ಲಿನ ಬಾಬರಿ ಮಸೀದಿಯನ್ನು ಧ್ವಂಸಗೈಯಲು ಪ್ರೇರಣೆ ನೀಡಿದವರು, ಅಲ್ಪಸಂಖ್ಯಾತರ ಮೇಲಿನ ಆಕ್ರಮಣ ಮತ್ತು ಸಂಪತ್ತಿನ ದರೋಡೆಗೆ ಬೆಂಬಲ ನೀಡಿದವರು, ಆದಿ ಉಡುಪಿ ಬೆತ್ತಲೆ ಪ್ರಕರಣವನ್ನು ಸಮರ್ಥಿಸಿದವರು, ದನದ ವ್ಯಾಪಾರಿ ಕೃಷ್ಣಯ್ಯ ಪಾಟಾಳಿ, ಬಡ ಕಾರ್ಮಿಕ ಹೆಜಮಾಡಿ ವನಿತಾ ಹೀಗೆ ಹಲವರನ್ನು ಕೊಂದ ಭಜರಂಗಿ ಪಡೆಯನ್ನು ರಕ್ಷಿಸಿದವರು ಸ್ವಾಗತ ಸಮಿತಿ ಪದಾಧಿಕಾರಿಗಳಾಗಿದ್ದಾರೆ.

ಜನವಿರೋಧಿ ಮತ್ತು ಪರಿಸರ ಮಾರಕ ಟೆಗ್ಮಾ, ಎಸ್‌ಇಝೆಡ್, ನಾಗಾರ್ಜುನ ಉಷ್ಣ ವಿದ್ಯುತ್ ಸ್ಥಾವರ ಸಹಿತ ರೈತರ, ಕೃಷಿಕರ, ಕಾರ್ಮಿಕರ, ಮೀನುಗಾರರ ಬದುಕುವ ಹಕ್ಕುಗಳನ್ನೇ ಕಸಿದುಕೊಳ್ಳುತ್ತಿರುವ ವಿದೇಶಿ ಹಿತಾಸಕ್ತಿಗಳ ಪರವಾಗಿ ಹಣ ಪಡೆದು ವಕಾಲತ್ತು ವಹಿಸಿದವರು, ಸೃಜನಶೀಲ, ಪ್ರಗತಿಪರ ವೈಚಾರಿಕ ಸಾಹಿತ್ಯ ಕೃತಿಗಳ ವಿರೋಧಿಗಳು ಸಾಹಿತ್ಯ ಸಮ್ಮೇಳನದ ಸಂಘಟಕರೆಂಬ ಮುಖವಾಡ ಧರಿಸಿದ್ದಾರೆ.




ವೀರೇಂದ್ರ ಹೆಗ್ಗಡೆ


ಶೇಷಗಿರಿರಾವ್

ಪಕ್ಷಪಾತ-ಸರ್ವಾಧಿಕಾರ

ನಾಲ್ಕು ದಿನಗಳ ಸಮ್ಮೇಳನಾಧ್ಯಕ್ಷರಾಗಿ ಎಲ್.ಎಸ್. ಶೇಷಗಿರಿರಾವ್ ಆಯ್ಕೆಯಾಗಿದ್ದಾರೆ ಅಥವಾ ನೇಮಕಗೊಂಡಿದ್ದಾರೆ. ಸಂಘ ಪರಿವಾರದ ಸಂಘಟನೆಗಳಲ್ಲಿ ಒಂದಾದ ರಾಷ್ಟ್ರೋತ್ಥಾನ ಪರಿಷತ್ತಿನ ಅಧ್ಯಕ್ಷರಾಗಿದ್ದವರು ಶೇಷಗಿರಿರಾವ್.

ಹಿಂದೂತ್ವದ ವಕ್ತಾರರಾದ ರಾವ್ ಅವರನ್ನು ಕೇಂದ್ರ ಕಸಾಪ ಅಧ್ಯಕ್ಷ ಚಂದ್ರಶೇಖರ ಪಾಟೀಲರು ಬೆಂಗಳೂರಿನಲ್ಲಿ ಜುಲೈ 29 ರಂದು ನಡೆದ ಕೇಂದ್ರ ಕಸಾಪ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಸಮ್ಮೇಳನಾಧ್ಯಕ್ಷರೆಂದು ನೇಮಕ ಮಾಡಿದರು.

ಅಂದಿನ ಸಭೆಯಲ್ಲಿ ಶೇಷಗಿರಿ ರಾವ್ ಹೆಸರನ್ನು ಸೂಚಿಸಿದವರು ಹತ್ತು ಮಂದಿಯಾದರೆ, ವ್ಯಾಸರಾಯ ಬಲ್ಲಾಳರ ಹೆಸರು ಸೂಚಿಸಿದವರು ಹದಿಮೂರು ಮಂದಿ.

ಪ್ರಜಾತಂತ್ರದ ಪ್ರಕಾರವೇ ಕಸಾಪ ನಡೆದುಕೊಳ್ಳುವುದಾದರೆ, ಬಹುಮತ ಪಡೆದ ಬಲ್ಲಾಳರು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಬೇಕಾಗಿತ್ತು, ಆದರೆ ಕಸಾಪ ಅಧ್ಯಕ್ಷ ಚಂಪಾ ಏಕಪಕ್ಷೀಯವಾಗಿ, ಶೇಷಗಿರಿರಾವ್ ಅವರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ನೇಮಕ ಮಾಡಿ ಪಕ್ಷಪಾತವೆಸಗಿದರು. ಬರಲಿರುವ ಬಜೆಪಿ ಸರ್ಕಾರವನ್ನು ಓಲೈಸುವುದರಲ್ಲಿ ಯಶಸ್ವಿಯಾದರು. ಜತೆಗೆ ನಾಚಿಕೆ, ಮಾನ-ಮರ್ಯಾದೆಯನ್ನೂ ಕಳೆದುಕೊಂಡರು.

ಸುಳ್ಳರ ಸಂಘ-ಅಭಿಮಾನ ಭಂಗ!

ಕಳೆದ ಎರಡು ತಿಂಗಳ ಅವಧಿಯಲ್ಲಿ ಸಮ್ಮೇಳನ ಸಂಘಟಕರು ಸಂಘ ಪರಿವಾರದವರ ಸಹಜ ಸ್ವಭಾವಗಳಲ್ಲಿ ಒಂದಾಗಿರುವ ಸುಳ್ಳು ಹೇಳುವುದನ್ನು ಪ್ರಾರಂಭಿಸಿರುವುದು ಸಾಬೀತಾಗಿದೆ.

ಸಮ್ಮೇಳನಾಧ್ಯಕ್ಷರ ಆಯ್ಕೆ ವಿಚಾರದಲ್ಲಿ, ಉದ್ಘಾಟನೆಗೆ ವ್ಯಾಸರಾಯ ಬಲ್ಲಾಳರನ್ನು ಆಹ್ವಾನಿಸುವ ವಿಷಯದಲ್ಲಿ, ಗೋಷ್ಠಿಗಳ ಮತ್ತು ಅತಿಥಿಗಳ ಆಯ್ಕೆ ಪ್ರಕ್ರಿಯೆಯಲ್ಲಿ ಇದು ಸ್ಪಷ್ಟವಾಗಿ ಕಂಡುಬಂದಿದೆ.

ಬಲ್ಲಾಳರನ್ನು ಸಂಪರ್ಕಿಸದೆ, ಸಮ್ಮೇಳನದ ಉದ್ಘಾಟಕರು ಅವರೆಂದು ಘೋಷಿಸಲಾಯಿತು. ಬಳಿಕ ಅವರ ಮನವೊಲಿಸುವ ಪ್ರಯತ್ನ ನಡೆದಿದೆಯೆಂದು ಪ್ರಕಟಿಸಲಾಯಿತು. ನಂತರ ಅಧ್ಯಾಯ ಮುಗಿದಿದೆ, ಆ ಹೊಸ ಉದ್ಘಾಟಕರನ್ನು ಆಯ್ಕೆ ಮಾಡುವುದಾಗಿ ಪತ್ರಿಕಾ ಹೇಳಿಕೆ ನೀಡಲಾಯಿತು.

ವ್ಯಾಸರಾಯ ಬಲ್ಲಾಳರೇ ತಿಳಿಸಿದಂತೆ, ಸಾಹಿತ್ಯ ಸಮ್ಮೇಳನಕ್ಕೆ ಸಂಬಂಧಿಸಿದಂತೆ ಚಂಪಾ ಇದುವರೆಗೂ ಬಲ್ಲಾಳರನ್ನು ಸಂಪರ್ಕಿಸಿಯೇ ಇಲ್ಲ! ಚಂಪಾ ಹೇಳಿದ ಸುಳ್ಳನ್ನು ಸ್ವಾಗತ ಸಮಿತಿ ಪದಾಧಿಕಾರಿಗಳೂ ಮತ್ತೆಮತ್ತೆ ಹೇಳಿ ಮಹಾ ಸುಳ್ಳುಗಾರರು ಎನ್ನಿಸಿಕೊಂಡಿದ್ದಾರೆ.

ಅಧಿಕಾರ ಮದ!


ಸ್ವಾಗತ ಸಮಿತಿಯ ಪ್ರಧಾನ ಪದಾಧಿಕಾರಿಗಳಿಗೆ ಅಧಿಕಾರವೆಂಬ ಮದ ತಲೆಗೇರಿದಂತಿದೆ. ವ್ಯಾಸರಾಯ ಬಲ್ಲಾಳರು ಸಮ್ಮೇಳನಾಧ್ಯಕ್ಷರಾಗಿ ಆಯ್ಕೆಯಾಗಿಯೇ ಬಿಟ್ಟರು ಎಂಬಂತೆ ಮಾಧ್ಯಮಗಳ ಮೂಲಕ ಡಾಣಾಢಂಗುರ ಬಾರಿಸಿದ ಸ್ವಾಗತ ಸಮಿತಿ ಮುಖ್ಯಸ್ಥರು; ಇದೀಗ ಇದೇ ರೀತಿಯಲ್ಲಿ ಗೋಷ್ಠಿಗಳನ್ನು ಮತ್ತು ಅತಿಥಿಗಳನ್ನು ಆಯ್ಕೆ ಮಾಡುವ ಪ್ರಕ್ರಿಯೆ ನಡೆಸಿದ್ದಾರೆ.

ಕರಾವಳಿಯ ಇತ್ತೀಚಿಗಿನ ಸ್ಥಿತ್ಯಂತರಗಳು ಎಂಬ ವಿಷಯದ ಮೇಲೆ ಗೋಷ್ಠಿಯೊಂದನ್ನು ನಡೆಸಲಾಗುವುದೆಂದೂ, ಇದರಲ್ಲಿ ಧಾರ್ಮಿಕ, ಕೈಗಾರಿಕಾ ಮತ್ತು ಪರಿಸರ, ಶಿಕ್ಷಣ ಮತ್ತು ಉದ್ಯೋಗ, ಕೃಷಿ ಮತ್ತು ಗ್ರಾಮೀಣ ಬದುಕು ಕುರಿತು ಪ್ರಬಂಧ ಮಂಡನೆಗೆ ಅವಕಾಶ ಒದಗಿಸಲಾಗುವುದೆಂದೂ, ಇದಕ್ಕೆ ಜಿ. ರಾಜಶೇಖರ, ಡಾ. ಮಹಾಬಲೇಶ್ವರ ರಾವ್, ಲಕ್ಷ್ಮೀಶ ತೋಳ್ಪಾಡಿ, ಡಾ. ಕೃಷ್ಣಕೋತಾಯ ಇವರನ್ನು ಸಂಪನ್ಮೂಲ ವ್ಯಕ್ತಿಗಳನ್ನಾಗಿ ಆಹ್ವಾನಿಸಲಾಗುವುದೆಂದೂ ಸ್ವಾಗತ ಸಮಿತಿಯ ಪ್ರಧಾನ ಕಾರ್ಯದರ್ಶಿ ಉಪ್ಪುಂದ ಚಂದ್ರಶೇಖರ ಹೊಳ್ಳ ಬಹಿರಂಗಪಡಿಸಿದ್ದಾರೆ.

ಬಲ್ಲಾಳರನ್ನು ಸಮ್ಮೇಳನಾಧ್ಯಕ್ಷರನ್ನಾಗಿ ಏಕಪಕ್ಷೀಯವಾಗಿ ಘೋಷಿಸಿ, ಅಂತಿಮವಾಗಿ ತಾವೂ ಅವಮಾನಿತರಾಗಿ, ಬಲ್ಲಾಳರಿಗೂ ಅಪಮಾನವಾಗುವಂತೆ ನಡೆದುಕೊಂಡ ಹೊಳ್ಳರ ಕಾರ್ಯಶೈಲಿ ಈ ಗೋಷ್ಠಿಗೂ, ಈ ಸಂಪನ್ಮೂಲ ವ್ಯಕ್ತಿಗಳಿಗೂ ಬಂದೆರಗಿದರೆ ಆಶ್ಚರ್ಯವಿಲ್ಲ.

ಪ್ರಗತಿಪರ ಚಿಂತಕರೂ, ನಾಡಿನ ಮುಖ್ಯ ಕೋಮುವಾದಿ ವಿರೋಧಿ ಹೋರಾಟಗಾರರೂ ಆದ ಜಿ. ರಾಜಶೇಖರ ಅವರು ಧಾರ್ಮಿಕ ವಿಷಯಗಳ ಕುರಿತು ಮಾತನಾಡಬೇಕಂತೆ!

ಈ ಹಿಂದೆಯೂ ಸಮ್ಮೇಳನಗಳಲ್ಲಿ ಭಾಗವಹಿಸದ, ಧರ್ಮಸ್ಥಳದಲ್ಲಿ ಸಮ್ಮೇಳನ ನಡೆದಾಗ ಬಂಡಾಯ ಸಾಹಿತ್ಯ ಸಮ್ಮೇಳನ ಸಂಘಟಿಸಿದ, ತತ್ವಾದರ್ಶಗಳನ್ನು ಇರಿಸಿಕೊಂಡಿರುವ ರಾಜಶೇಖರ ಅವರು, ಈ ಹಿಂದಿನಂತೆಯೇ ಸಮ್ಮೇಳನದಲ್ಲಿ ಭಾಗವಹಿಸುವುದಿಲ್ಲವೆಂದು ಸ್ಪಷ್ಟಪಡಿಸಿದ್ದಾರೆ.


ಮಂತ್ರಿ ವಿ.ಎಸ್. ಆಚಾರ್ಯ

ಉಳಿದಂತೆ; ಸಂಪನ್ಮೂಲ ವ್ಯಕ್ತಿಗಳಾಗಿ ಆಹ್ವಾನಿತರಾಗಲಿರುವ ಲಕ್ಷ್ಮೀಶ ತೋಳ್ಪಾಡಿಯವರು ಸಂಘ ಪರಿವಾರಕ್ಕೆ ಸೇರಿದ ಭಾರತೀಯ ಕಿಸಾನ್ ಸಂಘದ ರಾಜ್ಯ ಕಾರ್ಯದರ್ಶಿಗಳಾಗಿದ್ದಾರೆ. ಸ್ವಾಗತ ಸಮಿತಿ ತನ್ನ ನಿರ್ಧಾರಗಳಲ್ಲಿ ಹಿಂದೂತ್ವವಾದದ ಅಜೆಂಡಾವನ್ನು ತಂದೇ ತರುತ್ತದೆ ಎನ್ನುವುದಕ್ಕೆ ಇದು ಒಂದು ಸಾಕ್ಷಿಯಾಗಿದೆ.

ಅಡ್ಡಗೋಡೆ ಮೇಲೆ ದೀಪವಿಟ್ಟಂತೆಯೂ, ಹಾವೂ ಸಾಯಬಾರದು; ಕೋಲೂ ಮುರಿಯಬಾರದು ಎಂಬಂತೆಯೂ ಮಾತನಾಡುವ 'ಗಣ್ಯ'ರನ್ನೇ ಸ್ವಾಗತ ಸಮಿತಿ ಅತಿಥಿಗಳನ್ನಾಗಿ ಆಹ್ವಾನಿಸಲಿದೆ ಎನ್ನುವುದು ನಿಗೂಢ ರಹಸ್ಯವಾಗಿಯೇನೂ ಉಳಿದಿಲ್ಲ.

ಭೋಜನ ಸಮ್ಮೇಳನ

ಈಗಾಗಲೇ ನಡೆದ ಸ್ವಾಗತ ಸಮಿತಿ ಸಭೆಗಳಲ್ಲಿ ಮತ್ತು ಬ್ರಾಹ್ಮಣರೇ ಹೆಚ್ಚಾಗಿ ಇರುವ ಸಂಸ್ಥೆಯೊಂದು ನಡೆಸಿದ ಸಮ್ಮೇಳನ ಹೇಗಿರಬೇಕು ಎಂಬ ಸಮಾರಂಭದಲ್ಲಿ ಚರ್ಚೆಯ ಅಧಿಕ ಸಮಯ ನುಂಗಿದ್ದು ಭೋಜನದ ಬಗ್ಗೆಯೇ!

ಸಾಹಿತ್ಯ ಸಮ್ಮೇಳನವನ್ನು ಬ್ರಾಹ್ಮಣರ ಭೋಜನ ಸಮ್ಮೇಳನವನ್ನಾಗಿ ಪರಿವರ್ತಿಸುವ ಸಲುವಾಗಿಯೇ, ಕೃಷ್ಣಮಠದ ಶ್ರೀಧರ ಭಟ್ಟರನ್ನೂ, ಪೇಜಾವರ ಮಠದ ರಘುರಾಮ ಆಚಾರ್ಯರನ್ನೂ, ಹಿಂದೂ ಯುವ ಸೇನೆಯ ವಾಸುದೇವ ಭಟ್ಟರನ್ನೂ ಒಳಗೊಂಡಿರುವ ಊಟೋಪಚಾರ ಸಮಿತಿ ಸಕ್ರಿಯವಾಗಿದೆ.

ಮೀನುಗಾರರೇ ಬಹುಸಂಖ್ಯಾತರಾಗಿರುವ ಮಾಂಸಾಹಾರಿಗಳ ನಾಡು, ಬಹುಜನರ ಸಂಸ್ಕೃತಿಯ ಬೀಡಾದ ಕರಾವಳಿಯ ಉಡುಪಿಯಲ್ಲಿ ನಡೆಯಲಿರುವ ಸಾಹಿತ್ಯ ಸಮ್ಮೇಳನದಲ್ಲಿ ಏಕಮುಖ ಸಂಸ್ಕೃತಿಯ ಪ್ರತೀಕವಾದ ಸಸ್ಯಾಹಾರವನ್ನು ಹೇರುವ ಹುನ್ನಾರ ಬ್ರಾಹ್ಮಣ್ಯದ ವಕ್ತಾರರದ್ದಾಗಿದೆ. ಸಾಹಿತ್ಯ ಸಮ್ಮೇಳನದ ಮಾಹಿತಿ ಸಂಚಿಕೆಯೊಂದರಲ್ಲಿ ಸುಮಾರು ಒಂದೂವರೆ ಪುಟಗಳನ್ನು ಭೋಜನ ವೈವಿಧ್ಯತೆಗೆ ಸಂಬಂಧಿಸಿದಂತೆ ಹಿಂದಿನ ಕಾಲದ ವಿದ್ವಾಂಸರು ಬರೆದ ಕವನಗಳನ್ನು ಪ್ರಕಟಿಸಿರುವುದು ಸ್ವಾಗತ ಸಮಿತಿಯ ನಿಜವಾದ ಆಸಕ್ತಿಗೆ ಪುರಾವೆಯಾಗಿದೆ.

ಪರ್ಯಾಯ

ಆಕ್ರಮಣಕಾರಿ ಚರಿತ್ರೆಯನ್ನು ಹೊಂದಿರುವ ಮೇಲ್ಜಾತಿ ಜನರ ಪಾರುಪತ್ಯದಲ್ಲಿ ನಡೆಯುವ ಭೋಜನ ಸಮ್ಮೇಳನಕ್ಕೆ ಪರ್ಯಾಯವಾಗಿ, ಜನಪರವಾದ ವಿಚಾರಗಳನ್ನು ಮುಂದಿಟ್ಟುಕೊಂಡು ಪ್ರತಿಭಟನಾ ಸಮ್ಮೇಳನ ಹಮ್ಮಿಕೊಳ್ಳಲು ಜಿಲ್ಲೆಯ ಪ್ರಗತಿಪರ ಸಂಘಟನೆಗಳು ಹಾಗೂ ಪ್ರಗತಿಶೀಲ ಚಿಂತಕರು ನಿರ್ಧರಿಸಿದ್ದಾರೆ.

ಇತ್ತೀಚೆಗೆ ಬೆಂಗಳೂರಿನಲ್ಲಿ ನಡೆದ ಕರ್ನಾಟಕ ಕೋಮು ಸೌಹಾರ್ದ ವೇದಿಕೆಯ ಕೇಂದ್ರ ಸಮಿತಿ ಸಭೆಯು ಕೋಮುವಾದೀಕರಣಗೊಳ್ಳುತ್ತಿರುವ ಉಡುಪಿ ಸಾಹಿತ್ಯ ಸಮ್ಮೇಳನವನ್ನು ಬಹಿಷ್ಕರಿಸಬೇಕೆಂದು ಪ್ರಜ್ಞಾವಂತ ಸಾಹಿತಿಗಳಿಗೆ ಕರೆ ಕೊಟ್ಟಿದೆ.

ಈ ಬೆಳವಣಿಗೆ ಕೋಮುವಾದಿ ಸಾಹಿತ್ಯ ಸಮ್ಮೇಳನ ಸಂಘಟಕರಲ್ಲಿ ತೀವ್ರ ಕಳವಳವನ್ನುಂಟು ಮಾಡಿದೆ.

-ಶ್ರೀರಾಮ ದಿವಾಣ

ಸುಮ್ ಸುಮ್ಮನೆ

ಪಾಕಿಸ್ತಾನದ ಅಧ್ಯಕ್ಷ ಮುಷರಫ್‌ರವರ ಬೇಗಂ ಇತ್ತೀಚಿನ ಬೆಳವಣಿಗೆಗಳನ್ನು ಕಂಡು ಕಂಗಾಲಾಗಿದ್ದಾರಂತೆ. ಅದರಲ್ಲೂ "ಮುಷರಫ್‌ರವರು ತಮ್ಮ ಸೈನ್ಯದ ಸಮವಸ್ತ್ರವನ್ನು ಕಳಚಿದರೆ ಅವರನ್ನು ಒಪ್ಪಿಕೊಳ್ಳಲು ನಾನು ಸಿದ್ಧ" ಎಂದು ಬೆನಜಿರ್ ಭುಟ್ಟೋ ಹೇಳಿರುವುದು ಬೇಗಂರವರನ್ನು ಚಿಂತಾಕ್ರಾಂತರನ್ನಾಗಿಸಿದೆಯಂತೆ!

ಪ್ರಜಾಸ್ವಾತಂತ್ರ್ಯ ಕುರಿತಂತೆ ಭಾರತ ಮತ್ತು ಅಮೆರಿಕದ ನಡುವೆ ಇರುವ ವ್ಯತ್ಯಾಸ ಏನೆಂದರೆ

ಅಮೆರಿಕದಲ್ಲಿ ಸಾರ್ವಜನಿಕ ಜಾಗಗಳಲ್ಲಿ ಚುಂಬಿಸಬಹುದು ಆದರೆ ಮೂತ್ರ ವಿಸರ್ಜನೆ ಮಾಡುವಂತಿಲ್ಲ, ಭಾರತದಲ್ಲಿ ಕಂಡಕಂಡಲೆಲ್ಲ ಮೂತ್ರ ವಿಸರ್ಜನೆ ಮಾಡಬಹುದು, ಆದರೆ ಚುಂಬಿಸುವಂತಿಲ್ಲ!



ಆನೆ ಮತ್ತು ಇರುವೆಯ ನಡುವೆ ಪ್ರೇಮ ವಿವಾಹವಾಯಿತು. ಆದರೆ ಮಾರನೆಯ ದಿನವೇ ಆನೆ ಸತ್ತು ಹೋಯಿತು. ದುಃಖಭರಿತ ಇರುವೆ "ಛೇ! ಪ್ರೇಮವೇ! ಒಂದು ದಿನದ ಪ್ರೀತಿ ಸಿಕ್ಕಿತು, ಆದರೆ ಜನ್ಮಪೂರ್ತಿ ಗುಂಡಿ ತೋಡಬೇಕಲ್ಲಾ!" ಎಂದು ರೋದಿಸಿತು!

ಸಚಿವ ನಾಗರಾಜ ಶೆಟ್ಟಿಯ ಪ್ರೇಮಾಯಣ

ಬಿಜೆಪಿಗಳಿಗೆ ಅಧಿಕಾರ ಅಂತ ಒಂದು ಸಿಕ್ಕಿಬಿಟ್ಟರೆ ರಾಮನಾಮ ಮರೆತು ಕೃಷ್ಣ ಭಜನೆ ಶುರು ಮಾಡುವುದು, ಹಿಂದೂತ್ವ ಬಿಟ್ಟು ಹೆಂಗಸರ ಹಿಂದೆ ಅಲೆಯುವುದು ಇವೆಲ್ಲಾ ಮಾಮೂಲಿ ಎಂಬಂತಾಗಿ ಬಿಟ್ಟಿದೆ.


ಮಾನ್ಯ ಮುಜರಾಯಿ ಸಚಿವ ಅರ್ಥಾತ್ ಆಧ್ಯಾತ್ಮ, ದೇವರು, ದೇವಸ್ಥಾನ ಇತ್ಯಾದಿ ಧಾರ್ಮಿಕ ವಿಚಾರಗಳ ಮಂತ್ರಿ ನಾಗರಾಜ ಶೆಟ್ಟರು ಇತ್ತೀಚೆಗೆ ಇಂಥದ್ದೇ ಒಂದು ಹಗರಣ ಮಾಡಿಕೊಂಡಿದ್ದಾರೆ. ಸಚಿವರ ಸಹಾಯಕ ರಾಮಪ್ಪ ಯಾನೆ ರಾಮು ಎಂಬುವನ ಪತ್ನಿ ಪ್ರೇಮಾ ಯಾನೆ ರುಕ್ಮಿಣಿ ಎಂಬಾಕೆ ಕಳೆದ ವಾರ ಏಕಾಏಕಿ ಸಚಿವರ ಅಧಿಕೃತ ಬಂಗಲೆಯ ಮಹಡಿ ಏರಿ ಧುಮುಕಿ ಸಾಯಲು ಹೊರಟದ್ದು ಹೊರ ಜಗತ್ತಿನ ಗಮನಕ್ಕೆ ಬರಲಿಲ್ಲ. ರಾಜಮಹಲ್ ವಿಲಾಸ ಬಡಾವಣೆಯ ಈ ಮನೆಯಲ್ಲಿ ನಡೆಯುತ್ತಿದ್ದ ಒಂದು ಪ್ರೇಮ ವಿಲಾಸ ಹಾಗೂ ಅದರಿಂದ ಹುಟ್ಟಿದ ಒಂದು ತ್ರಿಕೋನ ಅಲ್ಲಲ್ಲ ಚತುಷ್ಕೋನ ಪ್ರೇಮ ಪ್ರಕರಣವೇ ಈ ಆತ್ಮಹತ್ಯಾ ಪ್ರಕರಣದ ಮೂಲ ಕಾರಣವಾಗಿತ್ತು.

ಕರಾವಳಿಯ ಹಿಂದೂ ವೀರ ನಾಗರಾಜ ಶೆಟ್ಟಿ ಮತ್ತವರ ಸಹಾಯಕ ರಾಮ, ಮತ್ತವನ ನವವಿವಾಹಿತ ಪತ್ನಿ ಚಿಂತಾಮಣಿಯ ಪ್ರೇಮ ಹಾಗೂ ಸಚಿವರ ಗನ್‌ಮ್ಯಾನ್ ನಗರ ಸಶಸ್ತ್ರ ಪಡೆಯ ನಾಗರಾಜ ಈ ಪ್ರಕರಣದ ಪ್ರಮುಖ ಪಾತ್ರಧಾರಿಗಳಾಗಿದ್ದಾರೆ.

ರಾಮ-ಪ್ರೇಮ-ಕಾಮ

ರಾಮಭಕ್ತ ನಾಗರಾಜ ಶೆಟ್ಟರ ಗರಿಗರಿ ರೇಷ್ಮೆ ಪಂಚೆ-ಜುಬ್ಬಾ ಹಾಗೂ ಲಕಲಕ ಎಂದು ಮಿಂಚುವ ಚಿನ್ನದ ಸರ ಉಂಗುರಗಳ ಹಿಂದೆ ಒಬ್ಬ ಊಹಾತೀತ ರಂಗೀಲಾ ಇದ್ದಾನೆ. ಶೆಟ್ಟರು ಹಿಂದೊಮ್ಮೆ ಕ್ಯಾಂಪ್ಕೊಗೆ ಅಧ್ಯಕ್ಷರಾಗಿದ್ದಾಗ ಅಲ್ಲಿ ಕೆಲಸಕ್ಕೆ ಬರುತ್ತಿದ್ದ ಕೆಲ ಮಹಿಳೆಯರಿಗೆ 'ನೀವು ಚೂಡಿದಾರ್ ಹಾಕೋಳಿ, ಬಹಳ ಚಂದ ಕಾಣುವುದುಂಟು' ಎಂದೆಲ್ಲಾ ಉದ್ರಿ ಸಲಹೆ ಕೊಟ್ಟು ಗಲಾಟೆ ಮಾಡಿಕೊಂಡಿದ್ದರು. ಹೀಗೆ ಹೆಂಗಸರಿಗೆ ಕಿರುಕುಳ ಕೊಡುವ ಕೆಟ್ಟ ಚಾಳಿಯಿಂದಾಗಿ ಅದೊಂದು ಗಲಾಟೆಯೂ ಆಗಿ ಕ್ಯಾಂಪ್ಕೊ ಮಹಿಳೆಯರೆಲ್ಲಾ ಪ್ರತಿಭಟನೆಗೆ ಹೊರಟಾಗ ಬಿಜೆಪಿಯ ಸದಾನಂದಗೌಡ ಹಾಗೂ ಆರ್‌ಎಸ್‌ಎಸ್‌ನ ಕಲ್ಲಡ್ಕ ಪ್ರಭಾಕರ್ ಹೇಗೋ ತೇಪೆ ಹಚ್ಚಿ ಗಲಾಟೆ ತಣ್ಣಗಾಗಿಸಿದ್ದರು. ಆಗಲೇ ಕೃಷ್ಣ-ಸುನಿಲ್ ಎಂಬ ಚೇರಕೆಗಳಿಬ್ಬರು ಶೆಟ್ಟರಿಗೆ ದುಬೈ-ಬಾಂಬೆಯ ಮೋಹಕ ಜಗತ್ತಿನ ಲಿಂಕುಗಳನ್ನು ಕೊಡಿಸುವ ಜವಾಬ್ದಾರಿ ವಹಿಸಿಕೊಂಡಿದ್ದರು. ಅದೇರೀತಿ ವೆಂಕಟ್ ಎಂಬ ಮಲೆಯಾಳಿಯೊಬ್ಬ ಕೇರಳ ಪ್ರಾಂತ್ಯದಲ್ಲಿ ಶೆಟ್ಟರ ಮನರಂಜನಾ ವ್ಯವಸ್ಥೆ ನೋಡಿಕೊಳ್ಳುತ್ತಿದ್ದ. ಇದು ಈಗಲೂ ಮುಂದುವರೆದಿದೆ ಬಿಡಿ.


ಈ ಅಬ್ಬೇಪಾರಿ ರಾಮ ಶೆಟ್ಟರಿಗೆ ಪರಿಚಯವಾದದ್ದು ಆಗಲೇನೆ. ಶೆಟ್ಟರು ಬೆಂಗಳೂರಿಗೆ ಬಂದಾಗಲೆಲ್ಲಾ ಅವರೊಂದಿಗಿರುತ್ತಾ ಅವರು ಹೇಳಿದ ಸಣ್ಣಪುಟ್ಟ ಕೆಲಸ ಮಾಡಿಕೊಂಡು ವಿಧೇಯ ಶಿಷ್ಯನಂತಿದ್ದ. ಕಳೆದ ವರ್ಷ ಶೆಟ್ಟರು ಮಂತ್ರಿಯಾದ ನಂತರ ಬೆಂಗಳೂರಲ್ಲೇ ಅವರ ವಾಸ್ತವ್ಯ ಎಂದಾಯಿತು. ಹಳೇ ನಂಬಿಕಸ್ಥ ಆಳು ರಾಮನೂ ಶೆಟ್ಟರ ಆರ್‌ಎಂವಿ ಎಕ್ಸ್‌ಟೆನ್ಷನ್ ಮನೆಯಲ್ಲೇ ಠಿಕಾಣಿ ಹೂಡಿಬಿಟ್ಟ. ಈ ನಡುವೆ ಈಗೊಂದು ಆರು ತಿಂಗಳ ಹಿಂದೆ ರಾಮ ಚಿಂತಾಮಣಿಯ ಪ್ರೇಮಾ ಎಂಬಾಕೆಯನ್ನು ಮದುವೆಯಾಗಿ ಬೆಂಗಳೂರಿಗೆ ಕರೆತಂದ. ಕೆಲಸದ ಒತ್ತಡದಿಂದಾಗಿ ತನ್ನ ಶಿಷ್ಯ ಸರಿಯಾದ ಸಮಯಕ್ಕೆ ಮನೆಗೆ ಹೋಗಲಾಗುತ್ತಿಲ್ಲವೆಂಬ ವಿಚಾರ ಶೆಟ್ಟರ ಗಮನಕ್ಕೆ ಬಂದಿದ್ದು ಅವರು ತಕ್ಕಮಟ್ಟಿನ ಸುಂದರಿ ಪ್ರೇಮಾಳನ್ನು ನೋಡಿದಾಗ. ಕೂಡಲೇ ಅವರ ಮನಸ್ಸು ಕರಗಿ "ನೀವಿಬ್ಬರೂ ನನ್ನ ಮನೆಯಲ್ಲೇ ಬಂದು ಇದ್ದು ಬಿಡಿ" ಎಂದು ನವದಂಪತಿಗಳು ತಮ್ಮ ಮನೆಗೇ ಬಂದಿರುವಂತೆ ವ್ಯವಸ್ಥೆ ಮಾಡಿಬಿಟ್ಟರು. ತನ್ನ ನಾಯಕನ ಔದಾರ್ಯ ಕಂಡು ರಾಮ ಬೆರಗಾಗುವಷ್ಟರಲ್ಲೇ ಶೆಟ್ಟರು ರಾಮ ಮನೆ ಸೇರಲಿಕ್ಕಾಗದಷ್ಟು ಕೆಲಸ ಹಚ್ಚಿ ಅವನು ಹೊರಗಡೆಯೇ ತಿರುಗಾಡಿಕೊಂಡಿರುವಂತೆ ಮಾಡಿಬಿಟ್ಟರು. ಅನೇಕ ದಶಕಗಳಿಂದ ಪಿಪ್ಪಿಂಗ್ ವ್ಯವಹಾರ ನಡೆಸುತ್ತಿರುವ ಅವರಿಗೆ ಯಾರಿಗೆ ಯಾವಾಗ ಹೇಗೆ ಗಾಳ ಹಾಕಬೇಕೆಂಬುದು ಕರತಲಾಮಲಕವಾಗಿತ್ತು. ಆಮೇಲೆ ಶೆಟ್ಟರು ಮನೆಯಲ್ಲಿದ್ದರೂ ಕ್ಷೇತ್ರದ ಜನರಿಗೆ ಅವರ ದರ್ಶನ ಭಾಗ್ಯ ಅಪರೂಪವಾಗತೊಡಗಿತು. ಸ್ವತಃ ಅವರ ಕುಟುಂಬ, ನೆಂಟರು ಬೆಂಗಳೂರಿಗೆ ಬಂದಾಗಲೂ ಉಳಿಯಲು ಬೇರೆ ಕಡೆ



ವ್ಯವಸ್ಥೆಯಾಗತೊಡಗಿತು. ಪೆದ್ದಂಭಟ್ಟ ರಾಮನಿಗೆ ಇದೆಷ್ಟು ಅರ್ಥವಾಯಿತೋ ಇಲ್ಲವೋ ಆದರೆ ಶೆಟ್ಟರ ಹೊಸ ಪ್ರೇಮಾಯಣವನ್ನು ಒಬ್ಬ ಮಾತ್ರ ಸ್ಪಡಿ ಮಾಡುತ್ತಿದ್ದ. ಅವನೇ ಗನ್‌ಮ್ಯಾನ್ ನಾಗರಾಜ.

ವಾಣಕರ್ ಮತ್ತು ಪಾಟೀಲ್ ರಕ್ಷಣೆಗಾಗಿ ಶಿಂತ್ರೆ ಎನ್‌ಕೌಂಟರ್!

ಪ್ರವೀಣ್ ಶಿಂತ್ರೆ ಎಂಬ ರಕ್ತಪಿಪಾಸು ಸುಫಾರಿ ಕಿಲ್ಲರ್ ಬಗ್ಗೆ ಕಳೆದ ಸಂಚಿಕೆಯಲ್ಲಿ ಬರೆದಿದ್ದೆವು. ತನ್ನ ಹದಿನಾರನೇ ವಯಸ್ಸಿನಲ್ಲಿ ಕೇವಲ ಹದಿನಾರು ರೂಪಾಯಿಗಳಿಗೆ ವ್ಯಾಪಾರಿಯೊಬ್ಬನನ್ನು ಕೊಲ್ಲುವ ಮೂಲಕ ಪಾತಕ ಜಗತ್ತನ್ನು ಸೇರಿದಂದಿನಿಂದ ಇತ್ತೀಚಿನ ಶೀತಲ್ ಚೌಗಲೆಯ ರೇಪ್ ಅಂಡ್ ಮರ್ಡರ್ ತನಕ ಶಿಂತ್ರೆ ಹೇಗೆ ಒಬ್ಬ ಪ್ರೊಫೆಷನಲ್ ಸುಫಾರಿ ಸೀರಿಯಲ್ ಕಿಲ್ಲರ್ ಆಗಿ ಪರಿವರ್ತನೆಯಾದ ಎಂಬ ಬಗ್ಗೆ ವಿವರವಾಗಿ ಪ್ರಕಟಿಸಿದ್ದೆವು. ಈ ಸಂಚಿಕೆ ಹೊರಬರುವ ಹೊತ್ತಿಗೆ ಶಿಂತ್ರೆ ಪೊಲೀಸ್ ಎನ್‌ಕೌಂಟರ್‌ನಲ್ಲಿ ಹೆಣವಾಗಿದ್ದಾನೆ. ಯಾವ ರಾಜ್‌ದೀಪ್ ಬಂಗ್ಲೆಯಲ್ಲಿ ಅನಾಮತ್ತು ಏಳು ಹೆಣಗಳನ್ನು ಆತ ಕೆಡವಿದ್ದನೋ ಅದೇ ಬಂಗ್ಲೆಯಲ್ಲಿ ಇಂದು ಆತನೇ ಹೆಣವಾಗಿದ್ದಾನೆ.




ಶಿಂತ್ರೆ ಎಂಬ ಕೆಟ್ಟ ಕ್ರಿಮಿಯ ಕರಾಳ ಅಧ್ಯಾಯ ಕೊನೆಯಾಯಿತೆಂದು ಕೇವಲ ಬೆಳಗಾವಿಯ ಜನ ಮಾತ್ರವಲ್ಲ, ಇಡೀ ಕರ್ನಾಟಕದ ಜನ, ಅದರಲ್ಲೂ ವಿಶೇಷವಾಗಿ ಮಹಿಳೆಯರು ನಿಟ್ಟುಸಿರು ಬಿಟ್ಟಿದ್ದಂತೂ ಸತ್ಯ. ಹಾಗಾಗಿ, ಶಿಂತ್ರೆ ನಿಜವಾದ ಪೊಲೀಸ್ ಎನ್‌ಕೌಂಟರ್‌ನಲ್ಲಿ ಸತ್ತನೋ ಅಥವಾ ಪೊಲೀಸರೇ ಅವನನ್ನು ಹಿಡಿದು ಫೇಕ್ ಎನ್‌ಕೌಂಟರ್‌ನಲ್ಲಿ ಸಾಯಿಸಿದರೋ ಎಂಬ ವಿಚಾರದ ಬಗ್ಗೆ ಎಲ್ಲೂ ಚರ್ಚೆ ನಡೆಯುಲಿಲ್ಲ. ಬೆಳಗಾವಿಗೆ ಕಂಟಕನಾಗಿದ್ದ ಕೆಟ್ಟ ಕ್ರಿಮಿಯೊಂದು ನಾಶವಾಯಿತಲ್ಲ ಅಷ್ಟೇ ಸಾಕು ಎಂದವರೇ ಹೆಚ್ಚು.

ಆದರೆ, ಶಿಂತ್ರೆಯ ಎನ್‌ಕೌಂಟರ್ ಪ್ರಕರಣ ಮತ್ತೊಂದು ಕರಾಳ ಮಗ್ಗುಲನ್ನು ತೆರೆದಿಟ್ಟಿರುವುದು ಬಹಳ ಜನಕ್ಕೆ ಗೊತ್ತಿಲ್ಲ. ಶಿಂತ್ರೆ ಎಂಬ ಕೆಟ್ಟ ಹುಳವೊಂದು ನಿರ್ನಾಮವಾಗಬೇಕಿದ್ದುದು ತುರ್ತು ಅಗತ್ಯವಾಗಿತ್ತು ಎಂಬುದೇನೋ ನಿಜ. ಇಲ್ಲದಿದ್ದರೆ ಇನ್ನೆಷ್ಟು ಅಮಾಯಕ ಹೆಂಗಳೆಯರು ಅವನ ವಿಕೃತ ಕಾಮಕ್ಕೆ, ಧನದಾಹಕ್ಕೆ ಮಾನ-ಪ್ರಾಣ ಕಳೆದುಕೊಳ್ಳ ಬೇಕಾಗುತ್ತಿತ್ತೊ ಏನೋ. ಈ ಕಾರಣಕ್ಕಾಗಿ ಶಿಂತ್ರೆಯನ್ನು ನಿರ್ಮೂಲಿಸಿದ ಪೊಲೀಸರ ಬೆನ್ನು ತಟ್ಟುವ ಅಗತ್ಯವೇನಿಲ್ಲ. ಏಕೆಂದರೆ, ಪೊಲೀಸರು ಅವನನ್ನು ಮುಗಿಸಿರುವುದು ಆತ ಸಮಾಜ ಕಂಟಕ ಎಂಬ ಕಾರಣಕ್ಕಾಗಿ ಅಲ್ಲ, ಬದಲಾಗಿ, ಆತ ಬದುಕಿದ್ದರೆ ಅವನನ್ನು ಬೆಳೆಸಿದ, ಅವನೊಂದಿಗೆ ಶಾಮೀಲಾಗಿ ಅವನು ಮಾಡಿದ ಪ್ರತಿಯೊಂದು ಅಪರಾಧವನ್ನು ಮುಚ್ಚಿಹಾಕಿದ ಪೊಲೀಸರ ಹುಳುಕು ಹೊರಬರುತ್ತದೆ ಎಂಬ ಕಾರಣಕ್ಕಾಗಿ!

ವಾಣಕರ್ ಮತ್ತು ಪಾಟೀಲ್‌ರೇ ಗಾಡ್‌ಫಾದರ್ಸ್

ಹೌದು. ಇದು ನಂಬಲು ತುಸು ಕಷ್ಟವಾದರೂ ನಂಬಲೇಬೇಕಾದ ಸತ್ಯ. ಶಿಂತ್ರೆ ಮಾಡಿದ ಪ್ರತಿಯೊಂದು ರೇಪ್ ಬಗ್ಗೆ, ಕೊಲೆಯ ಬಗ್ಗೆ ಪೊಲೀಸ್ ಅಧಿಕಾರಿಗಳಾದ ಪಿ.ಜಿ. ವಾಣಕರ್ ಮತ್ತು ಎಸ್. ಆರ್. ಪಾಟೀಲ್‌ರಿಗೆ ಚೆನ್ನಾಗಿ ಗೊತ್ತು. ವಾಸ್ತವದಲ್ಲಿ ಶಿಂತ್ರೆ ಪಡೆದ ಸುಫಾರಿಯಲ್ಲಿ ಇವರಿಬ್ಬರಿಗೂ ಕಮೀಷನ್ ಸಿಗುತ್ತಿತ್ತು. ಹಾಗಾಗಿ, ಶಿಂತ್ರೆಯನ್ನು ಅವರು ವ್ಯವಸ್ಥಿತವಾಗಿ ಕಾನೂನಿನ ಕಣ್ಣಿನಿಂದ ರಕ್ಷಿಸಿದ್ದರು.

ಟಿಳಕವಾಡಿ ಪೊಲೀಸ್ ಸ್ಟೇಶನ್‌ನ ಸರ್ಕಲ್ ಇನ್ಸ್‌ಪೆಕ್ಟರ್ ಆಗಿದ್ದ ಪಕ್ಕಾ ಮರಾಠಿಗ ಪಿ.ಜಿ. ವಾಣಕರ್‌ನಂತೂ ಶಿಂತ್ರೆಯನ್ನು ಬೆನ್ನು ತಟ್ಟಿ ಬೆಳೆಸಿದ್ದಾತ. ಶಿಂತ್ರೆ ಅದಕ್ಕೆ ಪ್ರತಿಯಾಗಿ ಸುಪಾರಿ ಕಿಲ್ಲಿಂಗ್ ಮತ್ತು ರಾಬರಿಗಳಿಂದ ಸಿಗುತ್ತಿದ್ದ ಹಣದಲ್ಲಿ ವಾಣಕರ್‌ಗೆ ಶಾಶ್ವತವಾಗಿ ಪರ್ಸೆಂಟೇಜ್ ಫಿಕ್ಸ್ ಮಾಡಿದ್ದ. ಈ ಕಾರಣಕ್ಕಾಗಿಯೇ ಅತ್ತ ವಾಣಕರ್ ಇತ್ತ ಶಿಂತ್ರೆ ಇಬ್ಬರೂ ಸೊಗದಸ್ತಾಗಿ ಬೆಳೆದರು. ಪ್ರಾಯಶಃ ಈ ಘನಂದಾರಿ ಕೆಲಸಕ್ಕೇ ಇರಬೇಕು ವಾಣಕರ್‌ಗೆ ಡಿವೈಎಸ್‌ಪಿ ಆಗಿ ಪ್ರಮೋಶನ್ ಸಿಕ್ಕಿದೆ. ಈತ ಪೊಲೀಸ್ ಇಲಾಖೆಗೆ ಸೇರಿದಂದಿನಿಂದ ಇಲ್ಲಿಯತನಕ ಬೆಳಗಾವಿಯಲ್ಲಿಯೇ ಗೂಟ ಹೊಡೆದುಕೊಂಡು ಇರುವುದಕ್ಕೂ ಇದೇ ಪ್ರಧಾನ ಕಾರಣ.



ಶಿಂತ್ರೆಯನ್ನು ನಿರ್ಮೂಲಿಸಿದ ಪೊಲೀಸರ ಬೆನ್ನು ತಟ್ಟುವ ಅಗತ್ಯವೇನಿಲ್ಲ. ಏಕೆಂದರೆ, ಪೊಲೀಸರು ಅವನನ್ನು ಮುಗಿಸಿರುವುದು ಆತ ಸಮಾಜಕಂಟಕ ಎಂಬ ಕಾರಣಕ್ಕಾಗಿ ಅಲ್ಲ. ಬದಲಾಗಿ, ಆತ ಬದುಕಿದ್ದರೆ ಅವನನ್ನು ಬೆಳಿಸಿದ, ಅವನೊಂದಿಗೆ ಶಾಮೀಲಾಗಿ ಅವನು ಮಾಡಿದ ಪ್ರತಿಯೊಂದು ಅಪರಾಧವನ್ನು ಮುಚ್ಚಿಹಾಕಿದ ಪೊಲೀಸರ ಹುಳುಕು ಹೊರಬರುತ್ತದೆ ಎಂಬ ಕಾರಣಕ್ಕಾಗಿ!

ಶಿಂತ್ರೆ ಮತ್ತು ವಾಣಕರ್ ನಡುವಿನ ಅನೈತಿಕ ಸಂಬಂಧ ಎಸ್ಪಿ ಹೇಮಂತ್ ನಿಂಬಾಳ್ಕರ್‌ಗೆ ಗೊತ್ತಿರಲಿಲ್ಲವೆಂದೇನಲ್ಲ, ಗೊತ್ತಿದ್ದೂ ಗೊತ್ತಿದ್ದೂ ಸುಮ್ಮನಿರುವುದಕ್ಕೆ ಕೆಲವು ಕಾರಣಗಳಿವೆ. ವಾಣಕರ್ ಮತ್ತು ನಿಂಬಾಳ್ಕರ್ ಇಬ್ಬರೂ ಮರಾಠಿಗರು. ಒಬ್ಬ ಮರಾಠಿಗ ಮತ್ತೊಬ್ಬ ಮರಾಠಿಗನನ್ನು ರಕ್ಷಿಸುವ ಸ್ವಜನಪಕ್ಷಪಾತವನ್ನು ನಿಂಬಾಳ್ಕರ್ ಮೆರೆದಿದ್ದರು. ಅಲ್ಲದೆ, ನಿಂಬಾಳ್ಕರ್‌ನ ಬೇಕುಬೇಡಗಳನ್ನು ಶಿಂತ್ರೆ ತೀರಿಸಿದ್ದು ವಾಣಕರ್ ಮೂಲಕವೇ. ಇದೆಲ್ಲದಕ್ಕೂ ಮಿಗಿಲಾಗಿ ಶಿಂತ್ರೆಯ ಅಪರಾಧ ಜಗತ್ತಿನಿಂದ ವಸೂಲಿಯಾಗುತ್ತಿದ್ದ ಅಪಾರ ಮೊತ್ತದಲ್ಲಿ ಎಸ್‌ಪಿ ಹೇಮಂತ್ ನಿಂಬಾಳ್ಕರ್‌ಗೂ ಪಾಲಿದ್ದಿರಬಹುದು ಎಂಬ ಅಂಶವನ್ನೂ ಅಲ್ಲಗಳೆಯಲಾಗುವುದಿಲ್ಲ.

ಶಿಂತ್ರೆಯ ಪಾತಕಗಳನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸಿದ ಅಪಕೀರ್ತಿ ಕೇವಲ ವಾಣಕರ್‌ಗೆ ಮಾತ್ರ ಸಲ್ಲುವುದಿಲ್ಲ. ಶಿಂತ್ರೆಯನ್ನು ಬೆಳೆಸುವುದರಲ್ಲಿ, ಕಮಾಯಿಯ ಪರ್ಸೆಂಟೇಜ್‌ನಲ್ಲಿ ವಾಣಕರ್‌ನಷ್ಟೇ ಪಾಲು ಹೊಂದಿರುವ ಮತ್ತೊಬ್ಬ ಖಾಕಿ ಖದೀಮನ ಹೆಸರೇ ಎಸ್.ಆರ್. ಪಾಟೀಲ್. ವಾಣಕರ್ ಶಿಂತ್ರೆಯ ಪಾತಕಗಳನ್ನು ಮುಚ್ಚಿಟ್ಟು ಅವನ ಸುಫಾರಿ ಹಣದಲ್ಲಿ ಪಾಲು ಕೇಳುವುದರಲ್ಲಿ ನಿಸ್ಸೀಮನಾಗಿದ್ದರೆ, ಎಸ್. ಆರ್. ಪಾಟೀಲ್ ಅವನಿಗಿಂತ ಒಂದು ಹೆಜ್ಜೆ ಮುಂದೆ ಹೋಗಿ ಕೊಲೆ, ಸುಲಿಗೆ, ರೇಪ್, ರಾಬರಿಗಳನ್ನು ಹೇಗೆ ಮಾಡಬೇಕು ಎಂದು ಶಿಂತ್ರೆಗೆ ಸ್ಕೆಚ್ ಹಾಕಿಕೊಡುತ್ತಿದ್ದ. ಆತನಿಗೆ ಹಣ ಬೇಕು ಅಷ್ಟೆ. ಅದೊಂದನ್ನು ಕೊಡಲು ರೆಡಿಯಾಗಿಬಿಟ್ಟರೆ ಶಿಂತ್ರೆಯ ಎಲ್ಲಾ ಕೆಲಸಕ್ಕೂ ಹಸಿರು ನಿಶಾನೆ ತೋರಿಸಿಬಿಡುತ್ತಿದ್ದ. ಈತನ ಹಣದಾಹ ಎಷ್ಟಿತ್ತೆಂದರೆ ಹಾಡುಹಗಲೇ ರಾಜಾರೋಷವಾಗಿ ಲಂಚ ತೆಗೆದುಕೊಳ್ಳುತ್ತಿದ್ದಾಗ ಟಿ.ವಿ. ಚಾನೆಲ್‌ವೊಂದು ಅದನ್ನು ರೆಕಾರ್ಡ್ ಮಾಡಿ ಪ್ರಸಾರ ಮಾಡಿಬಿಟ್ಟಿತ್ತು. ಅದರಿಂದ ವರ್ಗಾವಣೆಯಾದ ಈತ ಸದ್ಯಕ್ಕೆ ಈಗ ಗದಗ ಜಿಲ್ಲೆಯ ರೋಣದಲ್ಲಿ ಪಾತಕಿಗಳನ್ನು ಹುಟ್ಟು ಹಾಕಲು ರಿಹರ್ಸಲ್ ನಡೆಸುತ್ತಿದ್ದಾನೆ.

ಶಿಂತ್ರೆ ಬದುಕಿದ್ದಿದ್ದರೆ ಆತ ಪೊಲೀಸರ ಜೊತೆಗೂಡಿ ನಡೆಸಿದ ಅದೆಷ್ಟು ಪಾತಕಗಳು ಹೊರಬರುತ್ತಿದ್ದವೋ ಏನೋ? ಅವೆಲ್ಲ ಹೊರಬರದಿರಲಿ ಎಂಬ ಕಾರಣಕ್ಕೇನೇ ಶಿಂತ್ರೆಯನ್ನು ನಕಲಿ ಎನ್‌ಕೌಂಟರ್‌ನಲ್ಲಿ ಕೊಂದುಹಾಕಿದ್ದಾರೆ. ಒಟ್ಟಿನಲ್ಲಿ ಪೊಲೀಸರು ಮತ್ತು ಕ್ರಿಮಿನಲ್‌ಗಳು ಶಾಮೀಲಾಗಿಬಿಟ್ಟರೆ ಹೇಗೆ ಸಾರ್ವಜನಿಕರ ಜೀವನವನ್ನು ತಲ್ಲಣಗೊಳಿಸುತ್ತದೆ ಎಂಬುದಕ್ಕೆ ಇದೊಂದು ಉಜ್ವಲ ಉದಾಹರಣೆ ಮಾತ್ರ.


ಶೀತಲ್ ಚೌಗಲೆಯ ರೇಪ್ ಅಂಡ್ ಮರ್ಡರ್!

ರವೀಂದ್ರ ಚೌಗಲೆ ಎಂಬ ಶ್ರೀಮಂತ ಕಾಂಟ್ರಾಕ್ಟರ್ ತನ್ನ ಹೆಂಡತಿ ಶೀತಲ್ ಚೌಗಲೆಯನ್ನು ಕೊಂದು ಹಾಕಲು ಶಿಂತ್ರೆಗೆ ನಾಲ್ಕು ಲಕ್ಷ ರೂಪಾಯಿ ಹಣವನ್ನು ಕೊಟ್ಟಿದ್ದ. ಆಗಸ್ಟ್ ಹನ್ನೊಂದರಂದು ತನ್ನ ರಾಜ್‌ದೀಪ್ ಬಂಗ್ಲೆಯಲ್ಲಿ ಶಿಂತ್ರೆ ಮತ್ತವನ ಗ್ಯಾಂಗ್ ಶೀತಲ್ ಚೌಗಲೆಯನ್ನು ಬರ್ಬರವಾಗಿ ಗ್ಯಾಂಗ್ ರೇಪ್ ಮಾಡಿ ಮರ್ಡರ್ ಮಾಡಿಹಾಕಿತ್ತು. ಆಗಸ್ಟ್ 13ರಂದು ಆಕೆಯ ಶವ ಖಾನಾಪೂರ್ ಅರಣ್ಯ ಪ್ರದೇಶದಲ್ಲಿ ಸಿಕ್ಕಿತ್ತು. ಕೊಲೆಯ ಜಾಡನ್ನು ಹಿಡಿದ ಜಿ. ಆರ್. ಪಾಟೀಲ್ ಎಂಬ ಇನ್ಸ್‌ಪೆಕ್ಟರ್ ಬಹುತೇಕ ಕೊಲೆಗಾರರನ್ನು ಒಂದೇ ವಾರದಲ್ಲಿ ಬಂಧಿಸಿದ್ದರು. ಆದರೆ, ಕಿಲ್ಲರ್ ಗ್ಯಾಂಗ್‌ನ ಲೀಡರ್ ಪ್ರವೀಣ್ ಶಿಂತ್ರೆ ಮಾತ್ರ ತಲೆಮರೆಸಿಕೊಂಡಿದ್ದ.

ಪ್ರವೀಣ್ ಶಿಂತ್ರೆ ಮತ್ತವನ ಗ್ಯಾಂಗ್ ಶೀತಲ್ ಚೌಗಲೆಯನ್ನು ಹರಿದು ಮುಕ್ಕಿದ್ದ ರೀತಿಯನ್ನು ಕಂಡು, ಈ ಹಿಂದೆ ಅವರೇ ಸರಣಿ ಕೊಲೆಗಳನ್ನು ಮಾಡಿರುವುದನ್ನು ಅರಿತು ಬೆಳಗಾವಿಯ ಇತಿಹಾಸದಲ್ಲಿಯೇ ಕೇಳಿ ಕಂಡರಿಯದ ರೀತಿಯಲ್ಲಿ ಜನ ಪ್ರತಿಭಟಿಸಿದ್ದರು. "ಶಿಂತ್ರೆಯನ್ನು ನಮಗೊಪ್ಪಿಸಿ, ನಾವೇ ಅವನನ್ನು ಕಲ್ಲಿನಿಂದ ಹೊಡೆದು ಸಾಯಿಸುತ್ತೇವೆ" ಎಂದು ಮಹಿಳೆಯರೂ ಸಾವಿರಾರು ಸಂಖ್ಯೆಯಲ್ಲಿ ಬೀದಿಗಿಳಿದಿದ್ದರು.

ಜನ ಪ್ರತಿಭಟನೆಯನ್ನು ನೋಡಿ ಪೊಲೀಸರು ದಂಗಾಗಿಹೋಗಿದ್ದರು. ಶಿಂತ್ರೆ ಏನಾದರೂ ಸಿಕ್ಕರೆ ಯಾವ ರಾಜ್‌ದೀಪ್ ಬಂಗ್ಲೆಯಲ್ಲಿ ಆತ ಏಳು ಕೊಲೆಗಳನ್ನು ಮಾಡಿದ್ದನೋ, ಯಾವ ರಾಜ್‌ದೀಪ್ ಬಂಗ್ಲೆಯಲ್ಲಿ ಶೀತಲ್ ಚೌಗಲೆಯನ್ನು ಬರ್ಬರವಾಗಿ ಅತ್ಯಾಚಾರ ಮಾಡಿ ಕೊಂದಿದ್ದನೋ ಅದೇ ರಾಜ್‌ದೀಪ್ ಬಂಗ್ಲೆಯಲ್ಲಿಯೇ ಅವನನ್ನು

ಗನ್‌ಮ್ಯಾನೂ ಗಾಂಚಲಿ ಮಾಡಿದ್ದು



ಮನೆಯೊಳಗೆ ನಡೆಯುತ್ತಿದ್ದ ಪ್ರೇಮಾಯಣದ ಬಗ್ಗೆ ಸಾಕಷ್ಟು ತಿಳಿದುಕೊಂಡಿದ್ದ ಗನ್‌ಮ್ಯಾನ್ ನಾಗರಾಜನಿಗೆ ತಾನೂ ಯಾಕೆ ಒಂದು ಕೈ ನೋಡಬಾರದು ಎನ್ನಿಸಿ ಒಂದು ದಿನ ಯಾರೂ ಇಲ್ಲದ ವೇಳೆ ನೋಡಿಕೊಂಡು ಪ್ರೇಮಾ ತನ್ನ ಜೊತೆಗೂ ಸಹಕರಿಸುವಂತೆ ಧಮಕಿ ಹಾಕಿದ್ದಾನೆ. ಅಷ್ಟರಲ್ಲಾಗಲೇ ಹೈಲೆವೆಲ್‌ನಲ್ಲಿ ವ್ಯವಹರಿಸಿ ಪಳಗಿದ್ದ ಪ್ರೇಮಾ ನಾಗರಾಜನ ಕಾಟದಿಂದ ಪಾರಾಗಲು ತನ್ನ ನಾಗಧಣಿಗೆ ದೂರು ಹೇಳಿದ್ದಾಳೆ.

ನಾಗರಾಜ ಶೆಟ್ಟರು ಬುಸ್ ಎಂದು ಹೆಡೆ ಬಿಚ್ಚಿದ್ದು ಆಗಲೇ.

ತಮ್ಮ ವ್ಯವಹಾರ ಗನ್‌ಮ್ಯಾನ್‌ಗೆ ಗೊತ್ತಾಗಿದೆಯಲ್ಲ ಎಂಬ ಆತಂಕ ಒಂದೆಡೆಯಾದರೆ ಜುಜುಬಿ ಗನ್‌ಮ್ಯಾನ್ ಇಷ್ಟು ಧೈರ್ಯ ತೋರಿಸಿ ತನ್ನ additional ಬೆಡ್‌ರೂಂವರೆಗೂ ಕೈಚಾಚಿದನಲ್ಲ ಎಂದು ಕೋಪವೂ ಬಂದಿತ್ತು ಅವರಿಗೆ. ಹಾಗಂತ ಒಮ್ಮೆ ಗನ್‌ಮ್ಯಾನ್‌ನನ್ನು ಕರೆಸಿ ಗದರಿಸಿದರೆ ಅವನು 'ನನ್ನ ಮೊಬೈಲ್‌ನಲ್ಲಿ ನಿಮ್ಮಿಬ್ಬರ ಫೋಟೋ ತೆಗೆದಿಟ್ಟುಕೊಂಡಿದ್ದೀನಿ" ಅಂತ ಮರು ಬೆದರಿಕೆ ಹಾಕಿಬಿಡಬೇಕೆ. ಅವತ್ತೇ ಭಯಪಟ್ಟು ಪ್ರೇಮಾ ಸಂಜೆ ಮನೆ ಮಹಡಿ ಹತ್ತಿ ಅಲ್ಲಿಂದ ಬಿದ್ದು ಆತ್ಮಹತ್ಯೆ ಮಾಡಿಕೊಳ್ಳುತ್ತೇನೆಂದು ನಾಟಕ ಆಡಿದ್ದಾಳೆ. ನನ್ನ ಸಾವಿಗೆ ಗನ್‌ಮ್ಯಾನ್ ನಾಗರಾಜನೇ ಹೊಣೆ ಎಂದು ಬಂಬಿಸಿ ಬೆದರಿಸಿ ಸುಮ್ಮನಾಗಿಸಲು ಪ್ರೇಮಾ ಹೀಗೆ ಮಾಡಿರಬಹುದು. ಆದರೆ ಮನೆಯಲ್ಲಿದ್ದ ಎಪ್ಪತ್ತರ ವೃದ್ಧ ರಾಮಶೆಟ್ಟಿ ಎಲ್ಲರಿಗೂ ಸಮಾಧಾನ ಮಾಡಿ ಸರಿಮಾಡಿದ್ದಾನೆ.

ಆದರೆ ಈ ಗನ್‌ಮ್ಯಾನ್ ಇದ್ದರೆ ಮುಂದೆ ಅಪಾಯ ತಪ್ಪಿದ್ದಲ್ಲವೆಂದು ಸಚಿವರು ಅವನನ್ನು ಈಗ ವಾಪಸ್ ಕಳಿಸಿದ್ದಾರೆ. ಇವನಿಗೂ ಮೊದಲು ಇದ್ದ ಇನ್ನೊಬ್ಬ ಗನ್‌ಮ್ಯಾನ್ ಶ್ರೀನಿವಾಸ ಹಾಗೂ ಆಪ್ತ ಸಹಾಯಕ ಅರುಣರನ್ನು ಸಹ ಶೆಟ್ಟರು ಓಡಿಸಿದ್ದರು. ಆ ಬಗ್ಗೆ ತನಿಖೆ ಮಾಡಿದರೆ ಅವರ ಹತ್ತಿರವೂ ಇಂತದ್ದೇ 'ಪ್ರೇಮಾಯಣ'ಗಳ ಪುರಾವೆ ಸಿಕ್ಕಿದರೂ ಏನಚ್ಚರಿಯಿಲ್ಲ.

ಸದ್ಯಕ್ಕೆ ಈಗಿನ ಪ್ರೇಮಾಯಣದ ನಾಯಕಿ ಪ್ರೇಮಾ ಅಲಿಯಾಸ್ ರುಕ್ಮಿಣಿ ತನ್ನ ತವರುಮನೆಯಿರುವ ಚಿಂತಾಮಣಿ ಸೇರಿಕೊಂಡಿದ್ದಾಳೆ. ದುರಂತ ನಾಯಕ ರಾಮ ಏನೇನಾಗಿದೆಯೆಂಬುದರ ಅರಿವೂ ಇರದವನಂತೆ ಖಳನಾಯಕ ಶೆಟ್ಟರ ಹತ್ತಿರವೇ ಜೀತ ಮಾಡಿಕೊಂಡಿದ್ದಾನೆ.

ಗನ್‌ಮ್ಯಾನ್ ನಾಗರಾಜನ ವಿಚಾರಣೆ ನಡೆಸಿದ ಅವನ ಹತ್ತಿರ ಫೋಟೋ, ಸಿಡಿ ಇಂತದ್ದೇನಾದರೂ ಇರಬಹುದಾ ಅಂತ ಹುಷಾರಿನಿಂದ ಚೆಕ್ ಮಾಡಿಯೇ ಶೆಟ್ಟರು ಅವನನ್ನು ಓಡಿಸಿದ್ದಾರೆ. ಅಂತಾದ್ದೇನೂ ಇಲ್ಲ ಅಂತ ಶೆಟ್ಟರ ನಂಬಿಕೆ.

ಆದರೆ ಅಂಥದ್ದೇನೂ ನಡೆದೇ ಇಲ್ಲ ಎಂದು ಇದರರ್ಥವಲ್ಲ. ■

ಎನ್‌ಕೌಂಟರ್ ಮಾಡಿ ಕೊಂದು ಹಾಕಬೇಕೆಂದು ಪೊಲೀಸರು ನಿರ್ಧರಿಸಿಬಿಟ್ಟಿದ್ದರು. ಹೀಗಾಗಿ ಈ ನಕಲಿ ಎನ್‌ಕೌಂಟರ್‌ನ ಹಿಂದೆ ಜನರ ಸಿಟ್ಟನ್ನು ಶಮನ ಮಾಡಬೇಕೆನ್ನುವುದು ಒಂದು ಕಾರಣವಾಗಿದ್ದರೆ, ಕೆಲವು ಪೊಲೀಸ್ ಅಧಿಕಾರಿಗಳು ಅವನೊಂದಿಗೆ ಹೊಂದಿದ್ದ ಅನೈತಿಕ ಸಂಬಂಧ, ಶಾಮೀಲು ಹೊರಬರದಂತೆ ತಡೆಯುವುದು ಇನ್ನೊಂದು ಕಾರಣವಾಗಿತ್ತು.



ನಕಲಿ ಎನ್‌ಕೌಂಟರ್!

ಶಿಂತ್ರೆಯನ್ನು ಹಿಡಿಯಲು ಹೆಚ್ಚುತ್ತಿದ್ದ ಸಾರ್ವಜನಿಕರ ಒತ್ತಡ ವಾಸ್ತವದಲ್ಲಿ ಪೊಲೀಸರ ನಿದ್ದೆಗೆಡಿಸಿತ್ತು. ಹೀಗಾಗಿ ಅವನನ್ನು ಹಿಡಿಯಲು ಪೊಲೀಸರು ಜಾಲ ಹೆಣೆಯತೊಡಗಿದರು.

ಅವರು ಮೊದಲು ಶುರು ಮಾಡಿದ್ದು ಶಿಂತ್ರೆಯ ಗರ್ಲ್ ಫ್ರೆಂಡ್ಸ್ ಶೀಲಾ ಜಾದವ್ ಮತ್ತು ಸೀಮಾ ದಾನಿ ಎಂಬುವವರಿಂದ. ಪೊಲೀಸರು ಇವರಿಬ್ಬರನ್ನು ವಿಚಾರಿಸಿದ ತಕ್ಷಣ ಭಯದಿಂದ ಇತ್ತೀಚೆಗೆ ಶಿಂತ್ರೆ ದಿಯಾ ಶೆಟ್ಟಿ ಎಂಬ ಉಡುಪಿಯ ಹೊಸ ಹುಡುಗಿಯೊಂದಿಗೆ ಓಡಾಡುತ್ತಿರುವುದನ್ನು ಬಾಯಿಬಿಟ್ಟರು. ವ್ಯಾಪಾರಕ್ಕೆಂದು ಬೆಳಗಾವಿಗೆ ಬಂದಿದ್ದ ದಿಯಾ ಮತ್ತವಳ ಕುಟುಂಬ ಬೆಳಗಾವಿಯಲ್ಲಿಯೇ ನೆಲೆಸಿತ್ತು. ನೋಡಲು ಸುಂದರವಾಗಿದ್ದ ದಿಯಾಳನ್ನು ಶಿಂತ್ರೆ, ಎಲ್ಲ ತಂತ್ರ ಬಳಸಿ ಬಲೆಗೆ ಬೀಳಿಸಿಕೊಂಡಿದ್ದ.

ಶೀತಲ್ ಚೌಗಲೆಯ ಕೊಲೆಯ ನಂತರದಲ್ಲಿ ಯಾವಾಗ ಬೆಳಗಾವಿ ಯುದ್ಧ ಭೂಮಿಯಂತಾಯಿತೋ ಪೊಲೀಸರು ತನ್ನ ಬೆನ್ನ ಹಿಂದೆ ಬೀಳುವುದು ಖಚಿತ ಎಂದುಕೊಂಡು ಆಗಸ್ಟ್ 21ರ ನಂತರ ಶಿಂತ್ರೆ, ಬೆಳಗಾವಿಯನ್ನು ಖಾಲಿ ಮಾಡಿದ್ದಾನೆ. ಮೊದಲು ತನ್ನ ಹೆಂಡತಿಯನ್ನು ಮಹಾರಾಷ್ಟ್ರದ ಕೊಲ್ಹಾಪುರದಲ್ಲಿ ಬಿಟ್ಟು ಒಂದೆರಡು ದಿನ ಪೂನಾದಲ್ಲಿ ಅಲೆದಾಡಿದ್ದಾನೆ. ನಂತರ ದಿಯಾಳನ್ನು ಸಂಪರ್ಕಿಸಿ ಆಕೆಯೊಂದಿಗೆ ನೇಪಾಳಕ್ಕೆ ಹೋಗುವ ಪ್ಲಾನ್ ಮಾಡಿದ್ದಾನೆ. ಅಲ್ಲಿಂದ ಸೀದಾ ಉಡುಪಿಗೆ ಬಂದು ದಿಯಾಳನ್ನು ಭೇಟಿ ಮಾಡಿ ಪ್ಯಾರಾಡೈಸ್ ಹೋಟೆಲ್‌ನಲ್ಲಿ ಮಹೇಶ್ ಎಂಬ ಹೆಸರಿನಲ್ಲಿ ರೂಂ ತೆಗೆದುಕೊಂಡಿದ್ದಾನೆ. ಅಷ್ಟೊತ್ತಿಗಾಗಲೇ ಪೊಲೀಸರು ದಿಯಾಳ ಹಿಂದೆ ಬಿದ್ದಿದ್ದರು. ಸೆಪ್ಟೆಂಬರ್ 5 ರ ರಾತ್ರಿ ಹೋಟೆಲ್ ಮೇಲೆ ದಾಳಿ ಇಟ್ಟು ಪೊಲೀಸರು ಶಿಂತ್ರೆಯನ್ನು ವಶಕ್ಕೆ ತೆಗೆದುಕೊಂಡಿದ್ದಾರೆ. ಅಲ್ಲಿಂದಲೇ ಅವನಿಗೆ ಪೊಲೀಸ್ ಟ್ರೀಟ್‌ಮೆಂಟ್ ಕೊಟ್ಟು, ಅವನ ಕೃತ್ಯಗಳಲ್ಲಿ ಯಾರ್‍ಯಾರು ಪಾಲುದಾರರಾಗಿದ್ದಾರೆ ಎಂಬ ಒಂದೊಂದೇ ವಿಚಾರಗಳನ್ನು ಪಡೆದುಕೊಂಡಿದ್ದಾರೆ.



ಸೆಪ್ಟೆಂಬರ್ 6ರ ಬೆಳಗ್ಗೆ 4 ಗಂಟೆಗೆ ಆತನನ್ನು ಸೀದಾ ಅವನ ರಾಜ್‌ದೀಪ್ ಬಂಗ್ಲೆಗೆ ಕರೆತಂದು ಫೇಕ್ ಎನ್‌ಕೌಂಟರ್‌ನಲ್ಲಿ ಕೊಂದು ಹಾಕಿದ್ದಾರೆ. "ಶಿಂತ್ರೆ ತನ್ನ ಬಂಗ್ಲೆಯಲ್ಲಿ ಬಚ್ಚಿಟ್ಟ ರಿವಾಲ್ವಾರ್‌ನಿಂದ ಪೊಲೀಸರ ಕಡೆ ಗುಂಡು ಹಾರಿಸಿದ. ಅದಕ್ಕೆ ಪ್ರತಿಯಾಗಿ ಪೊಲೀಸರೂ ಗುಂಡು ಹಾರಿಸಿದರು. ಗುಂಡಿನ ಚಕಮಕಿಯಲ್ಲಿ ಶಿಂತ್ರೆ ಸತ್ತುಹೋದ" ಎಂದು ಪ್ರತೀ ಎನ್‌ಕೌಂಟರ್ ನಡೆದಾಗಲೂ ಪೊಲೀಸರು ಹೇಳುವ ಕಾಗಕ್ಕ ಗುಬ್ಬಕ್ಕನ ಕಥೆಯನ್ನು ಈ ಬಾರಿಯೂ ಹೆಣೆದರು.

ಶಿಂತ್ರೆಯ ರಾಜ್‌ದೀಪ್ ಬಂಗ್ಲೆ ಎರಡು ವಾರಗಳ ಮುಂಚೆಯೇ ಪೊಲೀಸರ ವಶಕ್ಕೆ ಬಂದು ಆಗಿತ್ತು. ಅಂದಮೇಲೆ ಅವರು ಅದನ್ನು ಶೋಧಿಸದೇ ಇರುತ್ತಾರೆಯೇ? ಹಾಗಿದ್ದ ಮೇಲೂ ಶಿಂತ್ರೆ ಬಚ್ಚಿಟ್ಟಿದ್ದ ನೆನ್ನಲಾದ ರಿವಾಲ್ವಾರ್ ಪೊಲೀಸರಿಗೇಕೆ ಸಿಗಲಿಲ್ಲ? ಕೈಗಳಿಗೆ ಕೋಳ ತೊಟ್ಟಿದ್ದ ಹಾಗೂ ಅಷ್ಟೊಂದು ಬಿಗಿ ಬಂದೋಬಸ್ತ್‌ನಲ್ಲಿದ್ದ ಶಿಂತ್ರೆ ಪೊಲೀಸರತ್ತ ಗುಂಡು ಹೊಡೆಯುವುದು ಸಾಧ್ಯವೆ? ಮೇಲ್ನೋಟಕ್ಕನೇ ಅದೊಂದು ಫೇಕ್ ಎನ್‌ಕೌಂಟರ್ ಎಂಬುದು ಯಾರಿಗಾದರೂ ಗೊತ್ತಾಗುತ್ತದೆ.

ಅಂತೂ ಶಿಂತ್ರೆಯನ್ನು ಮುಗಿಸುವ ಮೂಲಕ ಪೊಲೀಸರು ಒಂದೇ ಕಲ್ಲಿನಿಂದ ಎರಡು ಹಕ್ಕಿಗಳನ್ನು ಹೊಡೆದಂತಾಯಿತು. ಒಂದನೆಯದು, ಭೀಕರ ಕೊಲೆಗಾರನೊಬ್ಬನನ್ನು ನಿರ್ಮೂಲಿಸಿ ಬೆನ್ನು ತಟ್ಟಿಕೊಳ್ಳುವ ಮೂಲಕ ಪೊಲೀಸ್ ಇಲಾಖೆಯ ವಿರುದ್ಧ ಹೆಚ್ಚುತ್ತಿದ್ದ ಜನರ ಸಿಟ್ಟನ್ನು ತಾತ್ಕಾಲಿಕವಾಗಿ ಶಮನ ಮಾಡಿದರು. ಎರಡನೆಯದು, ಶಿಂತ್ರೆಯೊಂದಿಗೆ ಪಿ.ಜಿ. ವಾಣಕರ್ ಮತ್ತು ಎಸ್. ಆರ್. ಪಾಟೀಲ್ ಎಂಬ ಪೊಲೀಸ್ ಅಧಿಕಾರಿಗಳು ಶಾಮೀಲಾಗಿ ನಡೆಸಿದ್ದ ಎಲ್ಲಾ ಪಾತಕಗಳನ್ನು ಶಾಶ್ವತವಾಗಿ ಮುಚ್ಚಿ ಹಾಕಿಬಿಟ್ಟರು.

ಶಿಂತ್ರೆ ಎಂಬ ಕೆಟ್ಟ ಕ್ರಿಮಿಯೇನೋ ನಿರ್ನಾಮವಾಯಿತು. ಆದರೆ, ಅಂತಹ ಕ್ರಿಮಿಗಳನ್ನು ಮತ್ತೆ ಮತ್ತೆ ಹುಟ್ಟು ಹಾಕುವ ಪಿ.ಜಿ. ವಾಣಕರ್ ಮತ್ತು ಎಸ್.ಆರ್. ಪಾಟೀಲ್ ಇನ್ನೂ ಜೀವಂತವಾಗಿದ್ದಾರೆ. ತೀರದ ತಮ್ಮ ಧನದಾಹಕ್ಕಾಗಿ ಇಂತಹ ಹತ್ತಾರು ಶಿಂತ್ರೆಗಳನ್ನು ಅವರು ಮತ್ತೆ ಹುಟ್ಟಿಸುವುದಿಲ್ಲ ಎಂದು ಏನು ಗ್ಯಾರಂಟಿ?

– ಮೇಘರಾಜ್

ಸರಿಯಾಗಿ ವರ್ಕು ಮಾಡಕ್ಕೆ ಇನ್ನ ಟ್ವೆಂಟಿ ಮಂತು ಬೇಕು ಶಾರ್

ಸಮ್ಮಿಶ್ರ ಸರ್ಕಾರದ ಎಮ್ಮೆಲ್ಲೆಗಳ ತಲೆಯೂ ಸಮ್ಮಿಶ್ರವಾಗಿ ಕೆಲಸ ಮಾಡತೊಡಗಿದ್ದರಿಂದ ಈ ಜೆಡಿಎಸ್-ಬಿಜೆಪಿ ಸರ್ಕಾರದ ಗೊಡವೆಯೇ ಬೇಡ, ಕಮ್ಯುನಿಸ್ಟ್ ದೇಶವಾದ ಚೀನಾದಲ್ಲಿ ಸುತ್ತಾಡಿ ಬರೋಣವೆಂದು ಚೀನಾ ದೇಶಕ್ಕೆ ಹೋಗಿದ್ದವರೆಲ್ಲಾ ವಾಪಸು ಬಂದಿದ್ದಾರಂತಲ್ಲಾ, ಬಂದು ನೋಡಿದರೆ ಅವರು ಹೋಗುವಾಗಿನ ಸ್ಥಿತಿಗಿಂತ ಘೋರ ಸ್ಥಿತಿ ಉಭಯ ಪಾರ್ಟಿಯಲ್ಲೂ ಉಂಟಾಗಿ "ನಾವು ಅಲ್ಲೇ ಇದ್ದರೆ ಚೆನ್ನಾಗಿತ್ತು" ಎನ್ನುವಂತಾಗಿದೆಯಲ್ಲಾ. ಜೆಡಿಎಸ್‌ನವರ ಪಾಲಿಗೆ

ಥೂತ್ತೇರಿ

ಯಾಹೂ

ದೇವೇಗೌಡರಾಗಲೇ ರಣಕಹಳೆ ಊದಿಕೊಂಡು ರಿಕ್ಷಾದಲ್ಲೇ ಓಡಾಡತೊಡಗಿದ್ದರೆ, ಸದಾ ನಂದಗೌಡರು ಎಡೂರಪ್ಪನ ಕಣ್ಣೀರು ಒರೆಸುತ್ತ "ನೀವು ಯಾವ ಕಾರಣಕ್ಕೂ ಹೆದರಬೇಡಿ ಎಡೂರಪ್ಪ, ಬಂದದ್ದೆಲ್ಲವನ್ನು ಅನುಭವಿಸುವ. ನಮ್ಮದೇ ಸರ್ಕಾರದ ಆಡಳಿತ ಬಂದಾಗ ನೀವೇ ಮುಖ್ಯಮಂತ್ರಿ, ಈಗ ದುಃಖಿಸುವುದು ಬೇಡ" ಎಂದು ಸಂತೈಸುವ ದೃಶ್ಯ ಮನ ಕರಗುವಂತಿಂತಲ್ಲಾ, ಈ ನಡುವೆ "ಎಡೂರಪ್ಪನೇ ನಮ್ಮ ನಾಯಕ" ಎಂದು ಬೊಗಳುತ್ತಿರುವ ಈಶ್ವರಪ್ಪನ ಗಂಟಲಲ್ಲಿ ಪ್ರಾಮಾಣಿಕತೆಯೇ ಹೊರಟು ಹೋಗಿರುವುದರಿಂದ ಇದನ್ನು ಗ್ರಹಿಸಿದ ಜಗದೀಶ್ ಶೆಟ್ಟರ್ "ಎಡೂರಪ್ಪನೇ ನಮ್ಮ ಲೀಡರ್" ಎಂದು ಇನ್ನೂ ಹೇಳಿಲ್ಲವಂತಲ್ಲಾ, ಥೂತ್ತೇರಿ!

* * * * * * * *

ದೇವು ಕುಟುಂಬದ ಪಾರ್ಟಿಯಾದ ಜೆಡಿಎಸ್ ಪಕ್ಷಕ್ಕೆ ದಿನ ಬೆಳಗಾಗುವುದರಲ್ಲಿ ಮೆರಾಜುದ್ದೀನ್ ಪಟೇಲ್ ಅಧ್ಯಕ್ಷನಾಗಿ ನೇಮಕಗೊಂಡ ಕೂಡಲೇ ಚೆಡ್ಡಿಗಳ ಗುಡಾರದಲ್ಲಿ ಒಂದು ಕ್ಷಣ ಸ್ತಬ್ಧತೆ ಆವರಿಸಿತಂತಲ್ಲಾ. ಪಟೇಲ್ ನೇಮಕದಿಂದ ಚೆಡ್ಡಿಗಳೇ ಕಂಗಾಲಾಗಬೇಕಾದರೆ ಇನ್ನು ಮೆರಾಜುದ್ದೀನ್ ಮಹಿಮೆ ಹೇಗಿರಬೇಕೆಂದು ಜೆಡಿಎಸ್ ನೂತನ ಅಧ್ಯಕ್ಷರಿಗೆ ಫೋನ್ ಮಾಡಿದರೆ, ರಿಂಗಾಯ್ತು,

"ಹಲೋ, ಯಾರು ಅದು?"

"ನಾನು ಸಾರ್, ಪತ್ರಕರ್ತ, ಯಾಹೂ ಅಂತ ನನ್ನೆಸರು."



"ಡೇಲಿ ಪೇಪರ್, ವೀಕ್ಲಿ ಪೇಪರ್, ಯಾವ್ದು ನಿಮ್ದು?"

"ವೀಕ್ಲಿ ಸಾರ್, ಗೌರಿ ಲಂಕೇಶ್ ಪತ್ರಿಕೆ."

"ಲಂಕೇಸ್‌ದು ಮಗಳಲ್ವ, ಪರ್‍ವಾಗಿಲ್ಲ, ವಳ್ಳೆ ವಳ್ಳೆ ಪಿಚ್ಚರ್‌ನ ತಗಿತರೆ, ಪೇಪರ್ ಮಾಡ್ತರೆ."

"ಸಿನಿಮಾ ತಗಿಯೋರು ಕವಿತಾ ಲಂಕೇಶ್ ಸಾರ್. ಗೌರಿ ಲಂಕೇಶ್ ಪತ್ರಿಕೆ ನಡೆಸ್ತರೆ."

"ಏನೊ ಒಂದು ಮಾಡಬೇಕಲ್ಲ? ಸುಮ್ನೆ ಇದ್ರೆ ಆಗಲ್ಲ."

"ದಿಢೀರಂತ ಅಧ್ಯಕ್ಷರಾದರಲ್ಲಾ, ಏನ್ ಸಾರ್ ವಿಶೇಷ?"

"ವಿಶೇಷ ಇಲ್ರಿ, ಎಂ.ಪಿ. ಪ್ರಕಾಶ್ ಇದ್ರು. ಅವುರ್‍ನ ಗೊತ್ತಲ್ಲ, ಇದ್ರೂ ಇಲ್ದಂಗೆ ಇರತರೆ. ಆದ್ರೆ ಇದು ಟೈಂನಲ್ಲಿ ಅಂಗೆ ಇರಬಾರ್ದು. ನಮ್ದು ದೋಸ್ತಿ ಪಾರ್ಟಿಗೆ ಆವಾಜ್ ಹಾಕ್‌ಬೇಕು. ದುಸರ ಮಾತಾಡಿದ್ರೆ ದೋಸ್ತಿ ಖತಂ ಅಂತ ಹೇಳಬೇಕು. ಇದು ಪರಕಾಶ ಕೈಲಿ ಆಗ್ತದ? ದೇವೇಗೌಡ್ರು ನೋಡಿ ಸಾಕಾಗಿ ನನ್ಗೆ ಮಾಡಿದ್ರು."

"ನೀವು ಆವಾಜ್ ಹಾಕ್ತಿರಾ ಸಾರ್?"

"ಮತ್ತೆ? ಪಾರ್ಟಿದು ಬಾವುಟ ಕೈಗೆ ತಗೊಂಡು ಕೂಡ್ಲೆ ಹೇಳಿದೆ, ಸರ್ಕಾರದ್ದು ವರ್ಕು ನಮ್ದು ನಿಮ್ದು ಏನೂ ಇಲ್ಲ ಅಂತ ಹೇಳಿದ್ದೀನಿ."

"ನೀವು ಅಧ್ಯಕ್ಷರಾಗಿರೋದ್ರಿಂದ ಮುಸ್ಲಿಮರು ಜೆಡಿಎಸ್ ಕಡೆ ಬರ್‍ತರ?"

"ಬರೋದೇನ್ರಿ, ಮುಸ್ಲಿಮರು ಇರೋದೆ ಜೆಡಿಎಸ್ ಜೊತೆಲಿ. ಇಲ್ಲ ಅಂದ್ರೆ ನಮ್ದು ನಲವತ್ತೆಂಟು ಸೀಟು ಬರ್‍ತಿತ್ತಾ? ಅದ್ಕೆ ದೇವೇಗೌಡ್ರು ನನ್ಗೆ ಅಧ್ಯಕ್ಷ ಮಾಡಿರೋದು."

"ಅಕ್ಟೋಬರ್ ಮೂರು ನಿಮ್ದು ಪಾತ್ರ ಏನು ಸಾರ್?"

"ಯೆಲ್ಲಾ ನಮ್ದು ದೇವೇಗೌಡ್ರು ಮನಿಲಿ ಇರ್‍ತಾರೆ, ನಾವು ಏನೇನು ಮಾಡಬೇಕು, ಯಾರ್‍ಗೆ ಹಿಡಿಬೇಕು, ಯಾರ್‍ಗೆ ಬುಟ್ಟಿ ವಳಗಡೆ ಹಾಕಿ ಮುಚ್ಚಳ ಮುಚ್ಚಬಿಟ್ಟ, ಎಲ್ಲಾ ಆಟ ಆದ ಮೇಲೆ ತಗಿಬೇಕು, ಎಲ್ಲಾ ಹೇಳ್ತಾಯಿರ್‍ತರೆ. ನಾವು ಮಾಡ್ತ ಹೋಗ್ತಿವಿ. ನೀವೆ ನೋಡ್ತಿರಲ್ಲ, ತಗೊಳಿ."

"ಹಾಗಾದ್ರೆ ಎಡೂರಪ್ಪನ್ನ ಮುಖ್ಯಮಂತ್ರಿ ಮಾಡ್ತಿರ ಸಾರ್?"

"ಮಾಡೋದಿಕ್ಕೆ ನಾವು ಯಾರು? ಅವರು ಆಗಬೇಕಾಗ್ತದೆ, ಅದು ಕೆಪ್ಯಾಸಿಟಿ ಅವುರ್‍ಗೆ ಇಲ್ಲಾ, ಇದೆ ಅನ್ನದು ಆಗ ಗೊತ್ತಾಗ್ತದೆ. ಅಭಿ ಕೈಕು ಬಾತ್ ಕರ್‍ನ?"

"ನೀವು ಸಪೋರ್ಟಂತೂ ಮಾಡಬೇಕಲ್ಲವ?"

"ನಾವು ಸಪೋರ್ಟು ಮಾಡಿದ್ರೆ ನಮ್ದು ಸೆಕ್ಯುಲರ್ ಪಾರ್ಟಿದು ಮ್ಯಾನಿಫೆಸ್ಟೊ ಕತೆ ಏನಾಗ್ತದೆ ಹೇಳು? ಯಾವಾಗ್ಲು ಸೆಕ್ಯುಲರ್ ಪಾರ್ಟಿಗೆ ಕಮ್ಯುನಲ್ ಪಾರ್ಟಿಗಳು ಅಧಿಕಾರಕ್ಕೆ ಇರಕ್ಕೆ ಸಪೋರ್ಟು ಮಾಡಬೇಕು. ಸೆಕ್ಯುಲರ್ ಪಾರ್ಟಿಗಳು ಯಾವಾಗ್ಲು ಕಮ್ಯುನಲ್ ಪಾರ್ಟಿಗಳಿಗೆ ಸಪೋರ್ಟು ಮಾಡಿಲ್ಲ, ಮಾಡಬಾರ್ದು."

"ಅಂಗಾದ್ರೆ ಮುಂದಿನ ಕತೆ ಏನು ಸಾರ್?"

"ಮುಂದಿಂದು ಕತೆ ಕಿಲಿಯರ್ ಆಗಿದೆ. ಯಾರ್‍ಗೆ ತಲೆ ಕೆಡಿಸಿಕೊಳೂದೇ ಬೇಡ. ಯಾರೇ ಮುಖ್ಯಮಂತ್ರಿಯಾದ್ರು ಇಪ್ಪತ್ತು ತಿಂಗಳಲ್ಲಿ ಏನೂ ಮಾಡಕ್ಕಾಗುದಿಲ್ಲ, ದೇವೇಗೌಡ್ರು ಹದಿನೆಂಟು ತಿಂಗ್ಳು ಮುಖ್ಯಮಂತ್ರಿಯಾಗಿದ್ರು, ಏನು ಮಾಡಕ್ಕಾಯ್ತು?"

"ಇಲ್ಲ ಸಾರ್, ಎಂ.ಪಿ. ಯಲಕ್ಷನ್ನಿಗೆ ದುಡ್ಡು ಮಾಡದೇ ಆಯ್ತು."

"ಅದು ಗೊತ್ತಿದ್ದು ಕೇಳ್ತಿರಿ ನೀವು. ನಮ್ದು ಕಾಮನ್ ಮಿನಿಮಮ್ ಪ್ರೊಗ್ರಾಂ. ಬಡುವುರ್‍ದು ರೈತುರುದ್ದು ಅಲ್ಪಸಕ್ಯಾತ್ರ ಪ್ರಾಬ್ಲಂ ಸಾಲು ಮಾಡಬೇಕು ಅಂದ್ರೆ ಸರಿಯಾಗಿ ನಲವತ್ತು ತಿಂಗ್ಳುಬೇಕು. ಈ ಇಪ್ಪತ್ತು ತಿಂಗಳಲ್ಲಿ ನಾವು ತಯಾರಾಗಿದ್ದಿವಿ, ಮುಂದೆ ಮಾಡ್ತಿವಿ."

"ಏನು ಮಾಡ್ತಿರಿ ಸಾರ್?"

"ನಮ್ದು ಪ್ರೊಗ್ರಾಂ ಇದೆ ಕಂಡ್ರಿ. ರೈತರಿಗೆ ಸಾಯದು ನಿಲ್ಲುಸಬೇಕು, ಬಡವರಿಗೆ ಅಕ್ಕಿ ಕೊಡಬೇಕು, ಅವುರ್‍ದು ಮಕ್ಕಳಿಗೆ ಸೈಕಲ್ ಕೊಡಬೇಕು, ಹೆಣ್ಣುಮಕ್ಕಳಿಗೆ ಹತ್ತು ಸವ್ರ ಕೊಡಬೇಕು. ಬಿಜೆಪಿಗಳಿಗೆ ಅಧಿಕಾರ ಕೊಟ್ರೆ ಎಲ್ಲಾ ದೇವ್ರುಸ್ತಾನಗೆ, ಮಠಗೆ ದುಡ್ಡು ಹಂಚಿಬಿಡ್ತರೆ. ಆನಂತರ ಅಲ್ಲಿ ಹೋಗಿ ಇದ್ದು ಬಿಡ್ತರೆ. ಅದ್ಕೆ ನಾವು ಒಂದು ಪ್ಲಾನ್‌ಗೆ ಮಾಡ್ತಯಿದ್ದಿವಿ."

"ಏನು ಪ್ಲಾನು ಸಾರ್?"

"ಅದು ಈಗ ಹೇಳಲ್ಲ, ಪ್ಲಾನು ಪೂರಾ ದೇವೇಗೌಡ್ರತ್ರ ಇದೆ."

"ಪಾರ್ಟಿ ಅಧ್ಯಕ್ಷರಾಗಿ ನಿಮಗೂ ಗೊತ್ತಿಲ್ವೆ?"

"ಜೆಡಿಎಸ್‌ದು ಅಧ್ಯಕ್ಷ ಆಗ್ತಿನಿ ಅಂತ ನನ್‌ಗೇ ಗೊತ್ತಿರಲಿಲ್ಲ, ಆ ಎಂ.ಪಿ. ಪ್ರಕಾಶ್‌ಗೆ ಅಧ್ಯಕ್ಷಗಿರಿ ಹೋಗ್ತದೆ ಅಂತ ಗೊತ್ತೇ ಇರಲಿಲ್ಲ, ಯಾಕೆ ಗೊತ್ತೇನ್ರಿ?"

"ಹೇಳಿ ಸಾರ್."

"ಇವತ್ತು ನಮ್ದು ಪಂಚ ಪಾಂಡವರು ಜಾಸ್ತಿಯಾಗಿದಾರೆ. ಯಾವ್ದು ಹುಡ್ಗಾಗೆ ಯಾವ್ದು ಹಾಕ್ಬೇಕು? ಅದ್ಕೆ ಇದೆಲ್ಲಾ ಸೀಕ್ರೇಟಾಗಿ ನಿಡಬೇಕು. ಎಲ್ಲಾದ್ರೆ ಸಂಬ ಮಸ್ಕಿರಿ ಮಾತ್ತ ಕಾತುಗೊಂಡಿದ್ರೆ, ಪಾಪಿಗೆ ಹೋಗ್‌ಬೇಕಾಗ್ತದೆ."

"ಥೂತ್ತೇರಿ!!!" ■



ಮಕ್ಕಳ ಕಿಡ್ನಿ, ಕಣ್ಣು ಕಿತ್ತು

ಕೊಲ್ಲುವ ಜಾಲ

ಮಕ್ಕಳನ್ನು ಮತ್ತು ಯುವತಿಯರನ್ನು ಅಪಹರಿಸಿ ಅವರನ್ನು ಮನೆಕೆಲಸಕ್ಕೆಂದೋ, ಮೈಕಸುಬಿಗೆಂದೋ ಮಾರಾಟಮಾಡುವ ದಂಧೆ ಮೊದಲಿನಿಂದಲೂ ನಡೆದುಕೊಂಡು ಬಂದದ್ದೇ. ಆದರೆ ಈಗ ಅದೇ ದಂಧೆಯು ಕಿಡ್ನಿಗಳನ್ನು, ಕಣ್ಣುಗುಡ್ಡೆಗಳನ್ನು ಜೀವಂತ ಮಕ್ಕಳಿಂದ ಕಿತ್ತು ಅಪಾರ ಲಾಭಕ್ಕೆ ಮಾರುವ ದಂಧೆಯಾಗಿ ಪರಿವರ್ತನೆಗೊಂಡಿದೆ ಎಂದರೆ ಆಘಾತವಾಗುತ್ತದೆ.



ಮಕ್ಕಳನ್ನು ಮಾರಾಟ ಮಾಡುತ್ತಿದ್ದ ಪುಟ್ಟಂಜಮ್ಮ



ಇಲ್ಲಿಯವರೆಗೂ ಕಿಡ್ನಿ ಮಾರಾಟ ಮಾಡುತ್ತಿದ್ದ ಜಾಲಗಳ ಬಗ್ಗೆ ಕೇಳಿದ್ದೇವೆ. ಬಡತನದ ಬೇಗೆಯಲ್ಲಿ ಬೆಂದ ತಾಯಂದಿರು ತಾವು ಹೆತ್ತ ಕೂಸುಗಳನ್ನೇ ಎರಡು ಹೊತ್ತಿನ ಊಟಕ್ಕಾಗಿ ಮಾರಿದ್ದರ ಬಗ್ಗೆಯೂ ಕೇಳಿದ್ದೇವೆ. ಆದರೆ ಹಣದಾಸೆಗಾಗಿ ಚಿಕ್ಕ ಮಕ್ಕಳನ್ನು ಅಪಹರಿಸಿ, ಅವರ ಮೂತ್ರಪಿಂಡಗಳನ್ನು ಕಿತ್ತು, ಅವರ ಕಣ್ಣು ಗುಡ್ಡೆಗಳನ್ನು ಬಗೆದು ಆನಂತರ ಆ ಅಮಾಯಕ ಮಕ್ಕಳನ್ನು ಕೊಂದು ಎಲ್ಲೋ ಬಿಸಾಡಿದ್ದರ ಬಗ್ಗೆಯಾಗಲೀ, ಅತಂಹ ಕೃತ್ಯಗಳಲ್ಲಿ ತೊಡಗಿರುವ ಜಾಲವೊಂದರ ಬಗ್ಗೆಯಾಗಲೀ ಕೇಳಿರಲಿಲ್ಲ. ಆದರೆ ಇದು ನಿಜ ಮಾತ್ರವಲ್ಲ ಅಂತಹ ದಂಧೆಯೊಂದು ನಮ್ಮ ರಾಜ್ಯದಲ್ಲಿ ವ್ಯವಸ್ಥಿತವಾಗಿ ನಡೆಯುತ್ತಿರುವುದೂ ಅಷ್ಟೇ ಕಠೋರವಾದ ಸತ್ಯ.

ಇದನ್ನು ಕೇಳಿ ಯಾರಿಗಾದರೂ ಗಾಭರಿಯಾಗುವುದು ಸಹಜ. ಆದರೆ ಇದು ಇಲ್ಲಿಗೇ ನಿಲ್ಲುವುದಿಲ್ಲ. ಈ ವ್ಯೂಹವನ್ನು ಬಗೆದಷ್ಟು, ಅದರ ಒಳಹೊಕ್ಕು ನೋಡಿದಷ್ಟು ಇನ್ನೂ ಗಾಭರಿಗೊಳಿಸುವ ವಿಷಯಗಳು ಹೊರಬೀಳುತ್ತವೆ, ಎಲ್ಲರನ್ನು ಬೆಚ್ಚಿ ಬೀಳಿಸುತ್ತವೆ. ಅದನ್ನು ಕಂಡು ಇದು ಒಂದು ಹಾರರ್ ಚಿತ್ರವೋ, ಅಥವಾ ಕರ್ನಾಟಕದಂತಹ ಸುಸಂಸ್ಕೃತರ ರಾಜ್ಯದಲ್ಲಿ ನಡೆಯುತ್ತಿರುವ ಕ್ರೌರ್ಯವೋ ಎಂಬ ಆತಂಕ ಹುಟ್ಟಿಸುತ್ತದೆ.

ಮಕ್ಕಳನ್ನು ಮತ್ತು ಯುವತಿಯರನ್ನು ಅಪಹರಿಸಿ ಅವರನ್ನು ಮನೆಕೆಲಸಕ್ಕೆಂದೋ, ಮೈಕಸುಬಿಗೆಂದೋ ಮಾರಾಟಮಾಡುವ ದಂಧೆ ಮೊದಲಿನಿಂದಲೂ ನಡೆದುಕೊಂಡುಬಂದದ್ದೇ. ಆದರೆ ಈಗ ಅದೇ ದಂಧೆಯು ಕಿಡ್ನಿಗಳನ್ನು, ಕಣ್ಣುಗುಡ್ಡೆಗಳನ್ನು ಜೀವಂತ ಮಕ್ಕಳಿಂದ ಕಿತ್ತು ಅಪಾರ ಲಾಭಕ್ಕೆ ಮಾರುವ ದಂಧೆಯಾಗಿ ಪರಿವರ್ತನೆಗೊಂಡಿದೆ ಎಂದರೆ ಆಘಾತವಾಗುತ್ತದೆ.

ಇಂತಹ ಜಾಲವೊಂದರ ಸುಳಿವು ಕೊಟ್ಟವಳು ಪುಟ್ಟಂಜಮ್ಮ ಎಂಬ ಮಹಿಳೆ. ಆಕೆ ಕಳೆದ ಹಲವು ವರ್ಷಗಳಿಂದ ಮಕ್ಕಳ ಮಾರಟ ದಂಧೆಯಲ್ಲಿ ತೊಡಗಿದ್ದು ಇತ್ತೀಚೆಗೆ ಸಿಕ್ಕಿಬಿದ್ದಳು. ಆಗ "ನೀನು ಇಲ್ಲಿಯವರೆಗೂ ಮಾರಿರುವ ಮಕ್ಕಳನ್ನು ಎಲ್ಲೆಲ್ಲಿ ಬಿಟ್ಟಿದ್ದೀಯಾ, ಅಲ್ಲಿಂದ ಅವರನ್ನೆಲ್ಲ ಕರೆದುಕೊಂಡು ಬರುವುದಕ್ಕೆ ಸಹಕರಿಸು" ಎಂದು ಅವಳನ್ನು ಕೇಳಿದಾಗ ಆಕೆ ಹೇಳಿದ್ದೇನು ಗೊತ್ತಾ?

"ಇಲ್ಲೀವರೆಗೂ ನೂರಕ್ಕೂ ಹೆಚ್ಚು ಮಕ್ಕಳನ್ನು ಮಾರಿದ್ದೇನೆ. ಅವರ ಪೈಕಿ ನಲವತ್ತು ಜನ ಈಗ ಎಲ್ಲಿದ್ದಾರೆ ಅಂತ ಗೊತ್ತು, ಅವರನ್ನೆಲ್ಲ ಕರೆದುಕೊಂಡು ಬರಬಹುದು, ಆದರೆ ಆರು ಮಕ್ಕಳನ್ನು ಮಾತ್ರ ಏನೇ ಮಾಡಿದರೂ ವಾಪಸ್ಸು ಕರೆದುಕೊಂಡುಬರುವುದಕ್ಕೆ ಸಾಧ್ಯವಿಲ್ಲ" ಎಂದು ಉತ್ತರಿಸಿದಳು.

"ಯಾಕೆ?" ಎಂಬ ಮರು ಪ್ರಶ್ನೆಗೆ ಪುಟ್ಟಂಜಮ್ಮ ನೀಡಿದ ಉತ್ತರ ತಲ್ಲಣಿಸುವಂತಿತ್ತು. ಯಾಕೆಂದರೆ ಆಕೆ ಹೇಳಿದ್ದು:

"ಅದು ಹೆಂಗೆ ಕರೆಕಂಡು ಬರಕ್ಕಾಗುತ್ತೆ ಸ್ವಾಮಿ? ಅವರ ಕಿಡ್ನಿಗಳನ್ನು ಕತ್ತರಿಸಿ, ಕಣ್ಣುಗುಡ್ಡೆಗಳನ್ನು ಕಿತ್ತುಕೊಂಡು ಅವರೆಲ್ಲರ ಶವಗಳನ್ನು ಅದೆಲ್ಲೋ ಬಿಸಾಡಿದ್ದಾರೆ. ಅವರನ್ನೆಲ್ಲ ಕರೆಕೊಂಡು ಬಾ ಅಂದ್ರೆ ಹೆಂಗ್ ಸಾಧ್ಯ?"

ಅಂದಹಾಗೆ ಈ ಪುಟ್ಟಂಜಮ್ಮ ಮತ್ತು ಆಕೆಯಂತೆ ಮಕ್ಕಳನ್ನು ಅಪಹರಿಸಿ ಮಾರುವವರ ಜಾಲದ ಕರ್ಮಭೂಮಿ ರಾಜ್ಯದಲ್ಲಿ ಅತಿ ಹಿಂದುಳಿದ ಪ್ರದೇಶಗಳಲ್ಲಿ ಒಂದಾದ ಎಚ್.ಡಿ. ಕೋಟೆ ತಾಲ್ಲೂಕು. ಅಲ್ಲಿನ ಹಾಡಿಗಳಲ್ಲಿ ವಾಸಿಸುವ ಗಿರಿಜನರ ಮತ್ತು ಆ ಪ್ರದೇಶದಲ್ಲಿ ಸುತ್ತಾಡುತ್ತಲೇ ಇರುವ ಅಲೆಮಾರಿ ಜನಾಂಗದ ಮಕ್ಕಳೇ ಈ ಜಾಲದ ಬಲಿಪಶುಗಳು. ಸಾಮಾನ್ಯವಾಗಿ ಮಕ್ಕಳು ನಾಪತ್ತೆಯಾಗಿರುವುದರ ಬಗ್ಗೆ ಪೊಲೀಸರಿಗೆ ದೂರು ಕೊಡಲಿಕ್ಕೂ ಆಗದ, ಒಂದೇ ಸ್ಥಳದಲ್ಲಿ ಬಹಳ ದಿನ ವಾಸಿಸದ, ಹಸಿವೇ ಪ್ರಮುಖ ಸಮಸ್ಯೆಯಾಗಿರುವ ಕುಟುಂಬಗಳ ಮಕ್ಕಳನ್ನು ಕದ್ದು ದೂರದ ಮಂಗಳೂರಿಗೆ, ರಾಜಧಾನಿ ಬೆಂಗಳೂರಿಗೆ, ಅಥವಾ ಮುಂಬೈನ ಕಾಮಾಟೀಪುರಕ್ಕೆ ಸರಬರಾಜು ಮಾಡುವ ಜಾಲವೊಂದು ಈ ಪ್ರದೇಶದಲ್ಲಿ ಬಹಳದಿನಗಳಿಂದ ಕೆಲಸ ಮಾಡುತ್ತಿತ್ತು, ಈಗ ಈ ಜಾಲ ತನ್ನ ಕಾರ್ಯವ್ಯಾಪ್ತಿಯನ್ನು ಹೆಚ್ಚಿಸಿಕೊಂಡು ಮಕ್ಕಳ ಮಾರಾಟ ಮಾತ್ರವಲ್ಲ, ಅವರ ದೇಹದ ಅಂಗಗಳನ್ನೂ ಕಿತ್ತು ಲಾಭ ಪಡೆಯುವ ದಂಧೆಯಲ್ಲಿ ತೊಡಗಿದೆ.

ಈ ದಂಧೆ ಮೂರು ಸ್ತರಗಳಲ್ಲಿ ಕಾರ್ಯನಿರ್ವಹಿಸುತ್ತಿದೆ. ಬಡವರ ಮಕ್ಕಳಿಗೆ ತಿಂಡಿ ತಿನುಸುಗಳನ್ನೋ, ಆಟದ ಗೊಂಬೆಗಳನ್ನೋ ತೋರಿಸಿ ಅವರನ್ನು ಅವರ ಹಾಡಿಗಳಿಂದ ಅಪಹರಿಸುವವರದ್ದು ಪ್ರಥಮ ಸ್ತರ. ಇಂಥವರಲ್ಲಿ ಪುಟ್ಟಂಜಮ್ಮ ಸೇರಿದಂತೆ ಕರಿಯಯ್ಯ, ಮಾದಯ್ಯ, ಚೆಲುವಮ್ಮ ಮತ್ತು ಅಂತೋಣಿಯಮ್ಮ ಪ್ರಮುಖರು. ಇವರೆಲ್ಲ ಹೀಗೆ ಅಪಹರಿಸಿದ ಮಕ್ಕಳನ್ನು ಮಂಗಳೂರಿನಲ್ಲಿರುವ ಅಬೂಬಕ್ಕರ್ ಎಂಬುವವನಿಗೆ ಮಾರುತ್ತಾರೆ. ಆತ ಒಂದು ಮಗುವಿಗೆ ಇವರಿಗೆ ಕೊಡುವ ಹಣ ಒಂದು ಸಾವಿರದಿಂದ ಎರಡು ಸಾವಿರ ರೂಪಾಯಿ ಮಾತ್ರ. ಮಗುವಿನ ವಯಸ್ಸು, ಬಣ್ಣವನ್ನಾಧರಿಸಿ ಅದರ ರೇಟನ್ನು ಫಿಕ್ಸ್ ಮಾಡಲಾಗುತ್ತದೆ.

ಈ ಅಬೂಬಕ್ಕರ್ ಮತ್ತು ಆತನ ಸಂಗಡಿಗರಾದ ಸುರೇಶ್, ಸತೀಶ್ ಮತ್ತು ಇಬ್ರಾಹಿಂ ಎಂಬುವವರ ಗುಂಪು ಈ ಜಾಲದ ಎರಡನೇ ಸ್ತರ. ಅದರಲ್ಲೂ ಈ ಅಬೂಬಕ್ಕರ್ ಎಂಬಾತ ನಟೋರಿಯಸ್ ಮನುಷ್ಯ. ಈತ ಅಪ್ರಾಪ್ತ ಬಾಲಕಿಯೊಬ್ಬಳ ಮೇಲೆ ಅತ್ಯಾಚಾರವೆಸಗಿದ, ಅಮಾನುಷವಾಗಿ ಹಿಂಸಿಸಿದ ದೂರು ಮಂಗಳೂರಿನ ಪೊಲೀಸ್ ಠಾಣೆಯಲ್ಲಿ ದಾಖಲಾಗಿದೆ. ಆದರೂ ಯಾವುದೇ ಅಡ್ಡಿ ಆತಂಕಗಳಿಲ್ಲದೆ ಈತ ಮಕ್ಕಳ ಮಾರಾಟದ ಜಾಲದಲ್ಲಿ ಅವರನ್ನು ಮೈಕಸುಬಿಗೆ ದೂಡುವ 'ಪುಣ್ಯ' ಕಾರ್ಯದಲ್ಲಿ ಇವತ್ತಿಗೂ ತೊಡಗಿದ್ದಾನೆ.



ಮನೆ ಕೆಲಸವೆಂಬ ಜೀತದಿಂದ ಮುಕ್ತರಾದ ಹುಡುಗಿಯರು



ಮಂಗಳೂರಿನ ಹತ್ತಿರವಿರುವ ವಿಠಲದಲ್ಲಿ ಈತನದೊಂದು ತೋಟವಿದೆ. ಆ ತೋಟದ ಮನೆಯಲ್ಲಿ ಅಬೂಬಕ್ಕರ್ ತಾನು ಖರೀದಿಸಿದ ಮಕ್ಕಳ 'ಸ್ಟಾಕ್' ಇಟ್ಟಿರುತ್ತಾನೆ. ಮೊನ್ನೆ ಮೈಸೂರಿನ ಒಡನಾಡಿ ಸಂಸ್ಥೆಯವರು ಮತ್ತು ಮಂಗಳೂರಿನ ಬಾಲ್ಯ ನ್ಯಾಯ ಮಂಡಳಿ ಸಂಘಟನೆಯವರು ಆ ತೋಟದ ಮನೆಯ ಮೇಲೆ ದಾಳಿ ಮಾಡಿದಾಗ ಅಲ್ಲಿ ಹನ್ನೆರಡರಿಂದ ಹದಿನೈದು ವರ್ಷದ ವಯಸ್ಸಿನ 18 ಹೆಣ್ಣು ಮಕ್ಕಳಿದ್ದರು.

ಅಲ್ಲಿದ್ದ ಮಕ್ಕಳನ್ನು ಬಿಡುಗಡೆಗೊಳಿಸಿ ವಿಚಾರಿಸಿದಾಗ ಗೊತ್ತಾಗಿದ್ದೇನೆಂದರೆ, ಆ ತೋಟದ ಮನೆಯಲ್ಲಿ ಸ್ವಲ್ಪ ಹಿರಿಯರಾದ ಹುಡುಗಿಯರಿಗೆ ವಿಧವಿಧವಾದ ಆಮಿಷಗಳನ್ನೊಡ್ಡಿ ಪಳಗಿಸಲಾಗುತ್ತದೆ ಎಂಬುದು. ಎಂದೂ ಯಾವ ತರಹದ್ದೂ ಸುಖ, ಸೌಲಭ್ಯಗಳನ್ನು ಕಂಡರಿಯದ ಹುಡುಗಿಯರಿಗೆ ಅಲ್ಲಿ ಅಂದ ಚೆಂದದ ಬಟ್ಟೆಗಳು, ಬಾಬ್ ಕಟ್‌ನಂತಹ ಮಾಡ್ ಹೇರ್‌ಕಟ್, ನೈಲ್ ಪಾಲಿಶ್, ಇತ್ಯಾದಿಗಳನ್ನು ನೀಡಲಾಗುತ್ತದೆ. ಇದಕ್ಕೆಲ್ಲ ಅವರು ಹೊಂದಿಕೊಂಡನಂತರ ಅವರಿಗೆ ಕುಡಿತ, ಇತ್ಯಾದಿಗಳ ಮೋಜುಗಳ ರುಚಿಯನ್ನು ಪರಿಚಯಿಸಲಾಗುತ್ತದೆ. ಅದರ ಮುಂದಿನ ಹೆಜ್ಜೆಯೇ ವೇಶ್ಯಾವಾಟಿಕೆ.

ಇದಕ್ಕೆ ಉದಾಹರಣೆಯಾಗಿ ರಶ್ಮಿ (ಹುಡುಗಿಯ ಭವಿಷ್ಯದ ಕಾರಣದಿಂದ ಆಕೆಯ ಹೆಸರನ್ನು ಬದಲಾಯಿಸಲಾಗಿದೆ) ಎಂಬ ಬಾಲಕಿಗೆ ಅಬೂಬಕ್ಕರನ ತೋಟದಲ್ಲಿ ಆದದ್ದನ್ನು ಹೇಳಬಹುದು. ನೈಲ್‌ಪಾಲಿಶ್‌ನಂತಹ ಶೋಕಿಗಳು ಮತ್ತು ಗುಂಡಿನಂತಹ ಚಟಗಳನ್ನು ಈಕೆಗೆ ಪರಿಚಯಿಸಿದ ನಂತರ ಅವಳನ್ನು ವೇಶ್ಯಾವಾಟಿಕೆಗೆ ಪಳಗಿಸಲು ಅವಳ ಮೇಲೆ ಸಾಮೂಹಿಕ ಅತ್ಯಾಚಾರವನ್ನು ಎಸಗಲಾಗಿದೆ ಮಾತ್ರವಲ್ಲ, ಅದಕ್ಕೆ ಆಕೆ ವಿರೋಧ ವ್ಯಕ್ತಪಡಿಸಿದಾಗ ಅವಳ ಮೈಮೇಲೆಲ್ಲ ಸಿಗರೇಟಿನಿಂದ ಸುಟ್ಟು ಹಿಂಸಿಸಲಾಗಿದೆ. ಒಡನಾಡಿಯವರು ಆಕೆಯನ್ನು ಅಲ್ಲಿಂದ ರಕ್ಷಿಸಿ ತಂದಿದ್ದಾರೆ.

ಈ ಜಾಲದ ಮೊದಲನೆ ಸ್ತರದವರಿಗೆ ಪ್ರತಿ ಹೆಣ್ಣು ಮಗುವಿಗೆಂದು ಒಂದೋ, ಎರಡೋ ಸಾವಿರ ರೂಪಾಯಿಗಳು ಸಿಕ್ಕರೆ, ಅಬೂಬಕ್ಕರ್‌ನಂತಹ ಎರಡನೆ ಸ್ತರದವರಿಗೆ ಪ್ರತಿ ಹೆಣ್ಣು ಮಗುವಿನಿಂದ ಐದರಿಂದ ಹತ್ತು ಸಾವಿರ ರೂಪಾಯಿಗಳು ಸಿಗುತ್ತವೆ. ಈ ಎರಡನೆ ಸ್ತರ ಮೂರು-ನಾಲ್ಕು ರೀತಿಯಲ್ಲಿ ಕೆಲಸ ಮಾಡುತ್ತದೆ.

ಅಷ್ಟೇನು ಚೆಂದವಿಲ್ಲದ ಹುಡುಗಿಯರನ್ನು ಮನೆಗೆಲಸಕ್ಕೆಂದು ಇವರು ಕಳುಹಿಸುತ್ತಾರೆ. ಹಾಗೆ ಕಳುಹಿಸಿದ ಹುಡುಗಿಯರ ಪ್ರತಿ ತಿಂಗಳ ಸಂಬಳದಲ್ಲಿ ಇವರಿಗೆ ಕಟ್ ಇರುತ್ತದೆ. ಅಬೂಬಕ್ಕರನೇ ಒಪ್ಪಿಕೊಂಡಂತೆ, ಈಗ ಆತ ಸುಮಾರು ಐವತ್ತು ಹುಡುಗಿಯರನ್ನು ಮನೆಗೆಲಸಕ್ಕೆಂದು ಬಿಟ್ಟಿದ್ದು, ಅವರ ಸಂಬಳದಿಂದ ಆತನಿಗೆ ಪ್ರತಿ ತಿಂಗಳು ಕನಿಷ್ಠವೆಂದರೂ ಐದು ಸಾವಿರ ರೂಪಾಯಿಗಳು ಸಂದಾಯವಾಗುತ್ತವೆ.

ಆದರೆ ಇದು ಅಬೂಬಕ್ಕರ್ ಮತ್ತು ಆತನ ಮಿತ್ರರಿಗೆ ಚಿಲ್ಲರೆ ಕಾಸು. ಅದಕ್ಕಿಂತಲೂ ಅವರಿಗೆ ನಿಜವಾದ ಆದಾಯ ತರುವುದು ಹುಡುಗಿಯರನ್ನು ವೇಶ್ಯಾವಾಟಿಕೆಗೆ ದೂಡುವುದರಿಂದ. ಚೆಂದದ ಹುಡುಗಿಯರನ್ನು ಮೊದಲೇ ಪಳಗಿಸಿ ಮಾರುವುದರಿಂದ ಸಾವಿರಾರು ರೂಪಾಯಿಗಳು ಸಿಗುತ್ತವೆ.

ಸಾಮಾನ್ಯವಾಗಿ ಮನೆ ಕೆಲಸ ಮಾಡುವ ಹುಡುಗಿಯರು ಮೈನೆರೆದಾಗ ಅವರನ್ನು ಮನೆಯಲ್ಲಿ ಇಟ್ಟುಕೊಳ್ಳಲು ಜನ ಇಷ್ಟ ಪಡುವುದಿಲ್ಲ. ಆಗ ಅವರನ್ನು ಮತ್ತೆ ಅಬೂಬಕ್ಕರ್ ಮತ್ತಾತನ ಗ್ಯಾಂಗಿಗೆ ಹಿಂದಿರುಗಿಸುತ್ತಾರೆ. ಹೇಗಿದ್ದರೂ ಅಷ್ಟೊತ್ತಿಗೆ ಆ ಹುಡುಗಿಯರು ಮನೆವಾಸ, ಮನೆ ಊಟ, ಟಿವಿಯಂತಹ ಸವಲತ್ತುಗಳಿಗೆ ಒಗ್ಗಿರುತ್ತಾರೆ. ಅಂಥವರನ್ನು ಮೈಕಸುಬಿಗೆ ದೂಡಿ ಮತ್ತಷ್ಟು ಲಾಭವನ್ನು ಈ ಎರಡನೆ ಸ್ತರದ ಜನರು ಮಾಡುತ್ತಾರೆ.

ಈ ದಂಧೆಯಲ್ಲಿ ಬೆಂಗಳೂರಿನ ಕೆ.ಎಚ್.ಬಿ ಕಾಲೋನಿಯಲ್ಲಿರುವ ತಲೆಹಿಡುಕಿಯೊಬ್ಬಳು ಸೇರಿದಂತೆ ಇನ್ನೂ ಬಹಳಷ್ಟು ಜನರಿದ್ದಾರೆ. ಮೊದಲನೆ ಸ್ತರದಲ್ಲಿ ಕಾರ್ಯನಿರ್ವಹಿಸುತ್ತಿರುವವರನ್ನು ಸರಿಯಾಗಿ ಪ್ರಶ್ನಿಸಿದರೆ ಇವರೆಲ್ಲರ ಬೇರುಗಳು ಸಿಗುವುದು ಖಂಡಿತ.

ಇನ್ನು ಮಕ್ಕಳ ಕಿಡ್ನಿಗಳನ್ನು ಕಿತ್ತು ಮಾರುವುದು, ಅವರ ಕಣ್ಣುಗುಡ್ಡೆಗಳನ್ನು ಬಗೆದು ಹಣ ದೋಚುವುದು ಈ ಇಡೀ ಜಾಲದ ಮೂರನೆ ಸ್ತರದ ಜನರ ಕೆಲಸ. ಇವರು ಈ ದಂಧೆಯನ್ನು ಎಷ್ಟು ವ್ಯವಸ್ಥಿತವಾಗಿ ನಡೆಸುತ್ತಿದ್ದಾರೆಂದರೆ, ಅಪಹರಿಸಿದ ಮಕ್ಕಳನ್ನು ಸ್ಥಳೀಯ ಆಸ್ಪತ್ರೆಗಳಲ್ಲೇ ಶಸ್ತ್ರ ಚಿಕಿತ್ಸೆಗೆ ಒಡ್ಡಿ ಅವರ ಅಂಗಾಗಗಳನ್ನು ಕದಿಯುತ್ತಿದ್ದಾರೆ. ಅದು ಸಾಲದೆಂಬಂತೆ ಅವರನ್ನು ಹಲವೊಮ್ಮೆ ದುಬೈನಂತಹ ದೇಶಗಳಿಗೂ ರವಾನಿಸಿ ಅಲ್ಲಿ ಬೇಕಾದ್ದನ್ನು ಮಾಡುತ್ತಾರೆ. ಇದಕ್ಕೊಂದು ಮಕ್ಕಳನ್ನು ವಿದೇಶಗಳಿಗೆ ಕರೆದುಕೊಂಡು ಹೋಗಲು ಪಾಸ್‌ಪೋರ್ಟ್‌ಗಳನ್ನು ತಯಾರಿಸುವ ತಂಡವೊಂದೂ ಇದೆಯಂತೆ. ಆ ಪಾಸ್‌ಪೋರ್ಟ್‌ಗಳಲ್ಲಿ ಅಪಹರಿಸಿರುವ ಮಕ್ಕಳು ತಮ್ಮ ಸ್ವಂತ ಮಕ್ಕಳೆಂದು ದಾಖಲಿಸಿ ಕರೆದುಕೊಂಡು ಹೋಗಲಾಗುತ್ತದೆಯಂತೆ. ಓರ್ವ ಸಂಸದನೇ ಯಾವುದೋ ಮಹಿಳೆಯನ್ನು ತನ್ನ ಪತ್ನಿಯೆಂದು ಕರೆದುಕೊಂಡು ಹೋಗುತ್ತಾನೆಂದರೆ ಈ ಬಡ ಮಕ್ಕಳನ್ನು ತಮ್ಮ ಮಕ್ಕಳೆಂದು ಕರೆದುಕೊಂಡು ಹೋಗುವುದು ಅಷ್ಟು ಕಷ್ಟದ ಕೆಲಸವೇನಲ್ಲ.

ಆದರೆ ಮಕ್ಕಳ ಕಿಡ್ನಿ ಮತ್ತು ಕಣ್ಣುಗಳನ್ನು ಕಿತ್ತು ಮಾರಿಕೊಂಡಿದ್ದಾರೆ ಎಂಬುದಕ್ಕೆ ಪುರಾವೆ ಏನು? ಅದೇ ಪುಟ್ಟಂಜಮ್ಮ ಹೇಳಿರುವುದೇನೆಂದರೆ "ಅಯ್ಯೋ, ಒಂದು ಸಾರಿ ಒಂದು ಮಗುದು ಕಿಡ್ನಿ ಕತ್ತರಿಸಿಕೊಂಡಿದ್ದರು. ಆಮೇಲೆ ಅವಳನ್ನು ಏನು ಮಾಡೋದು ಅಂತ ಗೊತ್ತಾಗಲಿಲ್ಲ, ಅವಳನ್ನು ಮತ್ತೆ ಮನೆಗೆ ಕರೆದುಕೊಂಡು ಬಂದಿದ್ದರೆ ಅವರ ಅಪ್ಪ ಅಮ್ಮ ನನ್ನನ್ನೇ ಸಿಗಿದು ಹಾಕುತ್ತಿದ್ದರು. ಅದಕ್ಕೆ ಅವಳನ್ನು ಬೆಂಗಳೂರಿನ ರೇಲ್ವೆ ಸ್ಟೇಷನ್ ಹತ್ತಿರ ಬಿಟ್ಟು ಬಂದೆ. ಆಮೇಲೆ ಅವಳೇನಾದಳು ಅಂತ ನಂಗೆ ಗೊತ್ತಿಲ್ಲ."

ಅಷ್ಟೇ ಅಲ್ಲ, ಇದೇ ದಂಧೆಯಲ್ಲಿರುವ ಕರಿಯಯ್ಯ ಹೇಳುವ ಪ್ರಕಾರ ಒಂದು ಬಾರಿ ಮಗುವೊಂದರಿಂದ ಕಿಡ್ನಿ ಮತ್ತು ಕಣ್ಣುಗುಡ್ಡೆಗಳನ್ನು ತೆಗೆದಿದ್ದು, ಆ ಮಗು ಸತ್ತಿದ್ದನ್ನು ನೋಡಿದ್ದನಂತೆ. "ಹಂಗೆ ಕಿತ್ತು ಕೊಂಡು ಮಾರಾಟ ಮಾಡಿದ್ದರು. ಆಮೇಲೆ ಆ ಮಗುವನ್ನು ಎಲ್ಲೋ ಬಿಸಾಡಿದರು. ಆ ಮಗುವಿಗೆ ಹಾಗೆ ಮಾಡಿದ್ದನ್ನು ನಾನೇ ನೋಡಿದ್ದೇನೆ" ಎಂದಿದ್ದಾನೆ ಕರಿಯಯ್ಯ.

ಹಲವು ವರ್ಷಗಳ ಹಿಂದೆ ರಾಜ್ಯ ಸರ್ಕಾರವೇ ಸ್ಥಳೀಯ ಸಮೀಕ್ಷೆ ನಡೆಸಿ ಇಲ್ಲಿಂದ ಸುಮಾರು 182 ಮಕ್ಕಳು ಕಣ್ಮರೆಯಾಗಿದ್ದಾರೆಂದು ದಾಖಲಿಸಿತ್ತು, ಅವರಲ್ಲಿ ಅದೆಷ್ಟು ಮಕ್ಕಳು ಮನೆ ಕೆಲಸವೆಂಬ ಜೀತಕ್ಕೆ, ಮೈಕಸುಬೆಂಬ ದಂಧೆಗೆ, ಕಿಡ್ನಿ-ಕಣ್ಣುಗುಡ್ಡೆಗಳ ಮಾರಾಟದ ಜಾಲದಲ್ಲಿ ಸರಕುಗಳಾದರೆಂಬುದನ್ನು ಸೂಕ್ತ ವಿಚಾರಣೆಯಿಂದಲೇ ತಿಳಿದುಕೊಳ್ಳಬೇಕಿದೆ.

ತಕ್ಷಣವೇ ರಾಜ್ಯ ಸರಕಾರ ಇದಕ್ಕೆ ಮುಂದಾಗುತ್ತದೆಯೇ? ಆ ಮೂಲಕ ಈ ರಾಜ್ಯದ ಮಕ್ಕಳನ್ನು ರಕ್ಷಿಸುತ್ತದೆಯೇ?

■ ವರದಿಗಾರ

ಸೆಪ್ಟೆಂಬರ್ ಕೊನೇ ವಾರ ಗೌಡ-ಸೋನಿಯಾ ಚರ್ಚೆ?

ರಾಜ್ಯ ರಾಜಕೀಯದಲ್ಲಿ ಮುಂದೇನಾಗಬಹುದೆಂದು ಯಾರಿಗೂ ಖಚಿತವಾಗಿ ಹೇಳಲಾಗುತ್ತಿಲ್ಲ. ಸ್ವತಃ ದೇವೇಗೌಡರಿಗೂ ಸಹ!

ಮೈತ್ರಿ ಮರುಮೈತ್ರಿ ವಿಚಾರ ಹಾಗೂ ಅದರಿಂದ ಉಂಟಾಗವ ಲಾಭ ನಷ್ಟಗಳ ಲೆಕ್ಕಾಚಾರದಲ್ಲೇ ದಳ-ಕಾಂಗ್ರೆಸ್-ಬಿಜೆಪಿಗಳು ತಲೆ ಕೆಡಿಸಿಕೊಳ್ಳುತ್ತಿದ್ದು ಈಗಿನ ಅಸ್ಪಷ್ಟ ಹಾಗೂ ಗೊಂದಲಕಾರಿ ಪರಿಸ್ಥಿತಿ ಏರ್ಪಡಲು ಅದೇ ಕಾರಣವಾಗಿದೆ.

ಕಾಂಗ್ರೆಸ್-ದಳ ಮರುಮೈತ್ರಿ ವಿಚಾರ ಈಗಲೂ ಜೀವಂತವಾಗಿರುವುದು ಈ ಕಾರಣಕ್ಕೇನೆ. ದೇವೇಗೌಡರಿಗೂ ಈ ಮರುಮೈತ್ರಿ ಏರ್ಪಡುತ್ತದಾ ಅಥವಾ ಇಲ್ಲವಾ ಎಂಬುದು ಇನ್ನೂ ಖಚಿತವಾಗಿರದ ಕಾರಣ ಸುಮ್ಮನೆ ಕಾಯುತ್ತಿದ್ದಾರೆ. ಒಂದು ವೇಳೆ ಕಾಂಗ್ರೆಸ್ ಸಖ್ಯ ಏರ್ಪಟ್ಟರೆ ಅದರ terms and conditions ಅನ್ನು work out ಮಾಡಬೇಕಾಗುತ್ತದೆ. ಬಿಜೆಪಿ ಜೊತೆಗಾದರೂ ಅಷ್ಟೇ.

ಅದಕ್ಕೂ ಮುನ್ನ ಸೆಪ್ಟೆಂಬರ್ ಕೊನೆ ವಾರದಲ್ಲಿ ನಡೆಯಲಿರುವ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಜೆಡಿಎಸ್ ಗಳಿಕೆ ಏನು, ಎಷ್ಟು ಎಂಬುದರ ಆಧಾರದಲ್ಲೇ ಮುಂದಿನ ಅಧಿಕಾರ ಹಸ್ತಾಂತರದ ಕ್ಲೈಮಾಕ್ಸ್ ದೃಶ್ಯಗಳು ಗೋಚರವಾಗಲಿವೆ. ಗೌಡರು ನಾಳೆ ಬಿಜೆಪಿ ಜೊತೆ ಮುಂದುವರೆಯಲಿ ಇಲ್ಲಾ ಕಾಂಗ್ರೆಸ್ ಜೊತೆ ಮರುಮೈತ್ರಿ ಮಾಡಿಕೊಳ್ಳಲಿ ಇವೆರಡಲ್ಲಿ ಯಾವುದೇ ಆದರೂ ಆ ಮೈತ್ರಿ ವಿಭಿನ್ನ ಪರತ್ತುಗಳನ್ನು ಒಳಗೊಂಡಿರುತ್ತದೆ...... ಈಗ ತಾನೆ ಹೊಸದಾಗಿ ಮೈತ್ರಿ ಶುರುವಾಗಿದೆಯೇನೊ ಎಂಬಂತೆ!




ಈ ಗೊಂದಲಕಾರಿ ಪ್ರಕ್ರಿಯೆಯ ಭಾಗವಾಗಿಯೇ ಸೆಪ್ಟೆಂಬರ್ ಕೊನೆಯ ವಾರದಲ್ಲಿ ದೇವೇಗೌಡ-ಸೋನಿಯಾ ಗಾಂಧಿ ಮಧ್ಯೆ ಮರುಮೈತ್ರಿಯ ಹೊಸ ಮಾತುಕತೆ ನಡೆಯುವ ಮಾತು ಕೇಳಿಬರುತ್ತಿದೆ.

ಮುಖ್ಯಮಂತ್ರಿ ಹುದ್ದೆಯ ಆಕಾಂಕ್ಷಿಗಳಲ್ಲೊಬ್ಬರಾದ ಕೇಂದ್ರ ಸಚಿವ ಎಂ.ವಿ. ರಾಜಶೇಖರನ್‌ರೇ ಇದರ ರುವಾರಿ! ಮಾತಾಡಿದ್ದಾರೆ ಅವರು.

ಈ ಮರುಮೈತ್ರಿಯ ಚರ್ಚೆ ಅಲ್ಲಲ್ಲಿ ನಡೆಯುತ್ತಿರುವಾಗಲೇ ಭಾನುವಾರ ಬೆಳಗ್ಗೆ (9.9.07) ಆಸ್ಕರ್ ಫರ್ನಾಂಡೀಸ್ ಧರಂಸಿಂಗರ ಮನೆಗೆ ಹೋಗಿ ಕೆಲ ಮುಖ್ಯ ವಿಚಾರ ಚರ್ಚಿಸಿ ಬಂದಿದ್ದಾರೆ. ಕಾಂಗ್ರೆಸ್ ಶಾಸಕಾಂಗದ (CLP) ನಾಯಕರಾಗಿರುವ ಧರಂಸಿಂಗ್ ಜೊತೆಗಿನ ಆಸ್ಕರ್ ಮಾತುಕತೆಗೆ ಇರುವ ಸಾಧ್ಯತೆಗಳು ಎರಡು.

ಒಂದು ಮರುಮೈತ್ರಿಯ ಸಾಧಕ ಬಾಧಕದ ವಿಚಾರ. ಇನ್ನೊಂದು ಸಾಧ್ಯತೆ ಏನೆಂದರೆ ಸಿದ್ಧರಾಮಯ್ಯನವರನ್ನು ವಿರೋಧ ಪಕ್ಷದ ನಾಯಕರನ್ನಾಗಿಸಿ ಧರಂಸಿಂಗರಿಗೆ ವಿಶ್ರಾಂತಿ ಕೊಡಿಸುವುದು. ತಕ್ಷಣದಲ್ಲಿ ಹೇಳಬೇಕೆಂದರೆ ಎರಡನೇ ಸಾಧ್ಯತೆಯೇ ನಿಜ ಎನಿಸುವಂತಿದೆ. ಒಂದು ವೇಳೆ ಯಡ್ಡಿ ಮುಖ್ಯಮಂತ್ರಿಯಾಗುವುದಾದರೆ ಅದೇ ಸಮಯದಲ್ಲಿ ಸಿದ್ದು ವಿರೋಧ ಪಕ್ಷದ ಲೀಡರ್ ಆಗಿ ಮುಂಚೂಣಿಗೆ ಬರುತ್ತಾರೆ. ಅಲ್ಲಿಗೆ ಗೌಡರ ಕಾಂಗ್ರೆ ಜೊತೆಗಿನ ಮರುಮೈತ್ರಿ ಸಾಧ್ಯತೆಯ ಆಸೆ ಮುರಿದು ಬಿದ್ದಿರುತ್ತದೆ. ಆಗ ಸೋನಿಯಾ ಜೊತೆಗಿನ ಗೌಡರ ಭೇಟಿಗೆ ಮಹತ್ವವೂ ಬರುವುದಿಲ್ಲ, ಅಸಲಿಗೆ ಆ ಸಾಧ್ಯತೆಯೇ ಉದ್ಭವಿಸುವುದಿಲ್ಲ.




ಪ್ರಕ್ಷುಬ್ಧ ಸ್ಥಿತಿಯಲ್ಲಿ ಗೌಡ

ಕಾಂಗ್ರೆಸ್ ಹಾಗೂ ಬಿಜೆಪಿಗಳೆಂಬ ಎರಡು ಮದ್ದಾನೆಗಳ ನಡುವೆ ಜೆಡಿಎಸ್ ಅಸ್ತಿತ್ವ ಕಾಪಾಡಿಕೊಳ್ಳಬೇಕಿರುವ ಗೌಡರಿಗೆ ಅವರ ರಾಜಕೀಯ ಜೀವನದಲ್ಲೇ ಅತ್ಯಂತ ಸವಾಲೆನಿಸುವ ಸಂದರ್ಭ ಇದು. ರಾಜ್ಯ ರಾಜಕೀಯದ ಸೂತ್ರಗಳೆಲ್ಲ ಈಗ ಗೌಡರ ಕೈಯಲ್ಲೇ ಇದೆ ಎಂಬಂತೆ ಭಾಸವಾದರೂ ಅದರೊಳಗೆ ಗೌಡರ ಅಸಹಾಯಕತೆಯೂ ಕಾಣುತ್ತಿದೆ. ಏಕೆಂದರೆ ಈಗ ಗೌಡರು ಸಾಧಿಸಿರುವ ಮೇಲುಗೈ ತಾತ್ಕಾಲಿಕವೇ ವಿನಃ ಖಾಯಂ ಆಗಿ ಮುಂದುವರೆಯುವಂತಾದ್ದಲ್ಲ. ಒಮ್ಮೆ ಇದು ಕೈತಪ್ಪಿ ಹೋದರೆ ತಮ್ಮ ಕುಟುಂಬ ಹಾಗೂ ಪಾರ್ಟಿಗೆ ಎಂಥ ದುಃಸ್ಥಿತಿ ಬರಲಿದೆ ಎಂಬುದು ಗೌಡರಿಗೆ ಚೆನ್ನಾಗಿ ಗೊತ್ತಿದೆ. ತಮ್ಮ ಮಕ್ಕಳು ರಾಜಕೀಯದಲ್ಲಿ ಸರ್ಪ ಮೇಲೇರಿದ್ದು, ಲಪಟಾಯಿಸಿರುವ ಸಂಪತ್ತು, ಜನಾರ್ದನ ರೆಡ್ಡಿಯ ಗಣಿ ಲಂಚ ಆರೋಪ, ಮುಂದೆ ತಮ್ಮ ಕುಟುಂಬದವರ ಭ್ರಷ್ಟಾಚಾರಗಳ ಆರೋಪಗಳ ಮೇಲಿನ ತನಿಖೆ ಸಾಧ್ಯತೆಗಳನ್ನೆಲ್ಲಾ ಯೋಚಿಸಿ ಗೌಡ ಕಂಗಾಲಾಗಿದ್ದಾರೆ. ಈ ಹಿನ್ನೆಲೆಯಲ್ಲಿ ಗೌಡರಿಗೀಗ ಅಧಿಕಾರ ಸೂತ್ರ ತಮ್ಮ ಕುಟುಂಬದ ಕೈಲಿರುವುದು ಬೇಕಾಗಿದೆ. ಈ ಎಲ್ಲಾ ಕಾರಣಗಳಿಂದಾಗಿ ಅಧಿಕಾರ ಹಸ್ತಾಂತರ ಆಗುತ್ತೆ ಆಗಲ್ಲ, ಅಷ್ಟು ಸುಲಭ ಅಲ್ಲ, ಚರ್ಚೆಯಾಗಲಿ, ಅಲ್ಪಸಂಖ್ಯಾತ ರಕ್ಷಣೆ ಎಂದೆಲ್ಲಾ ಗೌಡರು ದಿನಕ್ಕೊಂದು ಹೊಸ ರಾಗ ತೆಗೆಯುತ್ತಿದ್ದಾರೆ. ಇವೆಲ್ಲಾ ಗೌಡರ ಪ್ರಚಂಡ ತಂತ್ರಗಾರಿಕೆ ಎಂದು ಕೆಲವರು ಬಿಂಬಿಸುತ್ತಿದ್ದಾರಾದರೂ ಇಷ್ಟು ಒಳಹೊಕ್ಕು ನೋಡಿದರೆ ಅದರಲ್ಲಿ ಗೋಚರವಾಗುತ್ತಿರುವುದು ಗೌಡರ ಅಸಹಾಯಕತೆ ಮಾತ್ರ.

ಅದಕ್ಕೂ ಮಿಗಿಲಾಗಿ ಕುಮಾರಸ್ವಾಮಿ, ಬಾಲಕೃಷ್ಣೇಗೌಡ ಹಾಗೂ ಗೌಡರ ಕುಟುಂಬದ ಇನ್ನಿತರರು ನಡೆಸುತ್ತಿರುವ ಡೀಲ್‌ಗಳು, ಮಾಡಿಕೊಂಡಿರುವ ಕಮಿಟ್‌ಮೆಂಟ್‌ಗಳ ಒತ್ತಡವೂ ಗೌಡರ ಮೇಲಿದೆ. ನೀವೇ ಒಮ್ಮೆ ಗಮನಿಸಿ ನೋಡಿ. ತಮ್ಮ ಕುಟುಂಬದವರ ಡಜನ್‌ಗಟ್ಟಲೆ ಹಗರಣಗಳಿದ್ದಾಗಲೂ ಗೌಡರು ಕಿಡಿಕಾರುತ್ತಿರುವುದು ಸೈಸ್ ಕಂಪನಿಯ ಖೇಣಿ, ಗಣಿ ವ್ಯವಹಾರದ ಜನಾರ್ದ ರೆಡ್ಡಿ, ಸಚಿವ ಶ್ರೀರಾಮುಲು ವಿರುದ್ಧ ಮಾತ್ರ. ಅದರಲ್ಲೂ 150 ಕೋಟಿ ಗಣಿ ಲಂಚದ ಬಗ್ಗೆ ಜನಾರ್ದನ ರೆಡ್ಡಿ ಸುಪ್ರೀಂಕೋರ್ಟಿನಲ್ಲಿ ಹಾಕಿರುವ ಕೇಸ್ ಯಾವಾಗ ಬೇಕಾದರೂ ಸಿಬಿಐ ತನಿಖೆಗೆ ದಾರಿ ಮಾಡಿಕೊಡಬಹುದು. ಅಂತ ಸಂದರ್ಭ ಎದುರಾದಲ್ಲಿ ಕಾಂಗ್ರೆ ಸಖ್ಯವಿಲ್ಲದೆ ಗೌಡರು ಅದರಿಂದ ಬಚಾವ್ ಆಗಲಾರರು. ಗೌಡರು ಸೋನಿಯಾ ಗಾಂಧಿ ಮನೆ ಬಾಗಿಲಲ್ಲಿ ಪದೇಪದೇ ಹೋಗಿ ನಿಲ್ಲಲು ಇದೂ ಒಂದು ಕಾರಣವಾಗಿದೆ. ಉಳಿದಂತೆ ಜೆಡಿಎಸ್ ಒಂದು ಸೆಕ್ಯುಲರ್ ಪಾರ್ಟಿ ಎಂಬ ಇಮೇಜ್ ಮತ್ತೆ ಗಳಿಸಲು ಅವರಿಗೆ ಬಿಜೆಪಿ ಸಹವಾಸ ಈಗ ಸಾಕು ಅನ್ನಿಸಿದೆ.





ಗೌಡ ಎದುರಿಸುತ್ತಿರುವ ಈ ಪರಿ ಅಸಹಾಯಕತೆ ಕಾಂಗ್ರೆಸ್‌ಗೂ ಇದೆಯಾ ಎಂಬುದರ ಮೇಲಷ್ಟೇ ಮರುಮೈತ್ರಿಯ ಸಾಧ್ಯತೆ ಇದೆ. ಇಲ್ಲಾ ಅಂತಾದರೆ, ಎಲೆಕ್ಷನ್ ಯಾರಿಗೂ ಬೇಕಿರದ ಕಾರಣ ಕೋ-ಜಾ ಸರ್ಕಾರ ಮುಂದುವರೆಯುತ್ತದೆ. ಆದರೆ ಹೇಗಾದರೂ ಮಾಡಿ ಕುಮಾರಸ್ವಾಮಿಯನ್ನೇ ಸಿಎಂ ಆಗಿ ಮುಂದುವರೆಸಬೇಕೆಂಬ ಗೌಡರ ಪ್ಲಾನ್ ಒಂದಿದೆಯಲ್ಲ, ಬಿಜೆಪಿ ಅದಕ್ಕೆ ಒಪ್ಪುತ್ತದಾ ಅಂತ?

ಬಿಳಿದಾಳೆ ಈಶ

ಬೇಕು ಬೇಡಗಳ ಮಧ್ಯೆ ಕಾಂಗ್ರೆಸ್

ಎಸ್.ಎಂ. ಕೃಷ್ಣ ಡಿ.ಕೆ. ಶಿವಕುಮಾರ್, ಸಿದ್ಧರಾಮಯ್ಯ ಮುಂತಾದವರು ಏನೇ ಆದರೂ ಗೌಡರನ್ನು ಕಾಂಗ್ರೆಸ್ ಹತ್ತಿರ ಸುಳಿಯಲು-ಬಿಡುವುದಿಲ್ಲ ಎಂಬುದೇನೊ ಈಗಾಗಲೇ ಸ್ಪಷ್ಟವಾಗಿದೆ. ಹಾಗೆ ಮರುಮೈತ್ರಿ ಆದರೆ ಆಗೇಬಿಡಲಿ ಎಂಬ ನಿರೀಕ್ಷೆ ಕಾಂಗ್ರೆಸ್‌ನೊಳಗೆ ಇರುವುದು ಖರ್ಗೆ ಹಾಗೂ ರಾಜಶೇಖರನ್ ಇಬ್ಬರಿಗೇನೆ. ಖರ್ಗೆಯಂತೂ ದೆಹಲಿಗೆ ಹೋಗಿ 'ಮೈತ್ರಿ ಬೇಡ, ಆಕಸ್ಮಾತ್ ಆದರೆ ನನ್ನನ್ನು ಮುಖ್ಯಮಂತ್ರಿ ಮಾಡಿ' ಎಂದು ಮುಂಗಡ ಅರ್ಜಿ ಹಾಕಿಕೊಂಡು ಬಂದಿದ್ದಾರೆ. ಇದು ರಾಜಶೇಖರನ್‌ರಿಗೆ ಸಿಟ್ಟು ತರಿಸಿದೆ. "ಖರ್ಗೆ ಸಿಎಂ ಆಗೋದಾದರೆ ಮೈತ್ರಿ ಬೇಕು, ಇಲ್ಲಾಂದರೆ ಬೇಡ ಅಂದರೆ ಏನರ್ಥ?" ಅಂತ ಆಪ್ತರ ಹತ್ತಿರ ಬೇಸರ ಪಟ್ಟುಕೊಂಡು

ಡೌನ್ ಪೇಮೆಂಟ್ ಡೀಲ್!

ಯಡ್ಡಿ ಇದ್ದಕ್ಕಿದ್ದಂತೆ ಗಂಭೀರವಾಗಿ ಬಿಟ್ಟಿದ್ದಾರೆ. ಆಗಸ್ಟ್ 15ರ ತನಕವೂ, 'ನಾನೇ ಮುಂದಿನ ಮುಖ್ಯಮಂತ್ರಿ, ಉಪಮುಖ್ಯಮಂತ್ರಿಯಾಗಿ ಇದೇ ನನ್ನ ಕೊನೆಯ ಭಾಷಣ' ಅಂತೆಲ್ಲಾ ಅಪ್ರಬುದ್ಧ ಹೇಳಿಕೆ ನೀಡುತ್ತಿದ್ದ ಯಡ್ಡಿ ಈಗ ಪ್ರವೇಶ ಅಷ್ಟು ಸಲೀಸಲ್ಲ ಎಂದು ತಿಳಿದುಕೊಂಡಿದ್ದಾರೆ. ಮುಂದೆ ಏನಾದರಾಗಲಿ ಯಾವುದಕ್ಕೂ ಒಂದು ದೈವಕೃಪೆ ಜೊತೆ ಇರಲಿ ಎಂದುಕೊಂಡು ತಮ್ಮ ಪಕ್ಷದ ಸಂಗಾತಿ ಶೋಭಾ ಕರಂದ್ಲಾಜೆ ಹಾಗೂ ಎಲ್ಲಾ ವ್ಯವಹಾರಗಳಲ್ಲೂ ಪಾರ್ಟ್‌ನರ್‌ನಂತಿರುವ ರಾಮಚಂದ್ರೇಗೌಡರೊಂದಿಗೆ ತಮಿಳುನಾಡಿನ ದೇವಸ್ಥಾನಗಳನ್ನು ಸುತ್ತಿ ಬಂದಿದ್ದಾರೆ. ಜೆಡಿಎಸ್‌ನ ಹಲವಾರು ಮುಖಂಡರಿಂದ ವಿಪರೀತ ರ್‍ಯಾಗಿಂಗ್‌ಗೆ ಒಳಗಾದರೂ ಎಲ್ಲವನ್ನೂ ಸಹಿಸಿಕೊಳ್ಳುತ್ತಿರುವ ಯಡ್ಡಿಗೆ ಪವರ್ ಪಾಲಿಟಿಕ್ಸ್‌ನ ನಿಜ ಮರ್ಮ ಈಗ ಗೊತ್ತಾದಂತಿದೆ.





ನಾಳೆ ಬಿಜೆಪಿಗೆ ಕೈಗೆ ನಿಜಕ್ಕೂ ಅಧಿಕಾರ ಸಿಗುತ್ತದೆ ಎಂದಾದರೂ ಅದು ಯಡ್ಡಿ ಕೈಗೆ ಸುಲಲಿತವಾಗಿ ಸಾಗಿ ಬರುವುದಿಲ್ಲ, ಗೌಡರು ನಿಸ್ಸಂದೇಹವಾಗಿ ಅದಕ್ಕೂ ಸೂಕ್ತ [illegible] ವಿಧಿಸಿಯೇ ತೀರುತ್ತಾರೆ. ಅದು ಇನ್ನೂರು ಅಥವಾ ಮುನ್ನೂರು ಕೋಟಿಯಾದರೂ ಏನಚ್ಚರಿಯಿಲ್ಲ, ಅವಕಾಶ [illegible]ದಾದರೆ ಗೌಡರಿಗೆ ಶುಲ್ಕ ಪಾವತಿಸಿ ಸಿಎಂಗಿರಿ ಹೊಡೆದುಕೊಳ್ಳಲು ಕೇವಲ ಯಡ್ಡಿ ಮಾತ್ರವಲ್ಲ, ಜಗದೀಶ್ [illegible], ಈಶ್ವರಪ್ಪ ಕೂಡ ರೆಡಿಯಾಗುತ್ತಾರೆ. Down payment ಮಾಡಲು ಕೈಲಿ ಅಷ್ಟು ಹಣವಿರದವರು [illegible], ದೆಹಲಿ, ಕಲ್ಕತ್ತಾದ ಭಾರಿ ಉದ್ಯಮಪತಿಗಳು, ಕಂಟ್ರಾಕ್ಟರ್‌ಗಳಿಂದ ಮುಂಗಡ ಹಣಕಾಸಿನ ಸಹಾಯ [illegible] ಖಚಿತ. ಸದ್ಯಕ್ಕೆ ಕೇಳಿಬರುತ್ತಿರುವ ಮೊತ್ತವೆಂದರೆ 100 ಕೋಟಿ ರೂಪಾಯಿಗಳ ಡೌನ್ ಪೇಮೆಂಟ್ [illegible], ಪ್ರತಿ ತಿಂಗಳು ಕಟ್ಟಬೇಕಿರುವ EMI (ಈಕ್ವಿ ಮಂತ್ಲಿ ಇನ್‌ಸ್ಟಾಲ್‌ಮೆಂಟ್) ಕನಿಷ್ಠ ಎರಡು ಕೋಟಿ [illegible]ಗಳು! (ಇದೆಲ್ಲಾ ಬ್ಯಾಂಕ್‌ನಲ್ಲಿ ಎಂದು ಪ್ರತ್ಯೇಕವಾಗಿ ಹೇಳಬೇಕಿಲ್ಲ ತಾನೆ?) ಈ ಮಧ್ಯೆ ವಾಟಾಳ್, ಶ್ರೀರಾಮುಲು ಹಾಗೂ ಸೋಮಣ್ಣ ಮುಂತಾದವರು ಕುಮಾರಸ್ವಾಮಿ ಹಾಗೂ 39 ಶಾಸಕರನ್ನು ಅನರ್ಹಗೊಳಿಸಬೇಕೆಂಬ ನೀಡಿದ್ದ [illegible] ಅಕ್ಟೋಬರ್ 6ಕ್ಕೆ ನಿಗದಿಯಾಗಿದೆ. ಬಹುಶಃ ಸ್ಪೀಕರ್ ಕೃಷ್ಣ ಅವತ್ತೆ ತೀರ್ಪು ನೀಡಲಾರರೆಂದು [illegible]. ಬಿಜೆಪಿಯನ್ನು ಹೆದರಿಸಲು ಹಾಗೂ ಅತೃಪ್ತ ಜೆಡಿಎಸ್ ಶಾಸಕರಿಗೆ ಲಗಾಮು ಹಾಕಲು ಗೌಡರು [illegible] ಅಷ್ಟೆ.

ಗೌಡರಿಗೆ ಮಂಪರು ಪರೀಕ್ಷೆ ಮಾಡಿದರೆ...

ಒಂದು ಜೋಕ್

ಬಿಜೆಪಿಗೆ ಅಧಿಕಾರ ಹಸ್ತಾಂತರ ಆಗುತ್ತಾ ಇಲ್ಲವಾ....?

ಈ ಪ್ರಶ್ನೆ ಕೇವಲ ಕರ್ನಾಟಕದಲ್ಲಿ ಮಾತ್ರವಲ್ಲ, ಈಗ ಇಡೀ ದೇಶದ ಗಮನ ಸೆಳೆದುಕೊಳ್ಳುತ್ತಿದೆ. ದಿನಕ್ಕೊಂದು ಬೆಳವಣಿಗೆ ಕಾಣುತ್ತಿರುವ ರಾಜ್ಯ ರಾಜಕೀಯ ದಳ-ಬಿಜೆಪಿ-ಕಾಂಗ್ರೆಸ್ ಎಲ್ಲರನ್ನು ತುದಿಗಾಲಲ್ಲಿ ನಿಲ್ಲುವಂತೆ ಮಾಡಿಬಿಟ್ಟಿದೆ. ಆದರೆ ಯಾರಿಗೂ ಗೌಡರ ಮನಸ್ಸಲ್ಲೇನಿದೆ ಎಂದು ಗೊತ್ತಾಗುತ್ತಿಲ್ಲ. ಇದನ್ನೆಲ್ಲಾ ನೋಡಿ ನೋಡಿ ಸಾಕಾದ ಹತಾಶ ಬಿಜೆಪಿ ಲೀಡರ್‌ಗಳು ಇತ್ತೀಚೆಗೆ ಒಂದು ಕಡೆ ಸೇರಿದ್ದಾಗ ಏನಂಥ ಮಾತಾಡಿಕೊಂಡು ನಕ್ಕಿದ್ದಾರೆ ಗೊತ್ತೆ?




ಗೌಡರನ್ನು ಏನಾದರೂ ಉಪಾಯ ಮಾಡಿ ಮಂಪರು ಪರೀಕ್ಷೆಗೆ ಒಳಪಡಿಸಿದರೆ ಆಗಲಾದರೂ ನಿಜ ಏನಂಥ ಬಾಯಿಬಿಡಬಹುದು ಅಲ್ವಾ? ಎಂದು.

ಆದರೆ ಕಿಲಾಡಿ ತಾತ ದೇವೇಗೌಡರು ಮಂಪರಿನಲ್ಲೂ "ನನ್ನನ್ನ ಯಾರೂ ಏನೂ ಮಾಡ್ಕೊಳ್ಳಕಾಗಲ್ಲ. ಅಧಿಕಾರ ಹಸ್ತಾಂತರ ಆಗಬಹುದು. ಆಗದೇನೂ ಇರಬಹುದು." ಅಂದು ಬಿಟ್ಟರೆ...!

ಇದೇನೆ ಇರಲಿ.

ಗೌಡರ ಬಗ್ಗೆ ಇತ್ತೀಚೆಗೆ ಕೇಳಿಬಂದಿರುವ ಬೆಸ್ಟ್ ಜೋಕ್ ಇದು ಅಲ್ವಾ?



ಆಲಂಗೂರ್ ಎಂಬ ಹಲ್ಲಿಲ್ಲದ ಹಾವು

ಮೊನ್ನೆ ಆಗಸ್ಟ್ 31ರ ಘಟನೆಯ ನಂತರ ಕೋಲಾರ ಜಿಲ್ಲೆಯ ಉಸ್ತುವಾರಿ ಮಂತ್ರಿ ಯಾರು ಎಂಬ ಅನುಮಾನ ಜಿಲ್ಲೆಯ ಜನರನ್ನು ಕಾಡತೊಡಗಿದೆ. ಏಕೆಂದರೆ, ಉಸ್ತುವಾರಿ ಮಂತ್ರಿ ಆಲಂಗೂರ್ ಶ್ರೀನಿವಾಸ್ ಅವರು ತಾವು ಹಲ್ಲಿಲ್ಲದ ಹಾವು ಎಂಬುದನ್ನು ಆವತ್ತು ತೋರಿಸಿಬಿಟ್ಟರು.

ಆವತ್ತು ನಗರದಲ್ಲಿ ಅರೆಸ್ಟ್‌ಗಳು, ಲಾಠಿ ಛಾರ್ಜ್‌ಗಳು ನಡೆಯುತ್ತಿದ್ದರೂ, ಟಿಯರ್ ಗ್ಯಾಸ್, ಗಾಳಿಯಲ್ಲಿ ಗುಂಡುಗಳು ಸಿಡಿಯುತ್ತಿದ್ದರೂ ನಗರದಲ್ಲಿಯೇ ಇದ್ದ ಆಲಂಗೂರ್‌ಗೆ ಮಾತ್ರ ಏನೂ ಗೊತ್ತಿರಲಿಲ್ಲ. ಅವರಿಗೆ ಹೇಳಿದರೆಷ್ಟು ಬಿಟ್ಟರೆಷ್ಟು ಎಂಬ ದಾರ್ಷ್ಟ್ಯದಿಂದ ಜಿಲ್ಲೆಯಲ್ಲಿ ತಾನೇ ಮಂತ್ರಿ, ಕಾನೂನು, ಪೊಲೀಸು, ನ್ಯಾಯಾಲಯ ಎಂದುಕೊಂಡು ತನ್ನ ಕೆಲಸವನ್ನು ಮಾಡುತ್ತಲೇ ಇದ್ದ ಎಸ್ಪಿ ದಯಾನಂದ. ಸಾರ್ವಜನಿಕರೇ ಸಚಿವರನ್ನು ಹುಡುಕಿ ವಿಚಾರ ತಿಳಿಸುವ ತನಕ ಆಲಂಗೂರ್ ಅವರಿಗೆ ಏನೂ ಗೊತ್ತಿರಲಿಲ್ಲ. ತಕ್ಷಣ ಸಚಿವರು ಡಿಸಿ ಜಿ. ರಾಮಚಂದ್ರ ಅವರಿಗೆ ಫೋನ್ ಮಾಡಿದರೆ ಅವರಿಗೂ ಏನೂ ಗೊತ್ತಿಲ್ಲ! ಹೇಗಿದೆ ಎಸ್ಪಿ ದಯಾನಂದನ ದರ್ಬಾರ್?

ಅಲ್ಲದೇ, ಶಾಂತಿಸಭೆಯಿಂದ ಎಸ್ಪಿ ವಾಕ್‌ಔಟ್ ಮಾಡಿದಾಗ ಖುದ್ದು ಡಿಸಿ ರಾಮಚಂದ್ರ, ಎಮ್ಮೆಲ್ಲೆಗಳು, ಎಲ್ಲರೂ ಎದ್ದು ಹೋಗಿ ದಯಾನಂದನಿಗೆ "ಜೀ... ಹುಜೂರ್" ಎನ್ನುವ ರೀತಿಯಲ್ಲಿ ಅವರನ್ನು ಪುಸಲಾಯಿಸುತ್ತಿದ್ದುದ್ದನ್ನು ನೋಡಿದರೆ ಜಿಲ್ಲಾಡಳಿತವೂ ಸಂಪೂರ್ಣವಾಗಿ ದಯಾನಂದನ ಆಜ್ಞೆಯಂತೇ ನಡೆಯುತ್ತಿದೆ ಎನ್ನಿಸುವಂತಿತ್ತು.


ನರವಿಲ್ಲದ ಜಿಲ್ಲಾಡಳಿತ, ಹಲ್ಲಿಲ್ಲದ ಆಲಂಗೂರು ನಡುವೆ ಎಸ್ಪಿ ದಯಾನಂದ ಮಾತ್ರ ಕೋಲಾರದ ಸರ್ವಾಧಿಕಾರಿಯಂತೆ ಮೆರೆಯುತ್ತಿರುವುದಂತೂ ಸತ್ಯ. ಅವನ ದೌರ್ಜನ್ಯಗಳನ್ನು ಅನುಭವಿಸುವ ಕರ್ಮ ಕೋಲಾರ ಜನಗಳದ್ದು.

ಪೊಲೀಸರು ಸೇಬುಹಣ್ಣುಗಳನ್ನೂ ಕದ್ದರು

ಎಲ್ಲಿಯಾದರೂ ಲಾಠಿ ಛಾರ್ಜು, ಗೋಲಿಬಾರ್ ಮಾಡುವ ಅವಕಾಶ ಸಿಕ್ಕಿತೆಂದರೆ ಪೊಲೀಸರಿಗೆ ಹಬ್ಬವೋ ಹಬ್ಬ. ಏಕೆಂದರೆ, ತಮಗೆ ಖಾಕಿ ತೊಟ್ಟಾಗಿನಿಂದ ಅಂಟುವ ಹೊಡೆಯುವ ಚಟವನ್ನು ಮನ ಬಂದಂತೆ ತೀರಿಸಿಕೊಳ್ಳಬಹುದು ಎನ್ನುವುದು ಒಂದು ಕಾರಣವಾದರೆ, ಸಾರ್ವಜನಿಕರನ್ನು ಬೆಚ್ಚಿ ಬೀಳಿಸಿ ತಮಗೆ ಬೇಕಾದದ್ದನ್ನೂ ಲೂಟಿ ಹೊಡೆಯಬಹುದು ಎಂಬುದು ಇನ್ನೊಂದು ಕಾರಣ. ಸಾಮಾನ್ಯವಾಗಿ ನಾವಿದನ್ನು ಎಲ್ಲಾ ಕಡೆ ನೋಡುತ್ತೇವೆ.

ಆದರೆ, ಮೊನ್ನೆ ಕೋಲಾರದಲ್ಲಿ ಲಾಠಿ ಛಾರ್ಜ್ ನಡೆದ ಸಂದರ್ಭದಲ್ಲಿ ಪೊಲೀಸರು ಹೊಡೆಯುವ ಚಟವನ್ನೇನೋ ತೀರಿಸಿಕೊಂಡರು. ಆದರೆ, ದೋಚಲು ಅವರಿಗೆ ಹೇಳಿಕೊಳ್ಳುವಂಥದ್ದೇನೂ ಸಿಗಲಿಲ್ಲ. ಹಾಗಾಗಿ ಸೀದಾ ಬಂದವರೇ ಬಸ್‌ಸ್ಟಾಂಡ್ ಬಳಿ ತಳ್ಳುಗಾಡಿ ಇಟ್ಟುಕೊಂಡು ವ್ಯಾಪಾರ ಮಾಡುತ್ತಿದ್ದ ವಿಜಯ್ ಕುಮಾರ್ ಎಂಬ ಹುಡುಗನನ್ನು ರಸ್ತೆಯಲ್ಲಿ ಹಾಕಿಕೊಂಡು ಚೆನ್ನಾಗಿ ಥಳಿಸಿ, ಆತ ಬ್ಯಾಂಕಿನಿಂದ ಆಗ ತಾನೆ ಇಳಿಸಿಕೊಂಡಿದ್ದ ಸುಮಾರು ಇಪ್ಪತ್ತು ಸಾವಿರ ರೂಪಾಯಿ ಮೌಲ್ಯದ ಸೇಬು ಹಣ್ಣುಗಳ ಬಾಕ್ಸ್‌ಗಳನ್ನು ಎತ್ತಿಕೊಂಡು ಹೋದರು. ಆ ಹುಡುಗ ಪೊಲೀಸರ ಕಾಲಿಗೆ ಬಿದ್ದು ಎಷ್ಟು ಬೇಡಿಕೊಂಡರೂ ಬಿಡಲಿಲ್ಲ. ಇದು ಕೋಲಾರ ಪೊಲೀಸರ ಇನ್ನೊಂದು ಮುಖ.

ಎಲ್ಲಾದರೂ ಎರಡು ಕೋಮುಗಳ ನಡುವೆ ಘರ್ಷಣೆಗಳೇನಾದರೂ ಸಂಭವಿಸಿದರೆ ಅದನ್ನು ಶಮನಗೊಳಿಸಲು ಪ್ರಯತ್ನಿಸುವ ಪೊಲೀಸರನ್ನು ನೋಡಿರುತ್ತೀರಿ. ಇನ್ನೊಂದೆಡೆ, ಗುಜರಾತ್‌ನಂತಹ ರಾಜ್ಯಗಳಲ್ಲಿ ಬಿಡಿ ಪರಿವಾರಗಳ ಪುಂಡರು ನಡೆಸುವ ಅಲ್ಪಸಂಖ್ಯಾತರ ಮಾರಣಹೋಮಕ್ಕೆ ಬೆಂಗಾವಲಾಗಿ ನಿಲ್ಲುವ ಪೊಲೀಸರನ್ನೂ ನೋಡಿರುತ್ತೀರಿ. ಆದರೆ, ತಮ್ಮ ಬೇಳೇ ಕಾಳು ಬೇಯಿಸಿಕೊಳ್ಳುವುದಕ್ಕೆ, ತಮ್ಮ ತಪ್ಪುಗಳನ್ನು ಮರೆ ಮಾಚುವುದಕ್ಕೆ ಸಣ್ಣಪುಟ್ಟ ಜಗಳಗಳನ್ನು ಕೋಮುದಳ್ಳುರಿಯನ್ನಾಗಿ ಪರಿವರ್ತಿಸಲು ಪ್ರಯತ್ನಿಸುವ ಪೊಲೀಸರನ್ನೇನಾದರೂ ನೋಡಿದ್ದೀರಾ? ಇಲ್ಲ ಎನ್ನುವುದಾದರೆ ಒಮ್ಮೆ ಕೋಲಾರಕ್ಕೆ ಬಂದು ಹೋಗಿ. ಅಲ್ಲಿ ಎಸ್ಪಿ ಬಿ. ದಯಾನಂದ್ ಸಾರಥ್ಯದಲ್ಲಿ ಹೇಗೆ ಪೊಲೀಸರೇ ಖುದ್ದಾಗಿ



ತಮ್ಮ ತಪ್ಪುಗಳನ್ನು ಮರೆ ಮಾಚುವುದಕ್ಕೆ ಸಣ್ಣಪುಟ್ಟ ಜಗಳಗಳನ್ನು ಕೋಮುದಳ್ಳುರಿಯನ್ನಾಗಿ ಪರಿವರ್ತಿಸಲು ಪ್ರಯತ್ನಿಸುವ ಪೊಲೀಸರನ್ನೇನಾದರೂ ನೋಡಿದ್ದೀರಾ? ಇಲ್ಲ ಎನ್ನುವುದಾದರೆ ಒಮ್ಮೆ ಕೋಲಾರಕ್ಕೆ ಬಂದು ಹೋಗಿ. ಅಲ್ಲಿ ಎಸ್ಪಿ ಬಿ. ದಯಾನಂದ್ ಸಾರಥ್ಯದಲ್ಲಿ ಹೇಗೆ ಪೊಲೀಸರೇ ಖುದ್ದಾಗಿ ಕೋಮುದಳ್ಳುರಿ ಹಚ್ಚಲು ಪ್ರಯತ್ನಿಸುತ್ತಿದ್ದಾರೆಂಬುದು ಕಣ್ಣಿಗೆ ರಾಚುತ್ತದೆ. ಅದಕ್ಕೆ ಮೊನ್ನೆ ಆಗಸ್ಟ್ 31ರಂದು ಕೋಲಾರ ನಗರದಲ್ಲಿ ಪೊಲೀಸರು ಸೃಷ್ಟಿಸಿದ ಉದ್ವಿಗ್ನ ಪರಿಸ್ಥಿತಿಯೇ ಒಂದು ಜ್ವಲಂತ ಉದಾಹರಣೆ.

ಕೋಲಾರದಲ್ಲಿ ಎಸ್ಪಿ ದಯಾನಂದನ ಮಂಗನಾಟ

ಕೋಮುದಳ್ಳುರಿ ಹಚ್ಚಲು ಪ್ರಯತ್ನಿಸುತ್ತಿದ್ದಾರೆಂಬುದು ಕಣ್ಣಿಗೆ ರಾಚುತ್ತದೆ. ಅದಕ್ಕೆ ಮೊನ್ನೆ ಆಗಸ್ಟ್ 31ರಂದು ಕೋಲಾರ ನಗರದಲ್ಲಿ ಪೊಲೀಸರು ಸೃಷ್ಟಿಸಿದ ಉದ್ವಿಗ್ನ ಪರಿಸ್ಥಿತಿಯೇ ಒಂದು ಜ್ವಲಂತ ಉದಾಹರಣೆ.


ನಡೆದಿದ್ದಿಷ್ಟು

ಮೊನ್ನೆ ಆಗಸ್ಟ್ 31 ರಂದು ಕೋಲಾರ ನಗರದ ಮುನೋವರ್ ಎಂಬುವವನ ಬಾಳೆಮಂಡಿಯಲ್ಲಿ ಕೆಲಸಕ್ಕಿದ್ದ ವಾಹಿದ್ ಎಂಬ ಹುಡುಗ ಕೆಲಸದ ನಿಮಿತ್ತ ಮಾಲಿಕ ಮುನೋವರ್‌ನ ಬೈಕ್ ತೆಗೆದುಕೊಂಡು ಹೋಗಿದ್ದ. ವಾಪಾಸ್ಸು ಮಾಲಿನ ಸಮೇತವಾಗಿ ಬರುವಾಗ ತಮ್ಮ ಅಂಗಡಿ ಇನ್ನೇನು ಬಂದೇ ಬಿಟ್ಟಿತು ಅನ್ನುವಷ್ಟರಲ್ಲಿ ಸಮತೋಲನ ತಪ್ಪಿ ಬೈಕ್ ಸಮೇತವಾಗಿ ನೆಲಕ್ಕುರುಳಿದ್ದಾನೆ. ಅಲ್ಲಿಯೇ ಇದ್ದ ಹೂ ಮಾರುವ ಹೆಂಗಸೊಬ್ಬಳು ಆತನನ್ನು ಎಬ್ಬಿಸಿ ಪಕ್ಕಕ್ಕೆ ಕೂರಿಸಿ ನೀರು ಕೊಟ್ಟಿದ್ದಾಳೆ. ವಾಹಿದ್ ಬಿದ್ದಿದ್ದನ್ನು ನೋಡಿದ ಅಲ್ಲಿಯೇ ಮಫ್ತಿಯಲ್ಲಿದ್ದ ಕ್ರೈಂ ಬ್ರಾಂಚ್ ಪೇದೆ ಮಂಜುನಾಥ್ ಎಂಬುವವನು ಸೀದಾ ಬಂದವನೇ "ಸರಿಯಾಗಿ ನೋಡಿಕೊಂಡು ಗಾಡಿ ಹೊಡಿಯೋಕೆ ಆಗೋದಿಲ್ವಾ" ಎನ್ನುತ್ತಾ ವಾಹಿದ್‌ಗೆ ಹೊಡೆಯಲಾರಂಭಿಸಿದ್ದಾನೆ. ಆಗಲೇ ಗಾಡಿಯಿಂದ ಬಿದ್ದು ಮೈ ಕೈ ಗಾಯ ಮಾಡಿಕೊಂಡವನಿಗೆ ಮತ್ತೆ ಇವನ್ಯಾವನೋ ಹೊಡೆಯುತ್ತಿದ್ದಾನೆಂದು ಜನ ಗುಂಪು ಸೇರಿದ್ದೂ ಆಯಿತು. ಹತ್ತಿರದಲ್ಲಿಯೇ ಇದ್ದ ಮಾಲಿಕ ಮುನೋವರ್ ಕೂಡ ವಿಚಾರ ತಿಳಿದು ಸ್ನೇಹಿತ ಮುಜಾಹಿದ್‌ನೊಂದಿಗೆ ಅಲ್ಲಿಗೆ ಬಂದದ್ದೂ ಆಯಿತು.

ವಾಸ್ತವದಲ್ಲಿ ಮಂಜುನಾಥ್ ಸಿವಿಲ್ ಡ್ರೆಸ್‌ನಲ್ಲಿದ್ದುದರಿಂದ ಆತ ಪೊಲೀಸ್ ಎಂಬುದು ಅಲ್ಲಿದ್ದವರಿಗ್ಯಾರಿಗೂ ಗೊತ್ತಾಗಿಲ್ಲ. ಅಲ್ಲದೇ, ಈ ತಿಕ್ಕಲ ಮಂಜುನಾಥ್ ಅಷ್ಟಕ್ಕೇ ಸುಮ್ಮನಾಗದೇ "ನೀವು ಸಾಬಿ ನನ್ನ ಮಕ್ಕಳಾ" ಎಂದು ಅವರ ಧರ್ಮವನ್ನೇ ಹೀಯಾಳಿಸಿ ಮಾತನಾಡಿದ್ದೇ ತಡ ಎದುರಿಗಿದ್ದ ಮುಜಾಹಿದ್ ಮಂಜುನಾಥ್‌ನ ಮೂತಿಗೆ ಎತ್ತಿ ಒಂದು ಪಂಚ್ ಕೊಟ್ಟಿದ್ದಾನೆ. ಆಗಲೇ, ಆತ ಪೊಲೀಸ್ ಎಂದು ಬೊಬ್ಬೆಯಿಟ್ಟದ್ದು! ಈತ ಪೊಲೀಸ್ ಎಂದು ಗೊತ್ತಾಗಿದ್ದೇ ತಡ ಅಲ್ಲಿದ್ದವರೆಲ್ಲಾ ಅತ್ತಿತ್ತ ಓಡಿ ಹೋಗಿಬಿಟ್ಟರು.

ತಾನು ಮಾಡಿದ್ದಕ್ಕೆ ತಕ್ಕ ಶಾಸ್ತಿ ಆಯಿತು ಅಂದುಕೊಂಡು ಮಂಜುನಾಥ್ ಅಷ್ಟಕ್ಕೆ ಸುಮ್ಮನಾಗಿದ್ದರೆ ಎಲ್ಲವೂ ಸರಿಯಾಗಿಯೇ ಇರುತ್ತಿತ್ತು. ಆದರೆ, ಆತ ಹಾಗೆ ಮಾಡಲಿಲ್ಲ. "ಪೊಲೀಸರ ಮೇಲೇಯೇ ಕೈ ಮಾಡುತ್ತಾರೆಂದರೆ ಈ ಸಾಬ್ರಿಗೆ ಎಷ್ಟು ಕೊಬ್ಬು" ಎಂದವನೇ ಸೀದಾ ಪೊಲೀಸ್ ಸ್ಟೇಷನ್‌ಗೆ ಫೋನ್ ಮಾಡಿ ಮೂರ್ನಾಲ್ಕು ಪೇದೆಗಳನ್ನು ಕರೆಸಿಕೊಂಡ. ಅವರೆಲ್ಲರೂ ವಾಹಿದ್‌ನನ್ನು ಪಕ್ಕದಲ್ಲೇ ಇದ್ದ ಎಲೆಕ್ಟ್ರಿಕ್ ಪೋಲ್‌ಗೆ ಕಟ್ಟಿ ಹಾಕಿ ತಮ್ಮ ಬೆಲ್ಟ್‌ಗಳನ್ನು ಬಿಚ್ಚಿ ಮನ ಬಂದಂತೆ ಥಳಿಸಿದ್ದಾರೆ. ಕೊನೆಗೆ ವಾಹಿದ್, ಮುನೋವರ್, ಮುಜಾಹಿದ್ ಮತ್ತು ಪಕ್ಕದಲ್ಲಿಯೇ ಇದ್ದ ರವಿಕುಮಾರ್ ಎಂಬ ಹಾಸನದ ಹಾದಿಹೋಕನನ್ನು ಹಿಡಿದುಕೊಂಡು ಟೌನ್ ಪೊಲೀಸ್ ಸ್ಟೇಶನ್‌ಗೆ ಕರೆದೊಯ್ದಿದ್ದಾರೆ. ನಂತರ ರವಿಕುಮಾರ್‌ನನ್ನು ಬಿಟ್ಟು ಈ ಮೂವರು ಹುಡುಗರಿಗೆ ಸ್ಟೇಶನ್‌ನಲ್ಲಿ ರುಬ್ಬಲಾರಂಭಿಸಿದ್ದಾರೆ. ಇದೆಲ್ಲಾ ನಡೆದದ್ದು ಬೆಳಗ್ಗೆ ಹತ್ತೂವರೆಯಿಂದ ಹನ್ನೊಂದು ಗಂಟೆಯ ಸುಮಾರಿನಲ್ಲಿ.

ಮೂವರು ಮುಸ್ಲಿಮ್ ಯುವಕರನ್ನು ಪೊಲೀಸರು ಸ್ಟೇಶನ್‌ನಲ್ಲಿ ಹಾಕಿ ಥಳಿಸುತ್ತಿದ್ದಾರೆಂಬ ಸುದ್ದಿ ಕೋಲಾರದ ಬೀದಿಬೀದಿಗಳಲ್ಲಿ ಕಾಡ್ಗಿಚ್ಚಿನಂತೆ ಹರಡಿ ಮುಸ್ಲಿಮ್ ಸಮುದಾಯದ ಕೆಲವು ಯುವಕರು ಸೀದಾ ಸ್ಟೇಶನ್‌ಗೆ ಬಂದು ವಿಚಾರಿಸಿದ್ದಾರೆ. ಆದರೆ ಸರ್ಕಲ್ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿಗೆ ಆಗಲೇ ಪಿತ್ತ ನೆತ್ತಿಗೇರಿ ಕುಂಡಿಗೆ ಚೇಳು ಕಡಿದವನಂತೆ ಆಡುತ್ತಿದ್ದ. ಏನನ್ನೂ ಕೇಳಿಸಿಕೊಳ್ಳಲು ಸಿದ್ಧನಿರದ ಆತ ಬಂದವರನ್ನು ಹಿಗ್ಗಾಮುಗ್ಗಾ ಬೈದು ಕಳಿಸಿದ್ದಾನೆ. ಬಂದ ಯುವಕರು ಈ ವಿಚಾರವನ್ನು ತಮ್ಮ ಸಮುದಾಯದ ಹಿರಿಯರಿಗೆ ತಿಳಿಸಿದ ತಕ್ಷಣ ಕೋಲಾರ ನಗರಾಭಿವೃದ್ಧಿ ಪ್ರಾಧಿಕಾರದ ಮಾಜಿ ಅಧ್ಯಕ್ಷ ಅಬ್ದುಲ್ ಖಯೀಂ, ಅಂಜುಮನ್ ಇಸ್ಲಾಮಿಕ್ ಸಮಿತಿ ಅಧ್ಯಕ್ಷ ಟಿ. ಸರ್ದಾರ್, ಜಿಲ್ಲಾ ಮೈನಾರಿಟಿ ಕಾಂಗ್ರೆಸ್‌ನ ಮಾಜಿ ಅಧ್ಯಕ್ಷ ಮೊಹಮ್ಮದ್ ಇಕ್ಬಾಲ್, ಮಾಜಿ ನಗರಸಭಾ ಸದಸ್ಯ ಬಾಬು ಸಲಾವುದ್ದೀನ್ ಮುಂತಾದವರು ನೇರವಾಗಿ ಆಡಿಶನಲ್ ಎಸ್ಪಿ ಎಲ್ಲಪ್ಪನ ಹತ್ತಿರ ಹೋದರೆ ಅವರನ್ನು ಬಿಟ್ಟುಬಿಡಿ ಅಂತ ಕೃಷ್ಣಮೂರ್ತಿಗೆ ಫೋನ್ ಮಾಡಿದ ನಾಟಕವಾಡಿಬಿಟ್ಟ. ಮತ್ತೆ ಅವರೆಲ್ಲ ಸ್ಟೇಶನ್‌ಗೆ ಬಂದರೆ "ನಾನು ಆಡಿಶನಲ್ ಎಸ್ಪಿ ಮಾತು ಕೇಳೋದಿಲ್ಲ, ಎಸ್ಪಿ ಹೇಳಿದರೆ ಮಾತ್ರ ಬಿಡ್ತೇನೆ" ಎಂದು ಕೃಷ್ಣಮೂರ್ತಿ ಹೂಂಕರಿಸಿದ! ಎಸ್ಪಿ ದಯಾನಂದ ನೋಡಿದರೆ ಊರಲ್ಲಿಯೇ ಇರಲಿಲ್ಲ. ಕೋಲಾರದ ಶಾಸಕ ಶ್ರೀನಿವಾಸ್ ಗೌಡ ಕೂಡ ಫೋನ್ ಮಾಡಿದರೂ ಪೊಲೀಸರು ಮಾತ್ರ ಕ್ಯಾರೆ ಅನ್ನಲಿಲ್ಲ. ಅವರ ಫೋನಿಗೆ ಅವರ ಕ್ಷೇತ್ರದಲ್ಲಿ ಅಷ್ಟು ಬೆಲೆ!



ಪೊಲೀಸರ ಮಂಗನಾಟ!

ಅಷ್ಟರಲ್ಲಿ ಯಾರ ಮಾತನ್ನೂ ಕೇಳದೆ ಹುಡುಗರಿಗೆ ಅಮಾನುಷವಾಗಿ ಚಿತ್ರಹಿಂಸೆ ಕೊಡುತ್ತಿದ್ದ ಪೊಲೀಸರ ಬಗ್ಗೆ ಜನರಲ್ಲಿ ಆಕ್ರೋಶ ಹೊಗೆಯಾಡುತ್ತಿತ್ತು. ಜಿಲ್ಲೆಯ ಉಸ್ತುವಾರಿ ಸಚಿವ ಆಲಂಗೂರು ಶ್ರೀನಿವಾಸ್ ಕೂಡ ನಗರದಲ್ಲಿಯೇ ಇದ್ದುದರಿಂದ ಕೆಲವರು ಹೋಗಿ ಅವರನ್ನು ಭೇಟಿ ಮಾಡಲು ನಿರ್ಧರಿಸಿದರು. ಉಳಿದ ನೂರಾರು ಯುವಕರು ನಗರದ ಕ್ಲಾಕ್ ಟವರ್ ಸರ್ಕಲ್‌ನಲ್ಲಿ ರಸ್ತೆ ತಡೆ ಚಳವಳಿಯನ್ನು ಆರಂಭಿಸಿಯೇ ಬಿಟ್ಟರು. ಅದೇ ಹೊತ್ತಿಗೆ ನಗರಕ್ಕೆ ಹಿಂದಿರುಗಿದ ಎಸ್ಪಿ ದಯಾನಂದ ಸರ್ಕಲ್ ಇನ್ಸ್‌ಪೆಕ್ಟರ್ ಕೃಷ್ಣಮೂರ್ತಿಗೆ ನಿರ್ದೇಶನ ಕೊಟ್ಟು ದೊಡ್ಡ ಪೊಲೀಸ್ ಪಡೆಯೊಂದಿಗೆ ಆತನನ್ನು ರಸ್ತೆತಡೆ ನಡೆಯುತ್ತಿದ್ದ ಕ್ಲಾಕ್ ಟವರ್ ಸರ್ಕಲ್‌ಗೆ ಕಳಿಸಿಕೊಟ್ಟ.

ಮೊದಲೇ ಕುಂಡಿಗೆ ಚೇಳು ಕಡಿದವನಂತೆ ಆಡುತ್ತಿದ್ದ ಕೃಷ್ಣಮೂರ್ತಿಗೆ ದಯಾನಂದ್ ಎಂಬ ಗಲಭೆಕೋರ ಎಸ್ಪಿಯ ಬೆಂಬಲ ಸಿಕ್ಕಿಬಿಟ್ಟರೆ ಏನಾಗಬೇಕಿತ್ತೋ ಅದೇ ಆಯಿತು. ಕೃಷ್ಣಮೂರ್ತಿ ಬಂದವನೇ ಹಿಂದೂಮುಂದೂ ನೋಡದೇ ಲಾಠಿ ಛಾರ್ಜ್ ಮಾಡಿಸಿದ, ಟಿಯರ್ ಗ್ಯಾಸ್ ಸಿಡಿಸಿದ. ಅದೂ ಸಾಕಾಗಲಿಲ್ಲವೆಂಬಂತೆ ಗಾಳಿಯಲ್ಲಿ ಗುಂಡು ಹಾರಿಸಿದ. ಧರಣಿ ನಿರತರು ಒತ್ತಟ್ಟಿಗಿರಲಿ ಅಲ್ಲಿಂದ ದೂರದಲ್ಲಿರುವ ಅಕ್ಕಪಕ್ಕದ ಅಂಗಡಿಗಳಿಗೂ ಹಿಂಡುಹಿಂಡಾಗಿ ಪೊಲೀಸರನ್ನು ನುಗ್ಗಿಸಿ ಸಿಕ್ಕಸಿಕ್ಕವರನ್ನೆಲ್ಲಾ ಚಚ್ಚಿ ಹಾಕಿಸಿದ. ಲಾಠಿ ಛಾರ್ಜ್ ನೆಪದಲ್ಲಿ ಪೊಲೀಸರು ಸಣ್ಣಪುಟ್ಟ ಗೂಡಂಗಡಿಗಳನ್ನು ದೋಚಿದ್ದೂ ಆಯಿತು. ಒಟ್ಟಿನಲ್ಲಿ ಇಂಗು ತಿಂದ ಮಂಗನಂತಾಗಿದ್ದ ಕೋಲಾರ ಪೊಲೀಸರು ಕೃಷ್ಣಮೂರ್ತಿ ಎಂಬ ಕಪಿನಾಯಕನ ನೇತೃತ್ವದಲ್ಲಿ ಕ್ಷಣಾರ್ಧದಲ್ಲಿ ಕೋಲಾರವನ್ನೇ ಬೆಚ್ಚಿ ಬೀಳಿಸಿದರು. ಎಲ್ಲಾ ಮುಗಿದ ಮೇಲೆ 144 ಸೆಕ್ಷನ್ ಹಾಕಲಾಗಿದೆ ಅಂತ ಅನೌನ್ಸ್ ಕೂಡ ಮಾಡಿಬಿಟ್ಟರು.

ಕೋಮುಗಲಭೆಯನ್ನಾಗಿ ಪರಿವರ್ತಿಸುವ ತಂತ್ರ!


ಯಾವಾಗ ಕ್ಲಾಕ್ ಟವರ್ ಬಳಿ ಇಷ್ಟೆಲ್ಲಾ ರಾದ್ಧಾಂತ, ಪೊಲೀಸರ ದೌರ್ಜನ್ಯ ನಡೆಯುತ್ತಿತ್ತೊ ಅದೇ ಸಮಯದಲ್ಲಿ ಕೆಎಸ್‌ಆರ್‌ಟಿಸಿ ಬಸ್ ಸ್ಟಾಂಡ್ ಬಳಿ ಬಿಜೆಪಿ-ಭಜರಂಗ ದಳದವರೂ ನಗರಸಭೆಯವರು ಫುಟ್‌ಪಾತ್ ವ್ಯಾಪಾರಿಗಳನ್ನು ಎತ್ತಂಗಡಿ ಮಾಡುತ್ತಿರುವುದರ ವಿರುದ್ಧ ಪ್ರತಿಭಟಿಸುತ್ತಿದ್ದರು. ವಾಸ್ತವದಲ್ಲಿ ಇವರ ಪ್ರತಿಭಟನೆಗೂ ಮತ್ತು ಕ್ಲಾಕ್ ಟವರ್ ಹತ್ತಿರದ ಪ್ರತಿಭಟನೆಗೂ ಯಾವುದೇ ಸಂಬಂಧ ಇರಲಿಲ್ಲ. ಆದರೆ, ಎಸ್ಪಿ ದಯಾನಂದನ ಮೆದುಳು ಸುಮ್ಮನಿರಬೇಕಲ್ಲ, ಕ್ಲಾಕ್ ಟವರ್ ಬಳಿ ಪ್ರತಿಭಟಿಸುತ್ತಿದ್ದವರಲ್ಲಿ ಬಹುತೇಕರು ಮುಸ್ಲಿಮರು ಹಾಗೂ ಬಸ್‌ಸ್ಟಾಂಡ್ ಬಳಿ ಪ್ರತಿಭಟಿಸುತ್ತಿದ್ದವರು ಹಿಂದೂಗಳು ಎಂಬ ವಾಸ್ತವವನ್ನೇ ಬಳಸಿಕೊಂಡ ಆತ, ತಕ್ಷಣ ಇವೆರಡಕ್ಕೂ ತಳುಕು ಹಾಕಿ ಕೋಲಾರದಲ್ಲಿ ಕೋಮುಗಲಭೆ ಎದ್ದಿದೆ, ಪೊಲೀಸರು ಅದನ್ನು ಕಂಟ್ರೋಲ್ ಮಾಡುತ್ತಿದ್ದಾರೆ ಎಂದು ತುತ್ತೂರಿ


ಶಾಂತಿಸಭೆಯಲ್ಲಿ ರೌದ್ರಾವತಾರ ತೋರಿದ ಎಸ್ಪಿ ದಯಾನಂದ್ ಮತ್ತು ಆಲಂಗೂರು ಶ್ರೀನಿವಾಸ್

ಊದಲಾರಂಭಿಸಿದ. ಆದಕ್ಕಾಗಿಯೇ ಬಸ್‌ಸ್ಟ್ಯಾಂಡ್ ಬಳಿ ಬಜೆಪಿ-ಭಜರಂಗದಳದವರ ಮೇಲೂ ಲಾಠಿ ಛಾರ್ಜ್ ಮಾಡಿಸಿದ. ಒಟ್ಟಿನಲ್ಲಿ ಎರಡೂ ಕೋಮುಗಳು ಹಿಂಸೆಯಲ್ಲಿ ತೊಡಗಿದ್ದು ಅವರನ್ನು ಪೊಲೀಸರು ನಿಯಂತ್ರಿಸಿದರು ಎಂದು ಬಿಂಬಿಸುವುದು ಅವನ ಉದ್ದೇಶವಾಗಿತ್ತು, ಈ ಮೂಲಕ ತನ್ನ ಪೊಲೀಸರು ಮಾಡಿರುವ ದೌರ್ಜನ್ಯಗಳನ್ನು ಮುಚ್ಚಿಹಾಕಲು ಪ್ರಯತ್ನಿಸಿದ.

ಆದರೆ ಈ ಜಗಳವನ್ನು ಕೋಮು ಗಲಭೆಯನ್ನಾಗಿ ಪರಿವರ್ತಿಸಬೇಕೆಂಬುದು ಎಸ್ಪಿ ದಯಾನಂದನ ಆಸೆಯಾಗಿತ್ತು, ದುರಂತ ಎಂದರೆ

ಅವನ ಈ ಟ್ರಿಕ್ ಫುಲ್ ಫ್ಲಾಪ್ ಆಗಿಹೋಯಿತು. ಅವತ್ತೇ ಜಿಲ್ಲಾ ಉಸ್ತುವಾರಿ ಸಚಿವ ಆಲಂಗೂರು ಶ್ರೀನಿವಾಸ್ ಅವರನ್ನೂ ಒಳಗೊಂಡಂತೆ ಹಿಂದೂ, ಮುಸ್ಲಿಮ್ ಎರಡೂ ಸಮುದಾಯಗಳ ನಾಯಕರು, ಜನರು ನಗರದ ಪ್ರಮುಖ ಬೀದಿಗಳಲ್ಲಿ ಪಾದಯಾತ್ರೆ ಹೊರಟೇಬಿಟ್ಟರು. ಸಚಿವರು ಈ ಯಾತ್ರೆಯಲ್ಲಿ ಭಾಗವಹಿಸಬಾರದು, ಸೆಕ್ಯೂರಿಟಿ ಸಮಸ್ಯೆ ಎಂದು ಮತ್ತೆ ದಯಾನಂದ ಕ್ಯಾತೆ ತೆಗೆದ. ಆದರೆ, ಜನರ ಒತ್ತಡದಿಂದಾಗಿ ಶ್ರೀನಿವಾಸ್ ಯಾತ್ರೆ ಹೊರಟೇಬಿಟ್ಟರು. ಈ ಯಾತ್ರೆ ಲಾಠಿ ಛಾರ್ಜ್ ನಡೆದ ಕ್ಲಾಕ್ ಟವರ್ ಮತ್ತು ಬಸ್‌ಸ್ಟ್ಯಾಂಡ್‌ಗಳನ್ನೂ ಒಳಗೊಂಡಂತೆ ನಗರದ ಪ್ರಮುಖ ಬೀದಿಯಲ್ಲಿ ಹೋಗಿ ಜನರಲ್ಲಿ ವಿಶ್ವಾಸ ತುಂಬಿದ್ದರಿಂದ ದಯಾನಂದನ ಟ್ರಿಕ್ ಸಂಪೂರ್ಣ ಫ್ಲಾಪ್ ಆಗಿ ಹೋಯಿತು.


ಸೈಯದ್ ಅಮ್ಜದ್


ಹಲ್ಲೆಗೊಳಗಾದ ಆರಿಫ್ ಪಾಷಾ

ಶಾಂತಿಸಭೆಯಲ್ಲಿ ಎಸ್ಪಿಯ ರೌದ್ರಾವತಾರ!

ಇಷ್ಟೆಲ್ಲಾ ರಾದ್ಧಾಂತ ಮಾಡಿ ನಗರದಲ್ಲಿ ಉದ್ವಿಗ್ನತೆ ಸೃಷ್ಟಿಸಿದ ಪೊಲೀಸರು ಮತ್ತು ಸಾರ್ವಜನಿಕರ ನಡುವೆ ಉಂಟಾದ ಕಂದಕವನ್ನು ಸರಿಪಡಿಸಲು ಮರುದಿನ, ಅಂದರೆ ಸೆಪ್ಟೆಂಬರ್ ಒಂದರಂದು, ಡಿಸಿ ಕಚೇರಿಯಲ್ಲಿ ಶಾಂತಿ ಸಭೆಯನ್ನು ಏರ್ಪಡಿಸಲಾಗಿತ್ತು, ಅದರ ಅಧ್ಯಕ್ಷತೆಯನ್ನು ಉಸ್ತುವಾರಿ ಸಚಿವ ಆಲಂಗೂರ್ ಶ್ರೀನಿವಾಸ್ ಅವರೇ ವಹಿಸಿಕೊಂಡಿದ್ದರು. ಲಾಠಿ ಛಾರ್ಜ್‌ನಲ್ಲಿ ಗಾಯಗೊಂಡವರಿಗೆ ಪರಿಹಾರ ನೀಡಬೇಕೆಂದು ಕಾಂಗ್ರೆಸ್‌ನ ನಾಯಕ ಫ್ರೋಜ್ ಪಾಷಾ ಅವರು ಲಿಖಿತವಾಗಿ ಮೆಮೋರಂಡಮ್ ಕೊಟ್ಟರು. ಅದೇ ಸಮಯದಲ್ಲಿ, ಕಾಂಗ್ರೆಸ್‌ನ ವಕ್ತಾರ ಹಾಗೂ ಆಟೋ ಚಾಲಕರ ಯೂನಿಯನ್ನಿನ ಅಧ್ಯಕ್ಷ ಸುರೇಶ್ ಕುಮಾರ್ ಅವರು ಪೊಲೀಸರು ಅಮಾಯಕ ಹುಡುಗನನ್ನು ಎಲೆಕ್ಟ್ರಿಕ್ ಕಂಬಕ್ಕೆ ಕಟ್ಟಿ ಹೊಡೆದುದರ ಬಗ್ಗೆ ಸಭೆಯ ಗಮನವನ್ನು ಸೆಳೆದರು. ಅವರು ಹಾಗೆ ಮಾಡುತ್ತಿದ್ದಂತೆ ಕೆಂಡಾಮಂಡಲವಾದ ಎಸ್ಪಿ "ನೀನು ನೋಡಿದ್ದೀಯೇನಯ್ಯಾ?" ಎಂದು ಏಕವಚನದಲ್ಲಿಯೇ ಮಾತನಾಡಲಾರಂಭಿಸಿದ. ಪಕ್ಕದಲ್ಲಿಯೇ ಕುಳಿತಿದ್ದ ಎಮ್ಮೆಲ್ಸಿ ನಸೀರ್ ಅಹ್ಮದ್ "ನೀನು ನೋಡಿದ್ದೀಯೇನಯ್ಯಾ?" ಎಂದು ಎಸ್ಪಿಗೆ ಪ್ರಶ್ನಿಸಿಯೇ ಬಿಟ್ಟರು. ಇಂತಹದ್ದೊಂದು ನೆಪಕ್ಕಾಗಿ ಕಾಯುತ್ತಿದ್ದ ಎಸ್ಪಿ ದಯಾನಂದ್ ಸಭೆಯಿಂದ ಎದ್ದು ಹೊರಟೇಬಿಟ್ಟ.

ಇನ್ನೊಂದು ಮಾತನ್ನಿಲ್ಲಿ ಹೇಳಲೇಬೇಕು. ರಾಜಕಾರಣಿಯೊಬ್ಬ ತಾನು ಹೋದಲ್ಲಿ, ಬಂದಲ್ಲಿ ತನಗೆ 'ಜೈ' ಎನ್ನಲು ಒಂದಿಷ್ಟು ಪುಡಿ ಬೆಂಬಲಿಗರನ್ನು ಸಾಕಿಕೊಂಡಿರುತ್ತಾರಲ್ಲವೆ, ಹಾಗೆಯೇ ಎಸ್ಪಿ ತನ್ನ ಪೊಲೀಸ್ ಪಡೆಯನ್ನು ಸಾಕಿಕೊಂಡಿದ್ದಾರೆ. ಆವತ್ತು ಎಸ್ಪಿ ಸಭೆಯಿಂದ ಹೊರಹೋಗುತ್ತಿದ್ದಂತೆಯೇ ಡಿವೈಎಸ್ಪಿ, ಸರ್ಕಲ್ ಇನ್ಸ್‌ಪೆಕ್ಟರ್, ಎಸ್ಐಗಳಾದಿಯಾಗಿ ಅಲ್ಲಿ ನೆರೆದಿದ್ದ ಪೊಲೀಸರು "ಎಸ್ಪಿ ದಯಾನಂದ್‌ಗೆ ಜೈ" ಎಂದು ಜಯಕಾರ ಹಾಕುತ್ತಾ ತಮ್ಮ ನಾಯಕನೊಂದಿಗೆ ಹೊರಟುಹೋದರು! ಆತನ ಅನುಪಸ್ಥಿತಿಯಲ್ಲಿಯೇ ಸಭೆ ಮುಂದುವರೆಯಿತು.

ಕೋಲಾರ ಇವತ್ತು ಶಾಂತಿಯುತವಾಗಿರುವುದನ್ನೇ ತನ್ನ ಪ್ರೆಸ್ಟೀಜ್ ಪ್ರಶ್ನೆಯನ್ನಾಗಿ ತೆಗೆದುಕೊಂಡಿರುವ ದಯಾನಂದ್ ಧರಣಿ ನಿರತ ಸಾರ್ವಜನಿಕರ ಮೇಲೆ ಹಾಕಿರುವ ಕೇಸುಗಳನ್ನು ಹಿಂತೆಗೆದು ಕೊಳ್ಳುವುದಿಲ್ಲ ಎಂದು ಪಟ್ಟು ಹಿಡಿದು ಕುಳಿತಿದ್ದಾನೆ. ಅಲ್ಲದೇ, ತನ್ನ ವಿರುದ್ಧ ಮಾತನಾಡಿದವರೆಲ್ಲರನ್ನೂ ಮತ್ತೆ ಬೇರೆ ಬೇರೆ ಕೇಸ್‌ಗಳಲ್ಲಿ ಫಿಕ್ಸ್ ಮಾಡುವುದಾಗಿ ಬೆದರಿಕೆ ಒಡ್ಡುತ್ತಿದ್ದಾನೆ.

ಈ ಹಿಂದೆ ಮಂಗಳೂರಿನಲ್ಲಿ ಎಸ್ಪಿಯಾಗಿದ್ದಾಗ ಇಂತಹದ್ದೇ ಘನಂದಾರಿ ಕೆಲಸಗಳನ್ನೇ ಮಾಡಿಕೊಂಡು ಬಂದಿದ್ದ ದಯಾನಂದ ಈಗ ಕೋಲಾರದಲ್ಲಿಯೂ ಅವುಗಳನ್ನು ಮುಂದುವರೆಸಿದ್ದಾನೆ. ಇವನ ಮಂಗನಾಟಗಳು ಹೀಗೇ ಮುಂದುವರೆದರೆ ಜನ ಅವನನ್ನು ಇಲ್ಲಿಂದಲೂ ಓಡಿಸುವ ದಿನ ದೂರವಿಲ್ಲ.

- ಕುಮಾರ್ ಬುರಡಿಕಟ್ಟಿ

ಸಾಬಿ ಸೂ... ಮಕ್ಕಳಾ!

"ಇದು ಕೋಲಾರ ಪೊಲೀಸರು ಮುಸ್ಲಿಮ್ ಸಮುದಾಯವನ್ನು ಬಯ್ಯುವ ರೀತಿ. ಹೀಗೆ ಬೈಯ್ದಿದ್ದ ಕಾರಣಕ್ಕೇನೇ ಮಂಜುನಾಥ್ ಎಂಬ ಕ್ರೈಂ ಬ್ರಾಂಚ್ ಪೇದೆ ಮೂತಿಯ ಮೇಲೆ ಗುದ್ದನ್ನು ತಿಂದು ಇಡೀ ಕೋಲಾರಕ್ಕೆ ಬೆಂಕಿ ಹಚ್ಚಿದ.

ಆವತ್ತು ಧರಣಿ ಸ್ಥಳದಿಂದ ಬಹಳವೇ ದೂರದಲ್ಲಿದ್ದ ಸಣ್ಣದೊಂದು ಚಹಾದಂಗಡಿ ಇಟ್ಟುಕೊಂಡಿದ್ದ ವಿಜಾಹ್ ಎಂಬುವವನನ್ನು ಅವನ ಅಂಗಡಿಯೊಳಗೇನೇ ಕೂಡಿ ಹಾಕಿ ಮನಸಬಂದಂತೆ ಹೊಡೆದಿದ್ದಾರೆ. ಪ್ರತೀ ಹೊಡೆತ ಹೊಡೆಯುವಾಗಲೂ "ಸಾಬಿ ಸೂ... ಮಕ್ಕಳಾ, ಸಾಬಿ ಬೋ... ಮಕ್ಕಳ, ನೀವೆಲ್ಲ ಟೆರರಿಸ್ಟುಗಳು" ಎಂಬ ಬೈಗುಳಗಳ ಸುರಿಮಳೆ. ಪೊಲೀಸರ ದೌರ್ಜನ್ಯದ ಭೀಕರತೆ ಹೇಗಿತ್ತೆಂದರೆ, ವಿಜಾಹ್‌ನ ಮರ್ಮಾಂಗಕ್ಕೆ ಪೊಲೀಸರು ಹೊಡೆದ ಹೊಡೆತದಿಂದ ಆತ ಇವತ್ತಿಗೂ ಮೂತ್ರ ವಿಸರ್ಜನೆಗೆ ಕಷ್ಟಪಡುತ್ತಿದ್ದಾನೆ.

ಆತ ಹೊಡೆತ ತಿಂದು ಆಸ್ಪತ್ರೆ ಸೇರಿದರೆ ಅದೇ ದಿನ ಅರ್ಧರಾತ್ರಿಯ ಹೊತ್ತಿಗೆ [illegible] ಬಂದು "ಬೆಳಗಾಗುವಷ್ಟರಲ್ಲಿ ನೀನು [illegible] [illegible] ಇಲ್ಲದಿದ್ದರೆ ಬಿಟ್ಟಿರುವುದಿಲ್ಲ" ಎಂದು ಧಮಕಿ ಹಾಕಿದ್ದಾರೆ. ಹೊಡೆದದ್ದು [illegible] ಚಿಕಿತ್ಸೆ ತೆಗೆದುಕೊಳ್ಳಲೂ ಬಿಡುವುದಿಲ್ಲ ಎಂದರೆ ಕೋಲಾರ ಪೊಲೀಸರು [illegible] ಕ್ರೌರ್ಯ ಪ್ರವೃತ್ತಿಯನ್ನು ಹೊಂದಿದ್ದಾರೆಂದು ನೀವೇ ಯೋಚಿಸಿ.


[illegible]


ದಾವಣಗೆರೆ: ವಿದ್ಯಾರ್ಥಿಗಳ ಗೋಳಾಟ

ಪಿ.ಎಸ್.ಐ. ನಿರಂಜನನ ಹಾರಾಟ

ದಾವಣಗೆರೆ ನಗರದ ಬಡಾವಣೆ ಪೊಲೀಸ್ ಠಾಣೆಯ ಪಿಎಸ್‌ಐ ನಿರಂಜನ್ ಎನ್ನುವವನಿಗೆ ಹುಚ್ಚುನಾಯಿ ಕಡಿದಿದೆಯೋ ಅಥವಾ ಇವನು ತೊಟ್ಟಿರುವ ಖಾಕಿ ಬಟ್ಟೆಯಿಂದಾಗಿ ಇವನ ಪಿತ್ಥ ನೆತ್ತಿಗೇರಿದೆಯೋ? ಇಲ್ಲವೇ ಯಥೇಚ್ಛವಾಗಿ ಮುಕ್ಕುತ್ತಿರುವ ಕಮಾಯಿಯ ಅಮಲು ಈ ರೀತಿ ಮಾಡಿಸುತ್ತಿದೆಯೋ? ಪೊಲೀಸ್ ಇಲಾಖೆಯ ಮೇಲಧಿಕಾರಿಗಳು ಪತ್ತೆ ಹಚ್ಚಬೇಕಾಗಿದೆ. ಸೆ. 6. ರಂದು ಶಾಂತಿಯುತವಾಗಿ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳನ್ನು ವಿನಾಕಾರಣವಾಗಿ ಬಂಧಿಸಿ ಓಳು ಸಿನಿಮಾವೊಂದರ ಖಳನಾಯಕನಂತಾಡುತ್ತಿರುವ ಈ ನಿರಂಜನನನ್ನು ಹೀಗೆಯೇ ಬಿಟ್ಟರೆ ಇಲಾಖೆಯ ಮಾನ ಕಳೆಯುವುದು ಗ್ಯಾರಂಟಿ!



ನಗರದಲ್ಲಿ ಅನೇಕ ವಿದ್ಯಾರ್ಥಿ ನಿಲಯಗಳಿದ್ದರೂ ಕೂಡ ಸಮಾಜ ಕಲ್ಯಾಣ ಇಲಾಖೆಯ ವಸೂಲಿ ಸೀಟು ಹಂಚಿಕೆಯ ಕುತಂತ್ರಗಳಿಂದಾಗಿ ಒಂದು ಕಡೆ ಅರ್ಹ ವಿದ್ಯಾರ್ಥಿಗಳು ಸರ್ಕಾರಿ ವಿದ್ಯಾರ್ಥಿ ನಿಲಯಗಳಲ್ಲಿ ಸೀಟು ಸಿಗದೇ ಅವಕಾಶವಂಚಿತರಾಗಿದ್ದರೆ, ಇನ್ನೊಂದು ಕಡೆ ಖಾಸಗಿ ಅನುದಾನಿತ ವಿದ್ಯಾರ್ಥಿ ನಿಲಯಗಳು ಪ್ರಸಕ್ತ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಕಾಲೇಜು ಆರಂಭವಾಗಿ ಮೂರು ತಿಂಗಳಾಗಿದ್ದರೂ ಸಹ ಪ್ರಾರಂಭವಾಗದೆ ಎ.ಆರ್.ಎಂ. ಮತ್ತು ಎ.ಆರ್.ಜಿ. ಕಾಲೇಜುಗಳ ಸುಮಾರು 200 ಮಂದಿ ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗದ ವಿದ್ಯಾರ್ಥಿಗಳು ಊಟ-ವಸತಿ ವ್ಯವಸ್ಥೆಯಿಲ್ಲದೆ ಅಕ್ಷರಶಃ ಬೀದಿಗೆ ಬಿದ್ದಿದ್ದಾರೆ. ಈ ಕಾಲೇಜುಗಳ ಪ.ಜಾತಿ, ಪ. ವರ್ಗದ ವಿದ್ಯಾರ್ಥಿಗಳಿಗೆ ವಿದ್ಯಾರ್ಥಿ ನಿಲಯದ ಸೌಕರ್ಯವನ್ನು ಒದಗಿಸಲು ಈಗ್ಗೆ ಮೂರು ತಿಂಗಳಿಂದಲೂ ಸಮಾಜ ಕಲ್ಯಾಣ ಇಲಾಖೆಗೆ ವಿದ್ಯಾರ್ಥಿಗಳು ಸತತವಾಗಿ ಮನವಿಗಳನ್ನು ಕೊಡುತ್ತಾ ಬಂದಿದ್ದರೂ ಇಲಾಖೆಯು ಇವರ ಮನವಿಯನ್ನು ಗಮನಕ್ಕೇ ತೆಗೆದುಕೊಂಡಿಲ್ಲ.



ಪ್ರತಿಭಟನಾನಿರತ ವಿದ್ಯಾರ್ಥಿಗಳಿಗೆ ಧಮಕಿ ಹಾಕುತ್ತಿರುವ ನಿರಂಜನ

ಬೀದಿಗಿಳಿದ ವಿದ್ಯಾರ್ಥಿಗಳು

ಮನವಿಗಳಿಗೆ ಮಾನ್ಯತೆ ದೊರೆಯದೆ ಇದ್ದಾಗ ಸೆ. 6ರಂದು ಅನಿವಾರ್ಯವಾಗಿ "ಜನಪರ ವಿದ್ಯಾರ್ಥಿ ವೇದಿಕೆ" (J.V.S.)ಯ ನೇತೃತ್ವದಲ್ಲಿ ಪ್ರತಿಭಟನೆಗಿಳಿದ ವಿದ್ಯಾರ್ಥಿಗಳು ಮೆರವಣಿಗೆಯ ಮೂಲಕ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿಗಳ ಕಚೇರಿಗೆ ಬಂದು ಗೇಟಿನ ಮುಂದೆ ಕುಳಿತು ಪ್ರತಿಭಟನೆಯನ್ನು ಪ್ರಾರಂಭಿಸಿದ್ದರು. ಸಮಾಜ ಕಲ್ಯಾಣ ಇಲಾಖೆಗೆ ಮುತ್ತಿಗೆ ಹಾಕುತ್ತೇವೆಂದು ಪತ್ರಿಕೆಗಳಲ್ಲಿ ಪ್ರಕಟಣೆ ನೀಡಿದ್ದರೂ ಕೂಡ ಸಾರ್ವಜನಿಕರಿಗಾಗಲೀ, ಕಚೇರಿಯ ನೌಕರರಿಗಾಗಲೀ ಯಾವುದೇ ರೀತಿಯ ತೊಂದರೆ ಕೊಡದೆ ತಮ್ಮ ಬೇಡಿಕೆಗಳ ಕುರಿತ ಘೋಷಣೆಗಳನ್ನು ಹಾಕುವುದರಲ್ಲಿ ನಿರತರಾಗಿದ್ದರು. ಸಮಾಜ ಕಲ್ಯಾಣಾಧಿಕಾರಿ ನಿಂಗಪ್ಪ ಡಿ.ಸಿ. ಕಚೇರಿಯಲ್ಲಿ ಚುನಾವಣೆ ಕುರಿತ ಸಭೆಯಲ್ಲಿ ಭಾಗವಹಿಸಿದ್ದರಿಂದ ಕಚೇರಿಯಲ್ಲಿ ಇರಲಿಲ್ಲ, ಹಾಗಾಗಿ ಆತನನ್ನು ಕರೆ ತರಲು ವಿದ್ಯಾರ್ಥಿ ನಾಯಕರು ಕಚೇರಿಯ ಸಿಬ್ಬಂದಿಗೆ ಹೇಳಿ ಜಿಲ್ಲಾ ಸಮಾಜ ಕಲ್ಯಾಣಾಧಿಕಾರಿ ಬರುವವರೆಗೂ ಇಲ್ಲಿಂದ ಕದಲುವುದಿಲ್ಲವೆಂದು ಪಟ್ಟುಹಿಡಿದು ಪ್ರತಿಭಟನೆಯನ್ನು ಮುಂದುವರೆಸಿದ್ದರು. ಸಮಾಜ ಕಲ್ಯಾಣ ಇಲಾಖೆಯ ಸಿಬ್ಬಂದಿ ನಿಂಗಪ್ಪನನ್ನು ಕರೆತರುತ್ತೇವೆಂದು ಹೋಗಿಯೂ ಆಗಿತ್ತು-ಆದರೆ ಸಮಾಜ ಕಲ್ಯಾಣಾಧಿಕಾರಿಗಳ ನಿರೀಕ್ಷೆಯಲ್ಲಿದ್ದ ವಿದ್ಯಾರ್ಥಿಗಳ ಮುಂದೆ ದಿಢೀರ್ ಪ್ರತ್ಯಕ್ಷನಾಗಿದ್ದು ಬಡಾವಣೆ ಪೊಲೀಸ್ ಠಾಣೆಯ ಪಿಎಸ್‌ಐ ನಿರಂಜನ!


[illegible]

ವಿದ್ಯಾರ್ಥಿ ನಾಯಕರೊಂದಿಗೆ ವಿನಾಕಾರಣ ವಾಗ್ವಾದಕ್ಕಿಳಿದು ಧಮಕಿ ಹಾಕಲು ಪ್ರಾರಂಭಿಸಿದಾಗ ವಿದ್ಯಾರ್ಥಿಗಳು ಇನ್ನಷ್ಟು ಜೋರಾಗಿ ಘೋಷಣೆಗಳನ್ನು ಹಾಕಲು ಪ್ರಾರಂಭಿಸಿದರು ಅಷ್ಟೇ! ಪಿತ್ಥವನ್ನು ನೆತ್ತಿಗೇರಿಸಿಕೊಂಡ ನಿರಂಜನ ವಿದ್ಯಾರ್ಥಿ ನಾಯಕರಾದ ವಿನಾಯಕ, ಪೂಜಾರರನ್ನು ಬಂಧಿಸುವ ಸಲುವಾಗಿ ಹಿಡಿದೆಳೆಯಲು ಮುಂದಾದಾಗ ಜೊತೆಗಿದ್ದ ಉಷಾ ಕೈಲಾಸದ್, ರಘು ಪ್ರಸಾದ್, ಮಹಾಂತೇಶ್ ಮತ್ತು ಸತೀಶ್ ಮುಂತಾದವರು ವಿರೋಧ ವ್ಯಕ್ತಪಡಿಸಿದ್ದರಿಂದ ಇವರನ್ನೊಳಗೊಂಡು ಸುಮಾರು 8-10 ಮಂದಿ ವಿದ್ಯಾರ್ಥಿ ನಾಯಕರನ್ನು ನಿರಂಜನ ಠಾಣೆಗೆ ತೆಗೆದುಕೊಂಡು ಹೋಗಿಬಿಟ್ಟ! ವಿದ್ಯಾರ್ಥಿ ನಾಯಕರನ್ನು ಬಂಧಿಸಿದ್ದರಿಂದಾಗಿ ಹೊರಗುಳಿದ ವಿದ್ಯಾರ್ಥಿಗಳು ಸಂಘಟನೆಯ ಬ್ಯಾನರ್ ಹಿಡಿದು ಮತ್ತೆ ಬಡಾವಣೆ ಪೊಲೀಸ್ ಠಾಣೆಗೆ ಮೆರವಣಿಗೆ ಮೂಲಕ ಹೋಗಿ ಪ್ರತಿಭಟಿಸಲು ಪ್ರಾರಂಭಿಸಿದಾಗ ಸಿಪಿಐ ಶ್ರೀನಿವಾಸ್ ಮಧ್ಯ ಪ್ರವೇಶಿಸಿ ವಿಷಯ ತಿಳಿದುಕೊಂಡು ವಿದ್ಯಾರ್ಥಿ ನಾಯಕರನ್ನು ಬಿಡುಗಡೆ ಮಾಡಲಾಯಿತು. ಅಷ್ಟೊತ್ತಿಗೆ ವಿದ್ಯಾರ್ಥಿ ನಾಯಕನ ವಿಳಾಸ, ಫೋಟೋಗಳನ್ನು ಪೊಲೀಸರು ತೆಗೆದುಕೊಂಡಿದ್ದರು. ಆದರೆ ವಿದ್ಯಾರ್ಥಿಗಳ ಹಸಿವಿನ ಹೋರಾಟವನ್ನು ಬೆದರಿಸಿ ಹಿಮ್ಮೆಟ್ಟಿಸಲು ನಡೆಸಿದ ಪಿಎಸ್‌ಐ ನಿರಂಜನನ ಪ್ರಯತ್ನ ಯಶಸ್ವಿಯಾಗಲಿಲ್ಲ-ಮತ್ತೆ ಮೆರವಣಿಗೆಯ ಮೂಲಕ ಸಮಾಜ ಕಲ್ಯಾಣಾಧಿಕಾರಿಯ ಕಚೇರಿಗೆ ಹೋದ ವಿದ್ಯಾರ್ಥಿಗಳು ಸಮಾಜ ಕಲ್ಯಾಣಾಧಿಕಾರಿಯ ಜೊತೆ ಮಾತುಕತೆ ನಡೆಸಿದರು.

ಇಲ್ಲಿ ಎದುರಾಗುವ ಪ್ರಶ್ನೆಯೇನೆಂದರೆ, ಶಾಂತವಾಗಿ ಕುಳಿತು ಪ್ರತಿಭಟನೆ ನಡೆಸುತ್ತಿದ್ದ ವಿದ್ಯಾರ್ಥಿಗಳನ್ನು ಯಾವ ಕಾರಣಕ್ಕಾಗಿ ದೌರ್ಜನ್ಯ ಮಾಡಿ ಬಂಧಿಸಲಾಯಿತು? ಎನ್ನುವುದು. ಸಾರ್ವಜನಿಕರು ಯಾರಾದರೂ ಪ್ರತಿಭಟಿಸುತ್ತಿದ್ದ ವಿದ್ಯಾರ್ಥಿಗಳ ಮೇಲೆ ದೂರು ಕೊಟ್ಟಿದ್ದರೆ? ಸಮಾಜ ಕಲ್ಯಾಣಾಧಿಕಾರಿ ಅಥವಾ ನೌಕರರು ದೂರು ಕೊಟ್ಟಿದ್ದರೆ? ಅಥವಾ ವಿದ್ಯಾರ್ಥಿಗಳು ಸಾರ್ವಜನಿಕರಿಗೆ ಮತ್ತು ಕಚೇರಿಯ ಸಿಬ್ಬಂದಿಗೆ ಕೆಲಸಕ್ಕೆ ಅಡ್ಡಿಪಡಿಸಿ ತೊಂದರೆ ಕೊಟ್ಟಿದ್ದರೆ? ಇದ್ಯಾವುದೂ ನಡೆದಿರಲಿಲ್ಲ! ಆದರೂ ವಿದ್ಯಾರ್ಥಿಗಳನ್ನು ಬೆದರಿಸಿ ಬಂಧಿಸಿದ್ದು ಕೇವಲ ಪಿಎಸ್‌ಐ ನಿರಂಜನನ ದರ್ಪಕ್ಕಾಗಿಯೋ ಅಥವಾ ಶಾಂತಿಯುತ ಪ್ರತಿಭಟನೆಗಳನ್ನೂ ಸಹಿಸುವುದಿಲ್ಲವೆಂದು ಪೊಲೀಸ್ ಇಲಾಖೆಯ ಸರ್ವಾಧಿಕಾರಿ ನೀತಿಯಿಂದಾಗಿಯೋ? ಇಲಾಖೆ ಸ್ಪಷ್ಟಪಡಿಸಬೇಕು.

ಈ ಹಿಂದೆ ದಾವಣಗೆರೆ ನಗರದಲ್ಲಿ ಪತ್ರಿಕಾಗೋಷ್ಠಿಯನ್ನು ನಡೆಸಿ ಹೊರಟಿದ್ದ "ಸಮಾನತಾ ಮಹಿಳಾ ವೇದಿಕೆ"ಯ ಕಾರ್ಯಕರ್ತರಾದ ಮಂಜುಳ, ಗೌರಿ, ಮಲ್ಲಿಗೆಯವರನ್ನು ಇದೇ ಪೊಲೀಸ್ ಠಾಣೆಯವರು ಅಕ್ರಮವಾಗಿ ಬಂಧಿಸಿದಾಗ ದಾವಣಗೆರೆ ಪತ್ರಕರ್ತರಿಂದ ವ್ಯಾಪಕ ಟೀಕೆಗೆ ಗುರಿಯಾಗಿ, ಈ ಬಗ್ಗೆ ಆಗಿನ ಎಸ್.ಪಿ. ಕ್ಷಮೆ ಯಾಚಿಸಿದ್ದು ನಡೆದಿದೆ. ಈಗ ಪಿಎಸ್‌ಐ ನಿರಂಜನನ ಈ ರೀತಿಯ ಹಾರಾಟಗಳಿಂದಾಗಿ ನಾಗರಿಕರು ರೋಸಿ ಹೋಗಿರುವ ಪರಿಸ್ಥಿತಿ ಎದುರಾಗಿದೆ. ಹೊರ ರಾಜ್ಯಗಳ ವೈದ್ಯಕೀಯ ಮತ್ತು ಇಂಜನಿಯರಿಂಗ್ ವಿದ್ಯಾರ್ಥಿಗಳನ್ನು ಸಣ್ಣಸಣ್ಣ ಕಾರಣಗಳಿಗೂ ಬಡಾವಣೆ ಪೊಲೀಸ್ ಠಾಣೆಗೆ ಎಳೆದು ತಂದು ಅವರ ಮೊಬೈಲ್, ಉಂಗುರ, ಕ್ಯಾಮೆರಾ ಇತ್ಯಾದಿಗಳನ್ನು ಪೊಲೀಸರು ಕಸಿದುಕೊಳ್ಳುತ್ತಿದ್ದಾರೆಂಬ ದೂರುಗಳು ಕೇಳಿಬರುತ್ತಿವೆ. ಬಡಾವಣೆ ಪೊಲೀಸ್ ಠಾಣೆಯ ವಾಸ್ತುವಿನ ಬಗ್ಗೆ ತಲೆ ಕೆಡಿಸಿ ಕೊಳ್ಳುವುದು ಬೇಡವಾಗಿದ್ದರೂ ಈ ಠಾಣೆಯ ಪೊಲೀಸರ ತಲೆಯೊಳಗಿನ ವಸ್ತು ಖರಾಬಾಗಿರುವ ಬಗ್ಗೆ ಮಾತ್ರ ಮೇಲಧಿಕಾರಿಗಳು ತಲೆ ಕೆಡಿಸಿಕೊಳ್ಳಲೇಬೇಕಾಗಿದೆ.

-[illegible]



ತಂದೆಯ ನೆನಪುಗಳು 3

■ ಈಚಾರ ವಾರಿಯರ್

ಕನ್ನಡಕ್ಕೆ: ಸಾರಾ ಅಬೂಬಕ್ಕರ್

ಏ.ಕೆ.ಜಿ.ಯವರ ಪತ್ರ

> ನನ್ನ ವಿಜ್ಞಾಪನೆಯನ್ನು ಪ್ರಧಾನ ಮಂತ್ರಿ ಇಂದಿರಾಗಾಂಧಿಗೆ ಕಳುಹಿಸಿಕೊಟ್ಟಿರುವುದಾಗಿಯೂ, ರಾಜನನ್ನು ಕಂಡುಹಿಡಿಯಲು ಕ್ರಮ ಕೈಗೊಳ್ಳಬೇಕೆಂದು ಶಕ್ತಿಯುತವಾಗಿ ಬರೆದಿರುವುದಾಗಿಯೂ ಏ.ಕೆ.ಜಿ. ಆ ಪತ್ರದಲ್ಲಿ ಬರೆದಿದ್ದರು. ರಾಜನ್ ಘಟನೆಯ ಕುರಿತು ನಾನು ಹಲವರಿಗೆ ವಿಜ್ಞಾಪನಾ ಪತ್ರವನ್ನು ಕಳುಹಿಸಿದ್ದೆ. ಆದರೆ ಯಾರಿಂದಲೂ ಒಂದೇ ಒಂದು ಉತ್ತರವೂ ಬಂದಿರಲಿಲ್ಲ. ಹಾಗಿರುವಾಗ ಪ್ರತಿಪಕ್ಷ ನಾಯಕರಾದ ಏ.ಕೆ.ಜಿಯವರೇ ರಾಜನ ವಿಷಯವನ್ನೆತ್ತಿಕೊಂಡರೆನ್ನುವುದು ನನಗೆ ಆಶ್ವಾಸನೆ ನೀಡಿತು.

ರಾಷ್ಟ್ರೀಯ ನಾಯಕರು, ಮಂತ್ರಿ ಪುಂಗವರು, ಪೊಲೀಸ್ ಅಧಿಕಾರಿಗಳು ಮೊದಲಾದವರಿಂದೆಲ್ಲಾ ನನಗುಂಟಾದ ಅನುಭವಗಳನ್ನು ಹಿಂದಿನ ಅಧ್ಯಾಯಗಳಲ್ಲಿ ವಿವರಿಸಿದ್ದೇನಲ್ಲಾ? ಅದರಿಂದೆಲ್ಲಾ ವ್ಯತ್ಯಸ್ತವಾದ ಬೇರೊಂದು ಅನುಭವ ನನಗುಂಟಾಯಿತು.

ಚಾತ್ತಮಂಗಲದಿಂದ ಕೋಝಿಕ್ಕೋಡಿಗೆ ಹಿಂತಿರುಗಿ ಕೇರಳ ಲಾಡ್ಜಿನಲ್ಲಿದ್ದ ಕಾಲದಲ್ಲಿ ತೀರಾ ಅನಿರೀಕ್ಷಿತವಾದ ಒಂದು ಕೇಂದ್ರದಿಂದ ನನಗೊಂದು ಆಮಂತ್ರಣ ದೊರೆಯಿತು. ಅಂದಿನ ಮಾತೃಭೂಮಿ ಮುಖ್ಯ ಸಂಪಾದಕ ಕೆ.ಪಿ.ಕೇಶವ ಮೇನೋನ್ ಅವರಿಂದಾಗಿತ್ತು ಅದು. ರಾಜನ ವಿಷಯಕ್ಕಾಗಿ ನಾನು ಅವರನ್ನು ಸಮೀಪಿಸಿರಲಿಲ್ಲ. ಆದರೆ ನನಗೆದುರಾದ ವಿಪತ್ತಿನ ಕುರಿತು ಆತನಿಗೆ ಹೇಗೋ ವಿವರ ದೊರೆತಿತ್ತು. ಅವರೊಡನೆ ನಾನು ಮಾತನಾಡಿದಾಗ ತುರ್ತು ಪರಿಸ್ಥಿತಿಯ ಹೆಸರಿನಲ್ಲಿ ನಡೆಯುತ್ತಿದ್ದ ಅಕ್ರಮಗಳ ಕುರಿತು ಶಕ್ತಿಯುತವಾದ ತೀರ್ಮಾನವನ್ನು ಅವರು ಕೈಗೊಂಡಿದ್ದರೆಂದು ನನಗೆ ಮನದಟ್ಟಾಯಿತು.

ನಾನು ಹಲವರಿಗೆ ಬರೆದಿದ್ದ ನಿವೇದನೆಗಳ ಪ್ರತಿಗಳನ್ನು ಅವರಿಗೆ ನೀಡಿದೆ. ದೃಷ್ಟಿ ಮಂದವಾಗಿದ್ದ ಕಾರಣ ಅದನ್ನು ಅವರು ಆಗ ಓದಲಿಲ್ಲ. ಆಮೇಲೆ ಓದುವೆನೆಂದರು. ಕಕ್ಕಯಂ ಮತ್ತು ಕಾಯಣ್ಣದಲ್ಲಿ ನಡೆದ ಘಟನೆಗಳ ಕುರಿತು ನನ್ನೊಡನೆ ವಿವರವಾಗಿ ಕೇಳಿ ತಿಳಿದುಕೊಂಡರು. ಪ್ರಿನ್ಸಿಪಾಲ್ ವಹಾಬುದ್ದೀನರೊಡನೆ ಪಡಿಕ್ಕಲ್‌ನ ವರ್ತನೆ ಕುರಿತು ಕೇಳಿದೊಡನೆ ಅವರ ಮುಖಭಾವ ಪೂರ್ಣ ಬದಲಾಯಿತು. ನಮ್ಮ ನಾಡಿನ ಧಾರ್ಮಿಕಾಧಃಪತನದಿಂದ ಅವರು ಬಹಳ ನೊಂದಿದ್ದರು ಎಂದು ನನಗನ್ನಿಸಿತು. ನನ್ನೊಡನೆ ಎಲ್ಲ ವಿವರಗಳನ್ನೂ ಕೇಳಿ ತಿಳಿದುಕೊಂಡ ಬಳಿಕ ನನ್ನನ್ನು ಸಂತೈಸಿ ತಾನು ಸಾಧ್ಯವಿದ್ದಷ್ಟು ಪ್ರಯತ್ನಿಸುವೆನೆಂದೂ, ಮುಂದಿನ ವಾರ ಮತ್ತೊಮ್ಮೆ ಬರಬೇಕೆಂದೂ ಹೇಳಿ ನನ್ನನ್ನು ಬೀಳ್ಕೊಟ್ಟರು.

ಅವರಿಂದುಂಟಾದ ಇಂತಹ ಒಂದು ಪ್ರತ್ಯೇಕವಾದ ಅನುಭವದಿಂದ ನಾನು ಬಹಳ ಸಂತುಷ್ಟನಾದೆ. ನಾನು ಮತ್ತೊಮ್ಮೆ ಹೋದಾಗ ಇನ್ನೂ ಹೆಚ್ಚಿನ ವಿವರಗಳೇನನ್ನೂ ಕೊಡಲು ಅವರಿಂದ ಸಾಧ್ಯವಾಗಲಿಲ್ಲ. ಆದರೂ ಅವರು ತೋರಿದ ಸಹಾನುಭೂತಿ ಕೂಡಾ ತುಂಬಾ ಆಶ್ವಾಸನೆ ನೀಡುವಂತಹುದಾಗಿತ್ತು. ನನ್ನ ವಿಷಯದಲ್ಲಿ ಅವರು ತೋರಿದ ಆಸಕ್ತಿ ಮಾತ್ರ ಆ ಸಂದರ್ಭದಲ್ಲಿ ನನ್ನಂತಹ ಓರ್ವ ತಂದೆಯನ್ನು ಸಂತೈಸಲು ಸಾಕಾಗಿತ್ತು. "ಏನಾದರೂ ಮಾಡಲು ಸಾಧ್ಯವೇ ಎಂದು ನಾನು ಮತ್ತೊಮ್ಮೆ ಪ್ರಯತ್ನಿಸುವೆ, ನನಗೆ ಇನ್ನೊಂದು ಅವಕಾಶ ನೀಡುವಿರಾ?" ಎಂದು ಅವರು ಕಳಕಳಿಯಿಂದ ಯಾಚಿಸಿದಾಗ ನಾನು ಒಪ್ಪಿಕೊಂಡೆ. ಒಂದು ವಾರದ ಬಳಿಕ ನಾನು ಮತ್ತೊಮ್ಮೆ ಹೋದೆ. ಅವರು ಬಹಳ ವಿಷಣ್ಣತೆಯಿಂದಿದ್ದರು. ಅವರು ಬಹಳ ಪ್ರಯತ್ನಿಸಿದರೂ ಏನೂ ಮಾಡಲಾಗದೆ ಪರಾಜಿತರಾಗಿದ್ದರು. ಅವರು ಬಹಳ ಕುಗ್ಗಿಹೋಗಿದ್ದರು.

"ಇನ್ನು ಯಾವುದನ್ನೂ ತನಿಖೆ ಮಾಡಬೇಕಾದ ಅಗತ್ಯವಿಲ್ಲ. ಸೀದಾ ಎರ್ನಾಕುಲಂಗೆ ಹೋಗಿ ವಿಶ್ರಾಂತಿ ತೆಗೆದುಕೊಳ್ಳಿ, ಭಾಗ್ಯವಿದ್ದರೆ ಮತ್ತೊಮ್ಮೆ ಭೇಟಿಯಾಗಬಹುದು" ಎಂದರು.

ಕೆ.ಪಿ ಕೇಶವ ಮೇನೋನ್ ಎಂಬ ಮಹಾ ವ್ಯಕ್ತಿಯಿಂದ ವಿಶೇಷ ಸಹಾಯವೇನೂ ನನಗೆ ದೊರೆಯಲಿಲ್ಲ. ಆದರೂ ಈ ವಿಷಯದಲ್ಲಿ ಅವರು ತೋರಿದ ಆಸಕ್ತಿ ನನಗೆ ಬಹಳ ಸಂತೃಪ್ತಿ ನೀಡಿತು.


ಈ ಭೇಟಿಯ ಬಳಿಕ ಎರಡು ಮೂರು ದಿನಗಳಲ್ಲಿ 'ಮಾತೃಭೂಮಿ' ಪತ್ರಿಕೆಯಲ್ಲಿ ಅವರ ಒಂದು ಸಂಪಾದಕೀಯ ಪ್ರಕಟವಾಯಿತು. ತುರ್ತು ಪರಿಸ್ಥಿತಿಯ ಸೆನ್ಸರ್‌ಶಿಪ್‌ನ ಕಣ್ಣಿಗೆ ಬೀಳದಂತೆ ಅದರಲ್ಲಿ ಹಲವಾರು ವಿಷಯಗಳ ಮೇಲೆ ಬೆಳಕು ಚೆಲ್ಲಲಾಯಿತು. ಅದನ್ನು ಓದಿದಾಗ ನನ್ನ ಅನುಭವಗಳ ಆಧಾರದಲ್ಲಿ ಇದನ್ನು ಅವರು ಬರೆದಿರಬಹುದೆಂದೆನ್ನಿಸಿತು. ಅದರ ಕೊನೆಯ ಒಂದು ವಾಕ್ಯವನ್ನು ಇಂದಿಗೂ ನಾನು ನೆನಪಿಸಿಕೊಳ್ಳುತ್ತೇನೆ.

"ತುರ್ತು ಪರಿಸ್ಥಿತಿಯ ಈ ಸಂದರ್ಭದಲ್ಲಿ ಹಲವು ವಿಧದ ದುರಂತಗಳನ್ನು ಅನುಭವಿಸುತ್ತಿರುವ ಸಾವಿರಾರು ಜನರಿದ್ದಾರೆ. ಆದರೆ ಅವರಾರೂ ಕೂಡಾ ತಮ್ಮ ದುರಂತದ ಕುರಿತು ಅಧಿಕಾರ ಸ್ಥಾನದಲ್ಲಿರುವವರಿಗೆ ತಿಳಿಸಲು ಧೈರ್ಯವಹಿಸುವುದಿಲ್ಲ. ಆದರೆ ಅವರಲ್ಲಿ ಗಟಿಗೆಟ್ಟ ಕೆಲವರು ಮಾತ್ರ ಇಂತಹ ಧೈರ್ಯ ತೋರಿಸುತ್ತಾರೆ." ಈ ವಾಕ್ಯವನ್ನು ಅವರು ಬರೆದಿದ್ದು ನನ್ನ ಕುರಿತಾಗಿರಬಹುದೆಂದು ನನಗನ್ನಿಸಿತು. ಅಷ್ಟರಲ್ಲಾಗಲೇ ಅಧ್ಯಕ್ಷರಿಂದ ತೊಡಗಿ ಕೊನೆಯ ಸ್ತರದಲ್ಲಿರುವ ಪೊಲೀಸ್ ಉದ್ಯೋಗಸ್ಥರ ವರೆಗಿನವರ ಮುಂದೆ ನನ್ನ ಅಹವಾಲನ್ನು ಅರ್ಪಿಸಲು ಬೇಕಾದ ಧೈರ್ಯವನ್ನು ನಾನು ಪಡೆದುಕೊಂಡಾಗಿತ್ತು.

ಚಾತ್ತಮಂಗಲ ಮತ್ತು ಕೋಝಿಕ್ಕೋಡು ಮೊದಲಾದೆಡೆಗಳ ನನ್ನ ವಿಚಾರಣೆಯನ್ನು ಕೊನೆಗಾಣಿಸಿ ನಾನು ಎರ್ನಾಕುಲಂಗೆ ಬಂದು ಸಾಹಾರ್ದ ನಿಲಯ ದಲ್ಲಿ ವಾಸಿಸತೊಡಗಿದೆ. ಅಂದು ಮನೆಯೊಳಗಿನ ಶೋಕತಪ್ತವಾದ ವಾತಾವರಣ ಯಾರನ್ನೇ ಆದರೂ ಭಯಪಡಿಸುವಂತಿತ್ತು. ನಾನು ಹಿಂತಿರುಗಿ ಬರುವವರೆಗೆ, ನಾನು ಬರುವಾಗ ರಾಜನನ್ನು ಕರೆದುಕೊಂಡು ಬರುವೆನೆಂಬ ದೂರದ ಆಸೆಯೊಡನೆ ಮನೆಯವರೆಲ್ಲರೂ ಕಾಯುತ್ತಿದ್ದರು. ಅವನಿಲ್ಲದೆ ಖಾಲಿ ಕೈಯೊಡನೆ ಮನೆಗೆ ಹಿಂತಿರುಗಲು ನನಗೆ ಭಯವಾಯಿತು.

ಸಾಧಾರಣ ಹಲವರನ್ನು ಪೊಲೀಸರು ಹಿಡಿದು ಕೊಂಡೊಯ್ಯುತ್ತಿದ್ದರು. ಹಲವರು ಪೊಲೀಸರ ಮರ್ದನದಿಂದ ಸತ್ತಿದ್ದರು. ಇದೆಲ್ಲವೂ ನಮ್ಮ ನಾಡಿನಲ್ಲಿ ಅಪರೂಪವೇನೂ ಅಲ್ಲ, ಮತ್ತೆ ಇದಕ್ಕೆ ಮಾತ್ರ ಇಷ್ಟೊಂದು ವಿಶೇಷತೆ ಯಾಕೆಂಬ ಪ್ರಶ್ನೆ ಎದ್ದೇಳಬಹುದು. ಪ್ರಶ್ನೆ ನ್ಯಾಯವಾದುದೇ. ಆದರೆ ಇಂತಹ ಘಟನೆಗಳಲ್ಲಿ ಹಿಡಿದು ಕೊಂಡೊಯ್ಯುವ ಜನರ ಕುರಿತು ಅವರ ಹೆತ್ತವರಿಗೆ ಅದನ್ನು ತಿಳಿಯುವ ಹಾದಿ ಇತ್ತು, ನನ್ನ ಮಗನ ವಿಷಯದಲ್ಲಿ ಪರಿಸ್ಥಿತಿ ಭಿನ್ನವಾಗಿತ್ತು.

ಪೊಲೀಸರು ಬಂಧಿಸಿ ಕರೆದೊಯ್ದ ರಾಜನ ಕುರಿತು ಯಾವ ವಿವರ ತಿಳಿಸಲು ಕೂಡಾ ಮುಖ್ಯಮಂತ್ರಿ ಅಚ್ಯುತ-ಮೇನೋನರಿಂದ ತೊಡಗಿ ಕಾಯಣ್ಣ ಸರ್ಕಲ್ ಇನ್ಸ್‌ಪೆಕ್ಟರ್ ಶ್ರೀಧರನವರೆಗೆ ಯಾರೂ ಸಿದ್ಧರಾಗಲಿಲ್ಲ. ನಾನು ಕೊಟ್ಟ ಹೇಬಿಯಸ್ ಕಾರ್ಪಸ್ ಅರ್ಜಿಯ ತೀರ್ಪಿನನುಸಾರ ಅವನನ್ನು ನ್ಯಾಯಾಲಯದಲ್ಲಿ ಹಾಜರುಪಡಿಸಲು ಸರಕಾರ ಸೋತಾಗ ಮಾತ್ರ ಅವನ ಕುರಿತ ವಾಸ್ತವತೆ ಏನೆಂದು ನಮಗರಿವಾಯಿತು. ಈ ವಿಷಯದಲ್ಲಿ ಅಚ್ಯುತ ಮೇನೋನ್ ಮತ್ತು ಕರುಣಾಕರ ನನ್ನೊಡನೆ ತೋರಿದ ಕ್ರೌರ್ಯ ನನ್ನನ್ನು ಅತ್ಯಧಿಕ ನೋಯಿಸಿತು. ಇವರಾರಿಗೂ ಇದು ಮೊದಲೇ ತಿಳಿದಿರಲಿಲ್ಲ ಎಂದರೆ ಅದರ ಅರ್ಥ




'ವಿಚಾರಿಸಿಕೊಳ್ಳಿ' ಅಂದದ್ದು ಭೂ ಕಬಳಿಕೆ ಬಗ್ಗೆ ಅಲ್ಲ



ರಾಮಚಂದ್ರಾಪುರ ಮಠದ ರಾಘವೇಶ್ವರ ವಿಶ್ವ ಗೋ ಸಮ್ಮೇಳನ ಮಾಡಿ ಹೇಗೆ ಪರಿಸರಕ್ಕೆ ಅಪಾರ ಹಾನಿಯನ್ನುಂಟು ಮಾಡಿದ, ಹೇಗೆ ಕೋಟ್ಯಾಂತರ ರೂಪಾಯಿಗಳನ್ನು ದೋಚಿದ ಎಂದು ಪತ್ರಿಕೆಯಲ್ಲಿ ವಿವರವಾಗಿ ಬರೆದಿದ್ದೆವು. ರಾಘವೇಶ್ವರನ ಈ ಘನಂದಾರಿ ಕೆಲಸಕ್ಕೆ ಯಡ್ಡಿ 2 ಕೋಟಿ ರೂಪಾಯಿ ಸಾರ್ವಜನಿಕ ಹಣವನ್ನು ಕೊಟ್ಟದ್ದರ ಬಗ್ಗೆಯೂ ಸಾರ್ವಜನಿಕರ ಗಮನ ಸೆಳೆದಿದ್ದೆವು. ಈ ರೀತಿ ಸಾರ್ವಜನಿಕರ ತೆರಿಗೆ ಹಣವನ್ನು ತಮ್ಮಪ್ಪನ ಆಸ್ತಿ ಎಂಬಂತೆ ಯಡ್ಡಿ ಕಂಡಕಂಡ ಮಠಗಳಿಗೆ ಕೊಡುತ್ತಿರುವುದರ ವಿರುದ್ಧ ಜನ 'ಛೀ... ಥೂ...' ಎಂದು ಕ್ಯಾಕರಿಸಿ ಉಗಿಯುತ್ತಿದ್ದರೆ ಅದನ್ನು ತನ್ನ ಬಿಳಿ ಪಂಚೆಯಿಂದ ಒರೆಸಿಕೊಳ್ಳುತ್ತ ತನಗೇನೂ ತೊಂದರೆಯಿಲ್ಲ ಎನ್ನುತ್ತಾ ಈ ಯಡ್ಡಿ ಮಹಾನುಭಾವ ಮತ್ತೊಂದು ಘನಂದಾರಿ ಕೆಲಸವನ್ನು ಮಾಡಿದ್ದಾನೆ. ಅದೇನೆಂದರೆ, ರಾಮಚಂದ್ರಾಪುರ ಮಠದ ರಾಘವೇಶ್ವರನಿಗೆ ಮೊನ್ನೆ ಮತ್ತೆ 85 ಲಕ್ಷ ರೂಪಾಯಿ ಸಾರ್ವಜನಿಕ ಹಣವನ್ನು ಕೊಟ್ಟು ಅಡ್ಡಡ್ಡ ಬಿದ್ದು ಬಂದಿದ್ದಾನೆ.

ಇದನ್ನು ಶಿವಮೊಗ್ಗೆಯ ಯಾರೋ ಪ್ರಜ್ಞಾವಂತ ಪತ್ರಕರ್ತರು ಸಾರ್ವಜನಿಕವಾಗಿಯೇ ಪ್ರಶ್ನಿಸಿದರೆ, "ಯಾರ್ಯಾಗಿಗೋ ದುಡ್ಡು ಕೊಡ್ತೇವೆ, ಸರ್ಕಾರದ ದುಡ್ಡು ಎಲ್ಲೆಲ್ಲೋ ಪೋಲಾಗುತ್ತೆ, ರಾಘವೇಶ್ವರರಿಗೆ ಒಳ್ಳೆ ಕೆಲಸ ಮಾಡೋದಕ್ಕೆ 85 ಲಕ್ಷ ಕೊಟ್ಟರೆ ಏನಾಗುತ್ತೆ ಬಿಡ್ರಿ" ಎಂದು ತನ್ನ ಕೃತ್ಯವನ್ನು ಮತ್ತೊಮ್ಮೆ ಸಮರ್ಥಿಸಿಕೊಂಡಿದ್ದಾನೆ. ರಾಘವೇಶ್ವರ ಅದೆಂಥಾ ಒಳ್ಳೆ ಕೆಲಸ ಮಾಡಿದ್ದಾನೆಂದು ಪತ್ರಿಕೆ ವಿವರವಾಗಿ ಬಯಲಿಗೆಳೆದಿದೆ. ಆತ ಮಾಡಿದ ಪರಿಸರ ನಾಶವನ್ನು ಸರಿಪಡಿಸುವುದಕ್ಕೆ ಅದೆಷ್ಟು ವರ್ಷಗಳು ಬೇಕಾಗುತ್ತವೆಯೋ ಗೊತ್ತಿಲ್ಲ, ಅದೆಲ್ಲ ಯಡ್ಡಿಗೆ ಒಳ್ಳೆ ಕೆಲಸವಾಗಿ ಕಂಡಿದೆ.



ರಾಘವೇಶ್ವರ ಸುತ್ತಮುತ್ತಲಿನ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡು ಬೇಲಿ ಹಾಕಿಕೊಂಡಿದ್ದಾನೆ. ಆ ಜಮೀನು ತನ್ನದೇ ಎಂದು ಬಿಂಬಿಸುವುದಕ್ಕಾಗಿ ಅಲ್ಲಿ ಕಟ್ಟಡಗಳನ್ನು ಕಟ್ಟಿಸಿಕೊಂಡಿದ್ದಾನೆ. ಈ ಬಗ್ಗೆ ಸಾಗರ, ಶಿವಮೊಗ್ಗೆಯ ಪ್ರಜ್ಞಾವಂತ ನಾಗರಿಕರು, ಸಂಘ ಸಂಸ್ಥೆಗಳು ಪ್ರತಿಭಟನೆ ಮಾಡಿದಾಗ ಕಂದಾಯ ಇಲಾಖೆಯ ಜಾಮ್‌ದಾರ್ ಎಂಬ ದಕ್ಷ ಅಧಿಕಾರಿ ಹೊಸನಗರ ತಾಲ್ಲೂಕು ತಹಶೀಲ್ದಾರರಿಗೆ ಈ ವಿಚಾರವನ್ನು ಪರಿಶೀಲನೆ ಮಾಡುವಂತೆ ಆದೇಶಿಸಿದ್ದರು. ಅದರ ಪ್ರಕಾರ ತಹಶೀಲ್ದಾರರು ಪರಿಶೀಲಿಸಿ ರಾಘವೇಶ್ವರ ಸರ್ಕಾರಿ ಜಮೀನನ್ನು ಒತ್ತುವರಿ ಮಾಡಿಕೊಂಡಿರುವುದು ನಿಜ ಎಂದು ದಾಖಲೆಗಳನ್ನು ಮಾಧ್ಯಮದವರಿಗೆ ಕೊಟ್ಟಿದ್ದರು.

ಅವರುಂಚು ಅಲಂಕರಿಸಿದ್ದ ಹುದ್ದೆಯನ್ನು ಅಲಂಕರಿಸಲು ಅವರಿಗೆ ಅರ್ಹತೆ ಇರಲಿಲ್ಲ ಎಂದು ಹೇಳಲು ನಾನೆಂದೂ ಹಿಂಜರಿಯಲಾರೆ.

ಪೊಲೀಸ್ ಬಂಧಿಸಿ ಕರೆದೊಯ್ದ ಮಗನ ಕುರಿತು ಯಾವ ವಿವರವೂ ದೊರೆಯದಿದ್ದರೆ ಅವನ ತಂದೆ- ತಾಯಿಗಳು ಮತ್ತು ಇತರ ಬಂಧುಗಳಿಗೆ ಅದು ಎಷ್ಟೊಂದು ವೇದನಾಜನಕವಾಗಿರುತ್ತದೆ ಎಂಬುದು ಅದನ್ನನುಭವಿಸಿದವರಿಗೆ ಮಾತ್ರ ಗೊತ್ತು.

ನನಗೆ ಸಂಬಂಧಪಟ್ಟಂತೆ, ದೇಹದಲ್ಲಿ ಸೂಜಿ ಚುಚ್ಚುತ್ತಿರುವಂತಹ ಒಂದು ನೋವನ್ನು ನಾನು ಯಾವಾಗಲೂ ಅನುಭವಿಸುತ್ತಿದ್ದೆ. ಊಟಕ್ಕೆ ಕುಳಿತುಕೊಳ್ಳುವಾಗ ನಾನು ಅವನನ್ನು ಜ್ಞಾಪಿಸಿಕೊಳ್ಳುತ್ತಿದ್ದೆ. ಆಗ ಆಹಾರ ನುಂಗಲಾಗುತ್ತಿರಲಿಲ್ಲ. ನಿದ್ರಿಸುವಾಗಲೂ ಅವನ ನೆನಪುಗಳು ನನ್ನನ್ನು ಮುತ್ತಿಕೊಳ್ಳುತ್ತಿದ್ದವು. ಕಠಿಣವಾದ ಬಿಸಿಯಿಂದ ಕಂಪಿಸುವ ಒಂದು ಲೋಹದ ತುಂಡಿನಂತೆ ನನ್ನ ಆತ್ಮ ಯಾವಾಗಲೂ ಹೊರಳಾಡುತ್ತಿತ್ತು. ನಾನು ಸಾಕಷ್ಟು ಪ್ರಯತ್ನಿಸದ ಕಾರಣ ರಾಜನನ್ನು ಕಂಡುಹಿಡಿಯಲು ಸಾಧ್ಯವಾಗಲಿಲ್ಲ ಎಂದು ಕೂಡಾ ನನ್ನ ಪ್ರೀತಿಪಾತ್ರರು ದೂರಿದರು. ರಾಜನಿಲ್ಲದ ಸೌಹಾರ್ದ ನಿಲಯ ಹಲವರಿಗೆ ಅಸ್ವಸ್ಥತೆಯಿಂದ ಕೂಡಿದ ಒಂದು ನೋಟದಂತಾಯಿತು. ಸೌಹಾರ್ದ ನಿಲಯಕ್ಕೆ ವಿದ್ಯಾರ್ಥಿಗಳೂ ಕೂಡಾ ತಡೆಯಿಲ್ಲದೆ ಬರುತ್ತಿದ್ದರು. ಆದರೆ ರಾಜನು ಕಣ್ಮರೆಯಾದ ಬಳಿಕ ಭೀಕರವಾದ ಒಂದು ನಿಶ್ಯಬ್ಧತೆ ಸೌಹಾರ್ದ ನಿಲಯವನ್ನು ಆವರಿಸಿಕೊಂಡಿತು.

ಮನೆಯೊಳಗಿನ ಪರಿಸ್ಥಿತಿ ಇದಾದರೆ, ಹೊರಗೆ ಹೋದಾಗ ಜನರು ನನ್ನನ್ನು ಕಂಡೊಡನೆ ದೂರ ಸರಿಯುತ್ತಿದ್ದರು. ಅವರ ದೃಷ್ಟಿಯಲ್ಲಿ ನಾನೋರ್ವ ನಕ್ಸಲೈಟ್‌ನ ತಂದೆಯಾಗಿದ್ದೆ. ನಾನು ಕೂಡಾ ಜನಗಳೊಡನೆ ಮಾತನಾಡಲೂ ಭಯಪಟ್ಟೆ. ಅವರು ಏನೆಂದುಕೊಳ್ಳುವರೋ ಎಂಬ ಭಯ ನನ್ನದಾಗಿತ್ತು.

ಕೆಲವೊಮ್ಮೆ, ನಾನು ಪ್ರೇಂಚಂದರ ಕೆಲವು ಕಥಾಪಾತ್ರಗಳಂತಿದ್ದೆ ಎಂದು ನನಗನ್ನಿಸುತ್ತಿತ್ತು. 'ಪರೀಕ್ಷೆ' ಎಂಬ ಕಥೆಯಲ್ಲಿ ಅವರು ಚಿತ್ರೀಕರಿಸಿದ ಸ್ವಾತಂತ್ರ್ಯ ಹೋರಾಟಗಾರನಾಗಿ ನನ್ನನ್ನು ನಾನು ಚಿತ್ರಿಸುತ್ತಿದ್ದೆ. ಜನಗಳು ನನ್ನನ್ನು ಅಷ್ಟೊಂದು ಭಯದಿಂದ ತಿರಸ್ಕರಿಸಲಾರಂಭಿಸಿದರು.

ಹಾಗಿದ್ದಾಗ ನನಗೆ ಕಾಮ್ರೇಡ್ ಎ.ಕೆ.ಗೋಪಾಲನ್ ಅವರಿಂದ ಒಂದು ಪತ್ರ ದೊರೆಯಿತು. ಸೌಹಾರ್ದ ನಿಲಯಕ್ಕೆ ಹರಿದು ಬಂದ ಕಾರುಣ್ಯದ ಚಂದ್ರಮನಂತಾಗಿತ್ತು ಆ ಪತ್ರ.

ನನ್ನ ವಿಜ್ಞಾಪನೆಯನ್ನು ಪ್ರಧಾನ ಮಂತ್ರಿ ಇಂದಿರಾಗಾಂಧಿಗೆ ಕಳುಹಿಸಿ ಕೊಟ್ಟಿರುವುದಾಗಿಯೂ, ರಾಜನನ್ನು ಕಂಡುಹಿಡಿಯಲು ಕ್ರಮ ಕೈಗೊಳ್ಳಬೇಕೆಂದು ಶಕ್ತಿಯುತವಾಗಿ ಬರೆದಿರುವುದಾಗಿಯೂ ಎ.ಕೆ.ಜಿ. ಆ ಪತ್ರದಲ್ಲಿ ಬರೆದಿದ್ದರು. ರಾಜನ್ ಘಟನೆಯ ಕುರಿತು ನಾನು ಹಲವರಿಗೆ ವಿಜ್ಞಾಪನಾ ಪತ್ರವನ್ನು ಕಳುಹಿಸಿದ್ದೆ. ಆದರೆ ಯಾರಿಂದಲೂ ಒಂದೇ ಒಂದು ಉತ್ತರವೂ ಬಂದಿರಲಿಲ್ಲ. ಹಾಗಿರುವಾಗ ಪ್ರತಿಪಕ್ಷ ನಾಯಕರಾದ ಎ.ಕೆ.ಜಿಯವರೇ ರಾಜನ ವಿಷಯವನ್ನೆತ್ತಿಕೊಂಡರೆನ್ನುವುದು ನನಗೆ ಆಶ್ವಾಸನೆ ನೀಡಿತು. ನನ್ನ ಕುಟುಂಬದವರಿಗೂ ಬಹಳ ಸಂತೋಷವಾಯಿತು.

ಕೇಂದ್ರ ಗೃಹಮಂತ್ರಿ ಬ್ರಹ್ಮಾನಂದರೆಡ್ಡಿ ಹಾಗೂ ಲೋಕಸಭೆ, ರಾಜ್ಯಸಭೆ ಮುಂತಾದೆಡೆಗಳಿಗೆ ನಾನು ಹಲವು ಬಾರಿ ನಿವೇದನೆ ಕಳುಹಿಸಿದ್ದೆ. ಆದರೆ ಈ ವೃದ್ಧನ ವಿಜ್ಞಾಪನೆಗೆ, ಪ್ರಜಾಸತ್ತೆಗೆ ವಿರುದ್ಧವಾದ ರೀತಿಯಲ್ಲಿ ಇವರೆಲ್ಲರೂ ಪ್ರತಿಕ್ರಿಯೆ ನೀಡಿದ್ದರು. ಎ.ಕೆ.ಜಿ.ಯವರು ತಮ್ಮ ಪದವಿ ಹಾಗೂ ಬದುಕನ್ನು ದುರಂತವನ್ನನುಭವಿಸುತ್ತಿರುವವರಿಗಾಗಿ ಮೀಸಲಿಟ್ಟಂತಹ ಓರ್ವ ವ್ಯಕ್ತಿಯಾಗಿದ್ದರಲ್ಲ? ಆದರೆ ನನ್ನ ಮಗನ ವಿಷಯದಲ್ಲಿ ನನಗೆ ಇನ್ನಷ್ಟು ನೆರವು ನೀಡಲು ಅವರಿಂದ ಸಾಧ್ಯವಾಗಲಿಲ್ಲ. ಅದಕ್ಕೆ ಮೊದಲೇ ಅವರು ಈ ಜಗತ್ತನ್ನು ಬೀಳ್ಕೊಟ್ಟರು. ಎ.ಕೆ.ಜಿ.ಯವರನ್ನು ಮುಖತಃ ಭೇಟಿಯಾಗಿ ಕೃತಜ್ಞತೆ ಸಲ್ಲಿಸಬೇಕೆಂಬ ಆಕಾಂಕ್ಷೆ ನನಗಿತ್ತು. ಅದನ್ನು ನೆರವೇರಿಸಲು ಸಾಧ್ಯವಾಗಲಿಲ್ಲ ಎಂಬ ವಿಷಾದ ಇಂದಿಗೂ ನನ್ನ ಮನದಾಳದಲ್ಲಿ ತಂಗಿ ನಿಂತಿದೆ.

(ಮುಂದುವರೆಯುತ್ತದೆ)

ಯಡ್ಡಿ ನಿಜವಾಗಿಯೂ ಒಬ್ಬ ಸಭ್ಯ ರಾಜಕಾರಣಿಯಾಗಿದ್ದರೆ ಆ ತಹಶೀಲ್ದಾರರಿಗೆ ಮತ್ತು ಪರಿಶೀಲನೆ ಮಾಡಲು ಹೇಳಿದ ಜಾಮ್‌ದಾರ್ ಎಂಬ ಅಧಿಕಾರಿಗೆ ಶಹಬ್ಬಾಸ್ ಹೇಳಿ ಪ್ರೋತ್ಸಾಹಿಸಬೇಕಿತ್ತು. ಆದರೆ, ಯಡ್ಡಿ ಹಾಕಿಕೊಂಡಿರುವ ಚೆಡ್ಡಿ ಅದಕ್ಕೆ ಅವಕಾಶ ಕೊಡಬೇಕಲ್ಲ? ಈಗ ಆತ ತಹಶೀಲ್ದಾರರ ವಿರುದ್ಧವೇ ಹರಿ ಹಾಯ್ದಿದ್ದಾನೆ. "ಪರಿಶೀಲನೆ ಮಾಡಲು ತಹಶೀಲ್ದಾರರಿಗೆ ಯಾವನ್ರೀ ಹೇಳಿದ್ದು? ಅವನನ್ನು ಒಂದಿಷ್ಟು ವಿಚಾರಿಸಿಕೊಳ್ರಿ" ಎಂದು ಸಾರ್ವಜನಿಕವಾಗಿಯೇ ಹರಿಹಾಯ್ದಿದ್ದಾನೆ.

ಯಡ್ಡಿಯು 'ವಿಚಾರಿಸಿಕೊಳ್ರಿ' ಎಂಬುದರ ಅರ್ಥವನ್ನು ವಿಶೇಷವಾಗಿ ವಿವರಿಸಬೇಕಿಲ್ಲ. ಈ ಹಿಂದೆ ಪೇಜಾವರರ ವಿರುದ್ಧ ದೂರು ಕೊಟ್ಟಿದ್ದರು ಎಂಬ ಕಾರಣಕ್ಕಾಗಿ ಪ್ರೊ. ವೆಂಕಟೇಶ್ ಎಂಬುವರನ್ನು 'ವಿಚಾರಿಸಿಕೊಳ್ರಿ' ಎಂದು ಇದೇ ಯಡ್ಡಿ ಹೇಳಿದ್ದ. ಅದನ್ನೇ ಕಾಯುತ್ತಿದ್ದ ಪೊಲೀಸ್ ಪಡೆಗಳು ವೆಂಕಟೇಶ್ ಮತ್ತವರ ಅಕ್ಕನನ್ನು ಬಂಧಿಸಿ ಕೊಡಬಾರದಷ್ಟು ಚಿತ್ರಹಿಂಸೆಗಳನ್ನು ಕೊಟ್ಟಿದ್ದರು. ಈಗ ತಮ್ಮ ಕರ್ತವ್ಯವನ್ನು ಪ್ರಾಮಾಣಿಕವಾಗಿ ನಿಭಾಯಿಸಿದ್ದಕ್ಕಾಗಿ ತಹಶೀಲ್ದಾರರನ್ನು 'ವಿಚಾರಿಸಿಕೊಳ್ರಿ' ಎಂದು ಯಡ್ಡಿ [illegible]ರಿಸುತ್ತಾನೆಂದರೆ ಈತ ಪೂಜಾಪುಷ್ಕ ದೇಶದೊಳಗಿನ ರಾಜಕಾರಣಿ [illegible]ಸುತ್ತದೆಯೇ?

ಚೆಡ್ಡಿಗಳು ಕಟ್ಟಲು ಹೊರಟಿರುವ ಫ್ಯಾಸಿಸ್ಟ್ ಪ್ರಭುತ್ವದ ಭ್ರೂಣ [illegible] ಯಡ್ಡಿಯಂಥ ಚೆಡ್ಡಿಗಳ ಮಾತುಗಳಲ್ಲಿ ಕಾಣಿಸುತ್ತದೆ ಎಂದರೇನೇ [illegible] ಎನಿಸುತ್ತದೆ.

■



ಹುಬ್ಬಳ್ಳಿ ಲಾಕಪ್ ಡೆತ್

ಉರುಳಿತೊಂದು ದಲಿತನ ಹೆಣ

ಹುಬ್ಬಳ್ಳಿ ಪೊಲೀಸರ ಅಟ್ಟಹಾಸಕ್ಕೆ ಮತ್ತೊಂದು ದಲಿತ ಹೆಣ ಉರುಳಿದೆ. ಈ ಬಾರಿ ಪೊಲೀಸರ ದೌರ್ಜನ್ಯಕ್ಕೆ ಬಲಿಯಾದವನು ಅಮಾಯಕ ದಲಿತ ಯುವಕ ಗಿರೀಶ್. ಆತ ಮಾಡಿದ ಮಹಾಪರಾಧ ಎಂದರೆ ಇಸ್ಪೀಟು ಆಡುತ್ತಿದ್ದವರನ್ನು ನೋಡುತ್ತಾ ನಿಂತಿದ್ದು.

ಹಾಗೆ ನೋಡಿದರೆ ಲಾಕಪ್ ಡೆತ್ ಮಾಡುವುದರಲ್ಲಿ ಹುಬ್ಬಳ್ಳಿ ಪೊಲೀಸರು ಬಹಳ ನಿಸ್ಸೀಮರು. ಈ ಹಿಂದೆ ನಗರದ ನೇಕಾರ ನಗರದಲ್ಲಿಯ ಅಂಗಡಿಯಲ್ಲಿ ಬಟ್ಟೆ ಕದ್ದ ಎಂಬ ಆರೋಪದ ಮೇಲೆ ಪೊಲೀಸರು ಅರೆಸ್ಟ್ ಮಾಡಿದ ಆರೋಪಿಗಳನ್ನು ಹಿಗ್ಗಾಮುಗ್ಗಾ ಥಳಿಸಿ ಯಮಲೋಕ ಸೇರಿಸಿದ್ದರು. ನಂತರದಲ್ಲಿ ಕದ್ದ ಬಂಗಾರವನ್ನು ಖರೀದಿಸಿದ ಎಂಬ ಕಾರಣಕ್ಕೆ ಟೌನ್ ಪೊಲೀಸರು ಮತ್ತೊಬ್ಬನನ್ನು ಲಾಕಪ್ಪಿನಲ್ಲಿಯೇ ಕೊಂದು ಹಾಕಿದ್ದರು. ಈಗ ಅಮಾಯಕ ದಲಿತ ಯುವಕ ಗಿರೀಶ್‌ನನ್ನು ಕೊಂದು ತಮ್ಮ ಕೀರ್ತಿಯ ಕಿರೀಟಕ್ಕೆ ಮತ್ತೊಂದು ಗರಿ ಸೇರಿಸಿಕೊಂಡಿದ್ದಾರೆ.

ನಡೆದದ್ದು ಹೀಗೆ...

ಲಕ್ಷ್ಮವ್ವ ಎಂಬ ಹುಬ್ಬಳ್ಳಿಯ ದಲಿತ ವಿಧವೆಯ ಏಕೈಕ ಪುತ್ರನಾದ 27ರ ವಯಸ್ಸಿನ ಗಿರೀಶ್ ರಂಗಪ್ಪ ಶಿಗ್ಗಾಂವ್ ಅವತ್ತು ಬೆಂಗೇರಿಯಲ್ಲಿ ತನ್ನ ಗೆಳೆಯರು ಇಸ್ಪೀಟ್ ಆಡುವುದನ್ನು ನೋಡುತ್ತಾ ನಿಂತಿದ್ದ. ಯಾರೋ ಪೊಲೀಸರಿಗೆ ತಿಳಿಸಿದ್ದೇ ತಡ ಸ್ಟೇಷನ್‌ನಿಂದ ಆಟೋದಲ್ಲಿ ಮೂರ್ನಾಲ್ಕು ಜನ ಪೊಲೀಸರು ಬಂದಿದ್ದಾರೆ. ಪೊಲೀಸರನ್ನು ನೋಡಿದ ತಕ್ಷಣವೇ ಇಸ್ಪೀಟ್ ಆಡುತ್ತಿದ್ದವರು ಚೆಲ್ಲಾಪಿಲ್ಲಿಯಾಗಿ ಓಡಿಹೋಗಿದ್ದಾರೆ. ಆದರೆ, ತಾನೇನು ಆಡುತ್ತಿಲ್ಲವಲ್ಲ ಎಂಬ ಧೈರ್ಯದಿಂದ ಓಡಿಹೋಗದ ಗಿರೀಶ್‌ನನ್ನೇ ಎತ್ತಿಹಾಕಿಕೊಂಡು ಸ್ಟೇಷನ್‌ಗೆ ಒಯ್ದಿದ್ದಾರೆ.



ಲಾಕಪ್ ಡೆತ್‌ಅನ್ನು ವಿರೋಧಿಸುತ್ತಿರುವ ಉದ್ರಿಕ್ತ ಜನ

ತಾವೇನೋ ಭಾರಿ ಡಕಾಯಿತನನ್ನು ಹಿಡಿದವರಂತೆಯೋ ಅಥವಾ ಭೀಕರ ಟೆರರಿಸ್ಟ್‌ನನ್ನು ಹಿಡಿದವರಂತೆಯೋ ಧಾರವಾಡ, ಬಂಡೆಪ್ಪ ಅಗಸಿಮನಿ, ಬಾಬು ಅಗಸರ್ ಎಂಬ ಆ ಮೂರೂ ಜನ ಪೊಲೀಸರು ಅಮಾಯಕ ಗಿರೀಶ್ ಮೇಲೆ ಎರಗಿ ಹಿಗ್ಗಾಮುಗ್ಗಾ ಥಳಿಸಿದ್ದಾರೆ. ಪೊಲೀಸರ ದೌರ್ಜನ್ಯ ಹೇಗಿತ್ತೆಂದರೆ ಕ್ಷಣಾರ್ಧದಲ್ಲಿ ಗಿರೀಶ್ ಕೊನೆಯುಸಿರೆಳೆದಿದ್ದಾನೆ.

ಯಾವಾಗ ಗಿರೀಶ್ ಸತ್ತ ಎಂಬುದು ಪೊಲೀಸರಿಗೆ ಮನವರಿಕೆಯಾಯಿತೋ ತಡಮಾಡದೆ ಅವನ ಹೆಣವನ್ನು ಆಟೋದಲ್ಲಿ ಹಾಕಿಕೊಂಡು ಬೆಂಗೇರಿ ಸೋಡಾ ಫ್ಯಾಕ್ಟರಿ ಹತ್ತಿರ ಎಸೆದು ಹೊರಟು ಹೋಗಿದ್ದಾರೆ.



ನಾರಾಯಣ ನಡುಮನಿ

ವಾಸ್ತವದಲ್ಲಿ ಯಾವಾಗ ಪೊಲೀಸರು ಗಿರೀಶ್‌ನನ್ನು ಎತ್ತಿ ಹಾಕಿಕೊಂಡರೋ ಆಗಲೇ ಇಸ್ಪೀಟ್ ಆಡುವುದನ್ನು ಬಿಟ್ಟು ಓಡಿಹೋಗಿದ್ದ ಅವನ ಸ್ನೇಹಿತರು ಮರೆಯಲ್ಲಿಯೇ ನಿಂತು ಅದನ್ನೆಲ್ಲಾ ನೋಡುತ್ತಿದ್ದರು. ನಂತರ ಅವರು ಪೊಲೀಸರ ಆಟೋವನ್ನು ಸ್ಟೇಷನ್ ತನಕ ಹಿಂಬಾಲಿಸಿದ್ದಾರೆ. ಸ್ಟೇಷನ್ ಒಳಗೆ ಗಿರೀಶ್‌ಗೆ ಕೊಡುತ್ತಿದ್ದ ಚಿತ್ರಹಿಂಸೆಯನ್ನು ಹೊರಗಿ ನಿಂದಲೇ ಕೇಳಿಸಿಕೊಂಡಿದ್ದಾರೆ. ಕೆಲವೇ ಕ್ಷಣಗಳಲ್ಲಿ ಮತ್ತೆ ಗಿರೀಶ್‌ನನ್ನು ಕರೆದುಕೊಂಡು ಆಟೋದಲ್ಲಿ ಬೆಂಗೇರಿ ಸೋಡಾ ಫ್ಯಾಕ್ಟರಿ ಹತ್ತಿರ ಬಿಸಾಡಲು ಒಯ್ದಾಗ ಆಗಲೂ ಅವರು ಹಿಂಬಾಲಿಸಿದ್ದಾರೆ. ಪೊಲೀಸರು ಗಿರೀಶ್‌ನ ಹೆಣವನ್ನು ಬಿಸಾಡಿ ಹೋದ ನಂತರ ಅಲ್ಲಿಗೆ ಕೂಡಲೇ ಬಂದು ಅವನು ಮೂರ್ಛೆ ಹೋಗಿರಬಹುದು ಎಂದುಕೊಂಡು ಮುಖಕ್ಕೆ ನೀರು ಚಿಮುಕಿಸಿ ಎಚ್ಚರಿಸಲು ಪ್ರಯತ್ನಿಸಿದ್ದಾರೆ. ಪಾಪ ಆತ ಬದುಕಿದ್ದರೆ ತಾನೆ ಎಚ್ಚರಗೊಳ್ಳೋದು?

ಒಂದು ಗುಂಪು ಗಿರೀಶ್‌ನ ಬಾಡಿಯನ್ನು ಆಟೋದಲ್ಲಿ ಹಾಕಿಕೊಂಡು ಕಿಮ್ಸ್‌ಗೆ ಹೋದರೆ ಗಿರೀಶ್ ಸತ್ತು ಆಗಲೇ ಒಂದು ಗಂಟೆಯಾಗಿದೆ ಎಂದು ಡಾಕ್ಟರ್ ಹೇಳಿದ್ದಾರೆ. ಆತ ಸತ್ತಿರುವುದು ಮನವರಿಕೆಯಾಗುತ್ತಿದ್ದಂತೆ ನೂರಾರು ಜನರ ಇನ್ನೊಂದು ಗುಂಪು ಸ್ಟೇಷನ್‌ಗೆ ದಾಳಿಯಿಟ್ಟು ಕುರ್ಚಿ, ಗಾಜು, ಏನನ್ನೂ ಬಿಡದೇ ಇಡೀ ಸ್ಟೇಷನ್‌ನನ್ನು ಧ್ವಂಸ ಮಾಡಿ ಹಾಕಿತು.

ಇತ್ತ ಲಾಕಪ್ ಡೆತ್ ನಡೆದು ಇಡೀ ಏರಿಯಾವೇ ಹೊತ್ತಿ ಉರಿಯುತ್ತಿದ್ದರೆ ಅತ್ತ ಡಿಸಿಪಿ ದಿಲೀಪ್ 'ವಿಜಯ ಕರ್ನಾಟಕ' ದಿನಪತ್ರಿಕೆಯ ಕಚೇರಿಯಲ್ಲಿ ಶ್ರೀಕೃಷ್ಣ ಜನ್ಮಾಷ್ಟಮಿ ಆಚರಿಸುತ್ತಿದ್ದರು. ಇನ್ನೊಂದೆಡೆಗೆ ಪೊಲೀಸ್ ಕಮೀಷನರ್ ನಾರಾಯಣ್ ನಡುಮನಿ ಎಷ್ಟು ಆಟೋಗಳನ್ನು ಹಿಡಿದಿದ್ದೀರಿ ಎಂದು ವಿಚಾರಿಸುತ್ತಾ ಬರಲಿರುವ ಆದಾಯದ ಬಗ್ಗೆ ಲೆಕ್ಕಾಚಾರ ಹಾಕುತ್ತಲಿದ್ದರು. ಕೊನೆಗೆ ಕೇಶ್ವಾಪೂರ್ ಪೊಲೀಸ್ ಠಾಣೆಗೆ ಬಂದು ನೋಡಿದರೆ ನಡುಮನಿ ಸಾಹೇಬ್ರಿಗೇನೇ ದಿಗಿಲು ಹುಟ್ಟಿಸುವಂತಹ ಯುದ್ಧದ ವಾತಾವರಣ ನಿರ್ಮಾಣವಾಗಿಬಿಟ್ಟಿತ್ತು.

ಅಷ್ಟೊತ್ತಿಗಾಗಲೇ ರಾಜಕೀಯ ಪುಢಾರಿಗಳಿಗೂ ಸುದ್ದಿ ಮುಟ್ಟಿ ಅವರೂ ದೌಡಾಯಿಸಿದ್ದರು. ಏಕೆಂದರೆ, ಸ್ಥಳೀಯ ಸಂಸ್ಥೆಗಳ ಚುನಾವಣೆ ಬೇರೆ ಹತ್ತಿರ ಬರುತ್ತಿದೆ. ಈ ವಿಚಾರವನ್ನಾದರೂ ಇಟ್ಟುಕೊಂಡು ಒಂದಿಷ್ಟು ಮಿಂಚಬಹುದು ಎಂಬುದು ಅವರ ಲೆಕ್ಕಾಚಾರ. ಒಟ್ಟಿನಲ್ಲಿ ಈ ಇಶ್ಯೂವನ್ನು ಒಂದಿಷ್ಟು ಉಪಯೋಗಪಡಿಸಿಕೊಂಡು ಗಿರೀಶ್ ಪರವಾಗಿ ಮಿಂಚಿದವನೆಂದರೆ ಜೆಡಿಎಸ್‌ನ ಜಿಲ್ಲಾಧ್ಯಕ್ಷ ಶಿವು ಹಿರೇಕೆರೂರ್.

ಕೊಲೆಗಾರರಿಗೆ ನಾರಾಯಣ್ ನಡುಮನಿ ರಕ್ಷಣೆ!

ನಾರಾಯಣ ನಡುಮನಿ ಸಾಹೇಬ್ರಿಗೆ ತಮ್ಮ ಸಿಬ್ಬಂದಿ ಮಾಡಿದ ತಪ್ಪಿನ ಅರಿವಾಗಿರಬೇಕು. ಈಗಲೂ ಅವರು ಪೊಲೀಸರ ಪರ ವಹಿಸಿದರೆ ಇನ್ನೇನು ಜನರ ಎಕ್ಕಡ ಅವರ ಮೇಲೂ ಬೀಳಬಹುದೆಂಬ ಆತಂಕ ಕೂಡ ಅವರನ್ನು ಕಾಡಿರಬೇಕು. ಹಾಗಾಗಿ, ತಕ್ಷಣ ತಮ್ಮ ಮಾಮೂಲಿ ಶೈಲಿಯಲ್ಲಿ "ಇಲಾಖಾ ವಿಚಾರಣೆ, ನಿಷ್ಪಕ್ಷಪಾತ ತನಿಖೆ, ಕೃತ್ಯದಲ್ಲಿ ಭಾಗಿಯಾದ ಪೊಲೀಸರ ಅಮಾನತ್ತು, ಗಿರೀಶ್ ಕುಟುಂಬಕ್ಕೆ ಒಂದು ಲಕ್ಷ ರೂಪಾಯಿ ಪರಿಹಾರ" ಎಂದೆಲ್ಲಾ ಘೋಷಿಸಿಯೇ ಬಿಟ್ಟರು. ಹುಬ್ಬಳ್ಳಿಯ ಶವಾಗಾರದಲ್ಲಿ ರಾತ್ರಿ ಹೊತ್ತು ಮರಣೋತ್ತರ ಪರೀಕ್ಷೆಯನ್ನು ಮಾಡುವುದಿಲ್ಲ. ಆದರೆ, ನಡುಮನಿ ಸಾಹೇಬ್ರು ರಾತ್ರಿಯೇ ಅದನ್ನೆಲ್ಲಾ ಮಾಡಿಸಿ, ಅವಸರವಸರವಾಗಿ ಹೆಣವನ್ನು ಸುಡಿಸಿದ್ದನ್ನು ನೋಡಿದರೆ ಅವರ ಆತಂಕ ಅರ್ಥವಾಗುತ್ತದೆ.

ಇಲ್ಲಿ ಒಂದು ವಿಚಾರವಂತೂ ಸ್ಪಷ್ಟ. ಅದು ಪೊಲೀಸರು ಮಾಡಿದ ಕೊಲೆ. ಆರೋಪಿಗಳನ್ನು ಕೇವಲ ಅಮಾನತ್ತು ಮಾಡುವುದರಿಂದ ಅಥವಾ ಕೊಲೆಯಾದವನ ಕುಟುಂಬಕ್ಕೆ ಅಷ್ಟೋ ಇಷ್ಟೋ ಪರಿಹಾರ ಕೊಡುವುದರಿಂದ ನಾರಾಯಣ ನಡುಮನಿ ಆರೋಪಿಗಳನ್ನು ರಕ್ಷಿಸಲು ಪ್ರಯತ್ನಿಸುತ್ತಿರುವುದಂತೂ ಎದ್ದು ಕಾಣುತ್ತಿದೆ. ಅವರು ಪ್ರಾಮಾಣಿಕರೇ ಆಗಿದ್ದರೆ ಮೊಟ್ಟ ಮೊದಲು ಆರೋಪಿಗಳ ಮೇಲೇ ಐಪಿಸಿ ಸೆಕ್ಷನ್ 302ರ ಪ್ರಕಾರ ಕೊಲೆ ಕೇಸು ದಾಖಲಿಸುತ್ತಿದ್ದರು.

ತಮ್ಮದೇ ಸಿಬ್ಬಂದಿ ಮಾಡಿದ ತಪ್ಪನ್ನು ಮುಚ್ಚಿಹಾಕುವುದು ಒಂದೆಡೆಯಾದರೆ ಸಿಟ್ಟಿಗೆದ್ದ ಜನರು ಠಾಣೆಗೆ ಬಂದು ಪೀಠೋಪಕರಣಗಳನ್ನು ನಾಶಪಡಿಸಿರುವ ಘಟನೆಗೆ ಸಂಬಂಧಿಸಿದಂತೆ ಕೇಸು ಹಾಕಲೂ ಆದೇಶಿಸಿಬಿಟ್ಟರು. ಅಂದರೆ, ಅವರು ಯಾರನ್ನು ಗುರಿಮಾಡುತ್ತಿದ್ದಾರೆಂಬುದು ಎಂಥವರಿಗೂ ಅರ್ಥವಾಗುತ್ತದೆ.

ಲಕ್ಷ್ಮವ್ವನ ಬದುಕು?

ಗಂಡನನ್ನು ಕಳೆದುಕೊಂಡ ಲಕ್ಷ್ಮವ್ವನಿಗೆ ಆಸರೆಯಾಗಿದ್ದುದು ಮಗ ಗಿರೀಶ್ ಮಾತ್ರ. ಇದ್ದ ಒಬ್ಬ ಮಗಳನ್ನು ಪುಣೆಗೆ ಮದುವೆ ಮಾಡಿ ಕೊಟ್ಟಿದ್ದಾರೆ. ಬದುಕಿನ ಬಂಡಿಯನ್ನು ಎಳೆಯಲು ಆಕೆ ಆನಂದ ನಗರದಲ್ಲಿದ್ದ ತನ್ನ ಸ್ವಂತದ ಮನೆಯನ್ನು ಒತ್ತೆ ಇಟ್ಟು ಈಗ ಬಾಡಿಗೆ ಮನೆಯಲ್ಲಿ ಬದುಕುತ್ತಿದ್ದಾರೆ. ಸರಿಯಾದ ಕೆಲಸವೂ ಇಲ್ಲದೇ ನಿರುದ್ಯೋಗಿಯಾಗಿ ಅಲೆಯುತ್ತಿದ್ದ ಮಗ ಇಂದಲ್ಲ ನಾಳೆ ತಮ್ಮ ಬದುಕನ್ನು ಹಸನು ಮಾಡುತ್ತಾನೆ ಎಂದು ಕನಸು ಕಂಡಿದ್ದ ಲಕ್ಷ್ಮವ್ವ ಕನಸನ್ನು ರಾಕ್ಷಸ ಪೊಲೀಸರು ನುಚ್ಚುನೂರು ಮಾಡಿದ್ದಾರೆ. ಮುಂದೊಂದು ದಿನ ತನ್ನ ಚಿತೆಗೆ ಬೆಂಕಿ ಇಡುತ್ತಾನೆ ಎಂದುಕೊಂಡಿದ್ದ ಲಕ್ಷ್ಮವ್ವ ತನ್ನ ಮಗನ ಚಿತೆಗೆ ತಾನೇ ತನ್ನ ಕೈಯಾರೆ ಬೆಂಕಿ ಕೊಡಬೇಕಾಗಬಹುದೆಂದು ಕನಸಿನಲ್ಲೂ ಎಣಿಸಿರಲಿಲ್ಲ.

ನಾರಾಯಣ ನಡುಮನಿ ಸಾಹೇಬ್ರು ಅಂತ್ಯ ಕ್ರಿಯೆಯನ್ನು ಅದೆಷ್ಟು ತುರ್ತಿನಲ್ಲಿ ಮಾಡಿ ಮುಗಿಸಬೇಕೆಂದಿದ್ದರು ಎಂದರೆ, ಗಿರೀಶನ ಹೆಣವನ್ನು ಮನೆಯವರಿಗೂ ಕೊಡಲಿಲ್ಲ. ತಾವೇ ಖುದ್ದಾಗಿ ಹೆಣವನ್ನು ಮುಕ್ತಿಧಾಮಕ್ಕೆ ಒಯ್ದು ಎಲ್ಲಾ ವ್ಯವಸ್ಥೆ ಮಾಡಿಬಿಟ್ಟಿದ್ದರು. ಲಕ್ಷ್ಮವ್ವನನ್ನು ನೆಪ ಮಾತ್ರಕ್ಕೆ ಕರೆಸಿ ಶಾಸ್ತ್ರ ಮುಗಿಸಿಬಿಟ್ಟರು. ಈಗ ಸಂಪೂರ್ಣ ಅಂಧಕಾರದಲ್ಲಿರುವ ಲಕ್ಷ್ಮವ್ವನ ಬದುಕನ್ನು ನಡುಮನಿ ಸಾಹೇಬ್ರು ನೋಡುತ್ತಾರೆಯೇ?

ಎಲ್ಲೆ ಮೀರುತ್ತಿರುವ ಹುಬ್ಬಳ್ಳಿ ಪೊಲೀಸರಿಗೆ ಗ್ರಹಚಾರ ನೆಟ್ಟಗಿಲ್ಲ ಅಂತ ಕಾಣುತ್ತೆ. ಇವತ್ತು ಜನ ಪೊಲೀಸ್ ಠಾಣೆಗೆ ನುಗ್ಗಿ ಗಲಾಟೆ ಮಾಡಿದ್ದಾರಷ್ಟೆ. ಪೊಲೀಸರು ಹೀಗೆ ತಮ್ಮ ಅಟ್ಟಹಾಸವನ್ನು ಮುಂದುವರೆಸಿದರೆ ನಡುಮನಿ ಸಾಹೇಬ್ರನ್ನೂ ಒಳಗೊಂಡಂತೆ [illegible] ಪೊಲೀಸ್ ಪಡೆಯನ್ನು ಜನರೇ ಕಂಡಕಂಡಲ್ಲಿ ಕಲ್ಲಿನಿಂದ ಹೊಡೆಯುತ್ತಾರಷ್ಟೆ.

■ [illegible]

ರೈತ ಭೂಮಿ ಮಾರಿದ್ರೆ ತಿರಗ ತಗಳಕ್ಕಾಕದತೇನ್ನ?

ಬಯಲುಸೀಮೆಯ ಕಟ್ಟೆ ಪುರಾಣ

ಬಿ. ಚಂದ್ರೇಗೌಡ

ಊರ ಸುತ್ತ ಹೊಲಗಳು ಹಸಿರು ಮುಕ್ಕಳಿಸಿ ನಗುತ್ತಿದ್ದವು. ಇನ್ನೆರಡದ ಮಳೆ ಬಂದರೆ ಸಾಕು ರಾಗಿ ಕೈಗೆ ಬಂದಂತೆ ಎಂಬ ಭಾವದಲ್ಲಿ ಕುಳಿತಿದ್ದ ಕಾಳಮಾವನ ಪರಿವಾರ, ಆ ಎರಡದ ಮಳೆ ಕೈ ಕೊಡದಿದ್ದರೆ ಸಾಕೆಂಬ ನಿರೀಕ್ಷೆಯಲ್ಲಿಯೂ ಇರಲಾಗಿ,

"ಕುಮಾರಸ್ವಾಮಿ ಏನಂದವುನೆ ಗೊತ್ತ?" ಎಂದ ಸೀರ.

"ಏನಂದವುನೆ ಮಾವ?"

"ಅಲ್ಲಾ ಕಣೆ, ಒಂದೆರಡೆಕರೆಲಿ ರಾಗಿ ಬ್ಯಳಕಂಡ್ರೆ ರೈತ ಉದ್ಧಾರಾದನೆ ಅಂದವುನೆ."

"ಅವುನಿಗೂ ರಾಗಿ ವಲಕು ಏನೊ ಸಮಂದ" ಎಂದ ಉಗ್ರಿ.

"ಅದೇಳು ಮತ್ತೆ"

"ದ್ಯಾವೇಗೌಡ ಕಟ್ಟಿಸಿದ್ದ ಸಿನುಮ ಟಾಕೀಸ್ ನೋಡಿಕಂಡು ಯಂತ್ಯಂತವುನೂ ಸಿನುಮ ತಂದಾಕಿ ಕಾಸು ಮಾಡಿಕಂಡು ಕಡಿಗೆ ಪೆಟ್ರೋಲ್ ಬ್ಯಾಂಕ್ ತಕ್ಕಂಡು ಕೂತಗಂಡಿದ್ದ ನಾವು ನೋಡಿಲ್ವೆ? ಅಂಥೋನು ರಾಗಿವಲದ ಸುದ್ದಿ ಮಾತಾಡ್ತನೆ ಅಂದ್ರೆ ನೆಗ್ಲೆಟ್ ಮಾಡಬೇಕು" ಎಂದ ಉಗ್ರಿ.

"ರಾಗಿವಲದ ಸುದ್ದಿ ಅವುನ್ಯಾಕ್ ತಗದಾ?" ಎಂದ ಕಾಳಮಾವ.

"ರಾಗಿವಲ ಇಟಗಂಡೇನು ಮಾಡ್ತಿರಿ ಮಾರಿಬುಡಿ ಅತ್ರಗೆ ಲಕ್ಷಾಂತ್ರುಪಾಯಿ ಸಿಗತದೆ. ತಗಂಡು ಎಲ್ಲೊ ಹೋಗಿ ಕಾಲಮಾಡಿ ಅಂತನೆ ಕಣಮಾವ."

"ಅಂತ ಮಾತೇಳೋನು ವಂಶೀಕನೇನ್ನ, ಇವತ್ತು ಭೂಮಿ ಕಳಕಂಡ್ರೆ ತಿರಗ ತಗಳಕ್ಕಾದತೆ?" ಎಂದ ಕಾಳಮಾವ.

"ಇಲ್ಲೆ ಕುಂಟಗೆ ಮೂರು ಸವುರದಂಗೆ ಕೇಳ್ತ ಅವುರೆ. ಲಕ್ಷದ ಇಪ್ಪತ್ತು ಸವುರುಪಾಯಿಗೆ ಯಕರೆ ಮಾರಿದೋನು ತಿರಗ ಭೂಮಿ ತಗಳಕ್ಕಾದತೆ ಮಾವ?"

"ತಗಳಕ್ಕಾಗದಿಲ್ಲ ಬುಡು, ಅದು ಹೋದಂಗೆಯ. ಈಗ ನಾಕೊರಸದ ಹಿಂದೆ ಆ ಬಸುರಾಜು ಒಂದ್ಯಕರೆಯ ಮಗಳ ಮದಿವಿಗೋಸ್ಕರ ಕೇವಲ ಇಪ್ಪತ್ತೈದು ಸವುರಪಾಯಿಗೆ ಮಾರಿದ. ಇವತ್ತು ಅದೇ ದುಡ್ಡ ಒದಗಿಸಿ ವಲ ತಗಳಕ್ಯಾಯ್ತಾಯಿಲ್ಲ, ಇನ್ನು ಲಕ್ಷಾಂತ್ರುಪಾಯಿಗೆ ಮಾರಿದ ಭೂಮಿಯ ಯಾವ ರೈತನಾರ ತಿರಗ ಖರೀದಿ ಮಾಡ್ಯನೇನ್ನ?" ಎಂದ ಕಾಳಮಾವ.

"ಬೆಂಗಳೂರೋರು ಇಲ್ಲಿಗೆ ಬಂದು ಭೂಮಿ ಹುಡುಕ್ತ ಅವುರೆ ಗೊತ್ತೆ?" ಎಂದ ಸೀರ.

"ನಿಜ ಕಣೊ, ಒಂದು ಕ್ವಾಲಿಸ್ ಗಾಡಿ ಬಂದು ಬಾರೆಬುಗನ್ಯಲ್ಲ ಹುಡಿಕ್ಕಂಡು ತಿರುಗ್ತ ಇದ್ದತಂತೆ" ಎಂದ ಉಗ್ರಿ.

"ನಿಜವೇನ್ನ?" ಎಂದು ಜುಮ್ಮಿ ಅಚ್ಚರಿಗೊಂಡಳು.

"ಊ ಕಣೆ, ಬೆಂಗಳೂರು ಹಾಸನದ ರಸ್ತೆ ಚತುಸ್ ಪಥ ಆದತಂತೆ."

"ಅಂಗಂದ್ರೇನು?"

"ಹೋಗಕ್ಕೇ ಒಂದು ರೋಡು, ಬರಕ್ಕೇ ಒಂದು ರೋಡು ವಕ್ಕದಿಕೆ ಯರಡು ರೋಡು ಮಾಡ್ಯರಂತೆ. ಅದ್ಕೆ ಬೆಂಗಳೂರಿಂದ ಹಾಸನಗಂಟ ಭೂಮಿಬ್ಯಲೆ ಗಗನ ಮುಟ್ಯದೆ."

"ರಸ್ತೆ ಮಗ್ಲಲ್ಲೇ?"

"ರಸ್ತಿ ಮಗ್ಗುಲದಲ್ಲ, ರಸ್ತಿಗೆ ಸಮೀಪದಲ್ಲಿ ಯಾವ ಭೂಮಿನಾಗ್ಲಿ ಕೊಳ್ತರೆ. ಅಂಗೆ ಮಡಿಕಂಡಿರತರೆ. ಯಾವನಾರ ಪ್ಯಾಗುಟ್ರಿ ಹಾಕೋನು ಸಿಕ್ಕಿದ್ರೆ ಮಾರಿ ದುಡ್ಡು ತುಂಬಿ ಕೊಂಡೊಯ್ತರೆ, ಒಂದು, ಇನ್ನೊಂದೇನಪ್ಪಾ ಅಂದ್ರೆ ಸರ್ಕಾರದಿಂದ ಸಾಲ ತಗಂಡು ಪ್ಯಾಗುಟ್ರು ಹಾಕಿ ಲಾಸಾಯ್ತು ಅಂತ ಲಾಕೌಟ್ ಮಾಡಿಬುಡ್ತರೆ. ಅಂತೂ ಈಗ ಬೆಂಗಳೂರು ಜನಕೆ ಭೂಮಿ ಬೇಕಾಗ್ಯದೆ ಅದ್ಕೆ ಹುಡಿಕ್ಕಂಡು ತಿರುಗ್ತಾ ಅವುರೆ."



"ಅಲ್ಲಾ ಸ್ವಲ ಇದ್ದ ಕಾರಣಕೆ ರೈತ ನ್ಯಾಣಾಯುಸಾ ಅವುನೆ. ಅಂತದ್ರಲಿ ಇವುರು ಭೂಮಿ ಕೊಳ್ಳಕೆ ಅಂತ ಬತ್ತರಲ್ಲ ಇದಕೇನೇಳಸ?" ಎಂದ ಕಾಳಮಾವ.

"ಇಸಿಸಿ ಅವುರೇನು ಯವಸಾಯ ಮಾಡ್ಯರೆ ಮಾವ? ವ್ಯಾಪಾರ ಮಾಡ್ತರೆ, ಸೈಟ್ ಮಾಡ್ತರೆ, ಲೇಔಟ್ ಮಾಡ್ತರೆ. ಕೋಟ್ಯಾಂತ್ರುಪಾಯಿ ತುಂಬಿಕತ್ತರೆ, ಹೋಯ್ತರೆ. ವ್ಯಾಸಾಯ ಮಾಡೋನು ತಾನೆ ನ್ಯಾಣಾಯ್ಕಳನು."

"ಅಂಗರೆ ಕುಮಾರಸ್ವಾಮಿ ಹೇಳಿರದು ಸರಿ ಅನ್ನಂಗಾಯ್ತಲ್ಲಾ?"

"ಆಯ್ತಪ್ಪ, ಅವುನ ಮಾತು ನಿನಿಗೆ ಹಿತವಾದ್ರೆ ಅವುನೇಳಿದಂಗೆ ಮಾಡು ನೋಡನಾ."

"ನಾನ್ಯಾಕ್ ಮಾಡ್ಲಿ, ಮಾತಿಗೇಳಿದೆ ಕಂಡ್ಯ" ಎಂದು ಕಾಳಮಾವ ನುಣಿಚಿಕೊಂಡು ಮಾತಾಡಿದ್ದನ್ನು ನೋಡಿದ ಪಾಟಿಸ್ಸೆ.

"ಇದ್ಯಾಕ್ ದ್ವಡಪ್ಪ ಮಾತು ಬದ್ಲಾಸಂಗೆ ಕಾಣ್ತೆ?" ಎಂದುಕೊಂಡು ಬಂದ.

"ಜೆಡಿಎಸ್ ಸವಾಸಲವೇನೋ. ಜನ ಈಗಾಡಿದ ಮಾತ ಇನ್ನೊಂದು ಗಳಿಗ್ಗೆ ಅಲ್ಲಗಳಿತರೆ" ಎಂದ ಉಗ್ರಿ.

"ನಿಜ ಕಣೊ ಉಗ್ರಿ, ಈ ಜೆಡಿಎಸ್‌ನೋರು ಹೇಳತಾಯಿರೊ ಸುಳ್ಳು ನೋಡಿದ್ರೆ, ಇವುರದೇನು ನಾಲಗೆನೊ ಹಳೆ ಯಕ್ಕಡನೊ ಅನ್ನಂಗಾಗ್ಯದೆ."

"ಅದೇನು ಸುಳ್ಳೇಳಿದ್ರುಲಾ?" ಎಂದಳು ಜುಮ್ಮಿ.

"ನೋಡಕ್ಕ, ನಿಮ್ಮ ದ್ಯಾವೇಗೌಡ ಒಬ್ಬ ಕೆ.ಪಿ.ಎಸ್ಸಿ.

ಯಡೂರಿಗೆ ತಲೆ ಕೆಟ್ಟೋಗದೆ ಸಾ

'ಬುಡಿ ಸಾ ಗ್ಯಾರಂಟ ಬುಡಿಸಾ' ಅನ್ನುತ್ತಾ ತಲೆ ಒಗೆಯುತ್ತಲೇ ಒಳಗೆ ಬಂದ ಕ್ಯಾತ.

ಅಪರೂಪಂ ಚೋರ ದರ್ಶನಂ ಅಂತೆ. ಆ ರೀತಿ ಅವನ ದರ್ಶನ ಆಗಿತ್ತು.

'ಯಾವುದೋ ಗ್ಯಾರಂಟ' ಅಂದೆ.

'ಅದೇಸಾ ಯಡೂರಿಗೆ ತಲೆ ಕೆಟ್ಟೋಗದೆ ಅನ್ನೋದು ಸಾ' ಅಂದ.

'ಹೋಗೋ ತರ್ಲೆ ಬಡ್ಡೆತ್ತುದೆ.'

'ನಮ್ತಾಯಾಣೆಗೂ ನಿಜಸಾ' ಅಂದ.

ಕ್ಯಾತನ ಮಾತಿನವರಸೆಯೇ ಹೀಗೆ. ತಾಯಿಯ ಮೇಲೆ ಆಣೆ ಇಟ್ಟು ಹೇಳಿದ್ದೆಲ್ಲ ಸತ್ಯ ಆಗುವ ಹಾಗಿದ್ದರೆ ಕಲ್ಲು ಗುಂಡಿನ ಹಾಗೆ ಇರುವ ಆಕೆ ಯಾವತ್ತೊ ಶಿವನ ಪಾದ ಸೇರಬೇಕಿತ್ತು! ಅವನ ಬಾಯಿಂದ ಹೊರಬರುವ ಕೆಲವು ಪದಪುಂಜಗಳಿಗೆ ಅರ್ಥವೂ ಇರುವುದಿಲ್ಲ.

ಒಮ್ಮೆ ಹೀಗಾಯಿತು. ಆಕಸ್ಮಿಕವಾಗಿ ಅವನ ಮನೆಗೆ ಹೋಗಿದ್ದೆ. ಉಭಯ ಕುಶಲೋಪರಿ ಆಗುತ್ತಿದ್ದಂತೆ ತಟ್ಟೆಗಳಲ್ಲಿ ತಿಂಡಿಗಳ ಗುಡ್ಡೆಯೇ ಬಂದು ಕುಳಿತಿತು. ಪಿತೃಪಕ್ಷಕ್ಕಾಗಿ ಮಾಡಿದ್ದ ತಿಂಡಿಗಳಂತೆ ಅವು. ಹೊಟ್ಟೆ ಬರಿಯ ತಿಂದಿದ್ದ ತಿಂಡಿಯೇ ಅರಗಿರಲಿಲ್ಲ, ಅಂತಹದ್ದರಲ್ಲಿ ಇವು ಬೇರೆ.

'ತಗನಿಸಾ' ಅಂದ ಕ್ಯಾತ.

ಮನೆಗೆ ಬಂದಿದ್ದ ಅತಿಥಿಗೆ ಊಟ ಉಪಚಾರ ಮಾಡಲೇಬೇಕೆಂಬ ಸಂಸ್ಕೃತಿಯಲ್ಲಿ ಬೆಳೆದು ಬಂದಿದ್ದ ಮನೆ ಅದು. ನನಗೂ ಬಾಯಾಡಿಸ ಬೇಕೆಂಬ ಆಸೆ. ಹೊಟ್ಟೆ ಅದಕ್ಕೆ ಅವಕಾಶ ನೀಡುತ್ತಿರಲಿಲ್ಲ.

'ಆಗಲ್ಲ ಕಣಯ್ಯಾ' ಅಂದೆ.

'ಒಸಿ ತಗನಿಸಾ' ಕ್ಯಾತನ ಒತ್ತಾಸೆ.

'ಒಂದಿಕ್ಕಾನೂ ಜಾಗಿಲ್ಲ' ಅಂದೆ.

'ಸುಮ್ನೆ ತಗನಿಸಾ.'

'ಸಾಧ್ಯಾನೇ ಇಲ್ಲ ಕಣೊ.'

'ಏಯ್ ಈ ಬದಿವಾರ ಬಿಟ್ಟು ತಗನಿ ಸಾ' ಕ್ಯಾತನ ಒತ್ತಾಯ.

ಖಡಾಖಂಡಿತವಾಗಿ ನಿರಾಕರಿಸಿದೆ.

'ತಿಗ ಮುಚ್ಕಂಡು ತಗನಿಸಾ' ಅಂದ ಅವ!

ಇದು ಅವನು ಪ್ರೀತಿ ತೋರಿಸುವ ರೀತಿ. ಔದಾರ್ಯದ ಉರುಳು! ಈ 'ತಿಗ ಮುಚ್ಕಂಡು' ಹೇಗೆ ಅರ್ಥಹೀನವೋ ಹಾಗೇನೇ 'ನಮ್ತಾಯಾಣೆ' ಯೂ ಅರ್ಥಹೀನ.

'ಅದೇನು ಸರಿಯಾಗಿ ಬೊಗಳೊ ಬಡ್ಡೆತ್ತದೆ' ಅಂದೆ.

'ಬಿಜೆಪಿಯವರ್‍ಗೆ ದೇವರು ಅಂದರೆ ಬಲೇ ಪ್ರೀತಿ ಸಾ' ಅಂದ.

ಅದರಲ್ಲೇನೂ ಆಶ್ಚರ್ಯ ಇರಲಿಲ್ಲ. ದೇವರ ಹೆಸರು ಹೇಳಿಕೊಂಡೇ ಅಧಿಕಾರದ ಗದ್ದುಗೆ ಹಿಡಿದಿರೋದು. ಆ ದಯಾಮಯನಾದ ಪರಮಾತ್ಮ ಬಿಜೆಪಿಯವರನ್ನು ಸೃಷ್ಟಿಸಿರುವುದೇ ಈ ದೇಶವನ್ನು ಆಳಲಿ ಎಂಬುದಾಗಿ ಅಡ್ವಾಣಿ ಹೇಳಿದ್ದರು.

'ಅದಕ್ಕೇನೀಗ' ಅಂದೆ.

'ದೇವರ ಪೂಜೆ ಅಂದರೆ ಬಲೇ ಮುತುವರ್ಜಿ' ಅಂದ.



'ಆಗಲಿ ಬಡು' ಅಂದೆ.

'ಡಬ್ಬಲ್ ಮೀನಿಂಗ್ದಲ್ಲ ಸಾ' ಅಂತ ಹಲ್ಕಾ ನಗೆ ಬೀರಿದ.

ಈ ಹಾಳಾದ ಸಿನಿಮಾದವರು ಕನ್ನಡ ಭಾಷೇನ ಎಕ್ಕುಟ್ಟಿಸುತ್ತಾ ಇದಾರೆ. ಯಾವ ಪದ ಬಳಸಿದರೆ ಏನು ಅಪಾರ್ಥ ಬರುತ್ತೋ ಅಂತ ಹೆದರುವ ಹಾಗೆ ಮಾಡಿದ್ದಾರೆ. 'ದೇವರಪೂಜೆ'ನೂ ಅವರ ಕೈಗೆ ಸಿಕ್ಕಿಹೋಯಿತಾ ಹೇಗೆ ಎಂದು ಯೋಚಿಸುತ್ತಿರುವಾಗ 'ಇಲ್ಲ ಇಲ್ಲ ಹಾಗೇನೂ ಆಗಿಲ್ಲ' ಅಂತ ಕ್ಯಾತ ಹೇಳಿ ವಿವರಣೆ ನೀಡಿದ.

ನಮ್ಮೂರಲ್ಲಿ ಒಬ್ಬ ಕಾವಿ ಮನುಷ್ಯ ಇದಾನೆ. ವಿದ್ಯಾಸಂಸ್ಥೆಗಳನ್ನು ನಡೆಸುವ ಹೆಸರಿನಲ್ಲಿ ಹಣ ಮಾಡಿಕೊಂಡು ಪೊಗದಸ್ತಾಗಿ ರಾಜಕೀಯ ಮಾಡುತ್ತಾ ಇರ್‍ತಾನೆ. ಒಂದು ಸಲ ಅವನಿಂದ ಒಂದು ಕೆಲಸ ಆಗಬೇಕಿತ್ತು, ಫೋನಿನಲ್ಲೇ ಆಗುವ ಕೆಲಸ ಅದು. ಅವನಿಗೆ ಫೋನ್ ಹಚ್ಚಿದೆ. ಯಾವುದೋ ಮರಿ ಎತ್ತಿಕೊಂಡಿತು.

'ಸ್ವಾಮೀಜಿ ಇದಾರಾ?'

'ಪೂಜೆ ಮಾಡ್ತಿದಾರೆ.'

'ಎಷ್ಟೊತ್ತಾಗಬಹುದು?'

'ಒಂದು ಗಂಟೆ ನಂತರ ಸಿಕ್ತಾರೆ.'

ಹಾಗೆ ಮಾಡಿದೆ. ಒಂದು ಗಂಟೆಯ ನಂತರ ಫೋನ್ ಮಾಡಿದೆ. ಮತ್ತೆ ಅದೇ ಉತ್ತರ 'ಪೂಜೆ ಮಾಡ್ತಿದಾರೆ!'

ಇನ್ನೂ ಅರ್ಧ ಗಂಟೆ ಬಿಟ್ಟು ಸಂಪರ್ಕಿಸಿದೆ. ಅದೇ ಉತ್ತರ. 'ಪೂಜೆ ಮಾಡ್ತಿದಾರೆ!'

ಅರೆ, ವಿದ್ಯಾಸಂಸ್ಥೆಗಳನ್ನು ನಡೆಸುತ್ತಿರೋನು, ಸಾರ್ವಜನಿಕ ಜೀವನದಲ್ಲಿ ತಲೆ ಹಾಕ್ತಿರೋನು ಹೊತ್ತಿಗೆ ಮುಂಚೇನೆ ಈ ಪೂಜೆ ಗೀಜೆ ಎಲ್ಲ ಮುಗಿಸಿಕೊಂಡಿರಬೇಕು. ಈ ನನ್‌ಮಗನ್ನ ನೋಡಿದರೆ ಗಂಟೆಗಟ್ಟಲೆ ಪೂಜೆ ಮಾಡ್ತಾ ಅವ್ನೆ. ಇವನವ್ವನ್ ಅದೇನ್ ಪೂಜೆ ಕೊಸೀತಿದಾನೋ ನೋಡೇಬಿಡೋಣ ಅಂತ ಅವನ ಮನೆಗೆ ಹೋದೆ. ಜಬರ್‌ದಸ್ತ್ ಮಾಡಿ ಬಾಗಿಲು ತೆಗೆಸಿದೆ. ಕೆದರಿದ ಕೂದಲು, ಅಸ್ತವ್ಯಸ್ತವಾಗಿದ್ದ ಸೀರೆ ಸರಿಮಾಡಿಕೊಳ್ಳುತ್ತಾ ಒಂದು ಹೆಂಗಸು ಮುಖಮುಚ್ಚಿಕೊಳ್ಳುತ್ತಾ ಮಿಂಚಿನಂತೆ ಮಾಯಾ ಆಯಿತು. ಪಾಪ 'ದೇವರ ಪೂಜೆ' ಸಾಂಗವಾಗಿ ನೆರವೇರಿಸಲು ಸ್ವಾಮೀಜಿಗೆ ಸಾಧ್ಯ ಆಗಲಿಲ್ಲ! ಅವತ್ತಿನಿಂದ ಇಂತಹ ಪೂಜೆಗೆ 'ದೇವರ ಪೂಜೆ' ಅಂತಾರೆ!

'ಅದು ಸರಿ, ಈ ದೇವರ ಪೂಜೆಗೂ ಅವನು ಹೇಳಿದ ಸಮಾಚಾರಕ್ಕೂ ಏನು ಸಂಬಂಧ' ಎಂದು ಕೇಳಿದ್ದಕ್ಕೆ ಕ್ಯಾತೇಗೌಡರು ಹೇಳಿದ್ದರ ಸಾರಾಂಶ ಇದು:

ಭಾಜಪದ ಬಹಳಷ್ಟು ಜನಕ್ಕೆ ಹೆಂಗಸರ ತೆವಲು. ತಾವು ಸಚ್ಚಾರಿತ್ರವಂತರು, ಶ್ರೀ ರಾಮಚಂದ್ರನಂತಹವರು ಅಂತೆಲ್ಲಾ ಪೋಸು ಕೊಟ್ರೋ ಏನೋ ಒಳೊಳಗೆ ಹೆಣ್ಣಿನ ದಾಹ ಮಿತಿಮೀರಿ ಹೋಗ್ತದಂತೆ.

ಅಧಿಕಾರ ಇಲ್ಲದಾಗಲೂ ಪಲವಾರು ಹಗರಣಗಳ ಆಗರವಾಗಿತ್ತಂತೆ. ಆದರೆ ಗರ್ಭಗುಡಿ ಸಂಸ್ಕೃತಿ ಇಂತಹ ಹೊಲಸನ್ನೆಲ್ಲ ತಿಜೋರಿಯಲ್ಲಿ ಬೀಗ ಹಾಕಿ ಭದ್ರಪಡಿಸಿದ್ದವಂತೆ. ಅಧಿಕಾರ ದಕ್ಕಿದ ಮೇಲೆ 'ದೇವರ ಪೂಜೆ'ಯನ್ನು ಹೊರರಾಜ್ಯಗಳಿಗೆ ಮಾತ್ರ ಮೀಸಲಾಗಿಡಬೇಕು ಎಂದು ಮೇಲಿನವರ ಅಪ್ಪಣೆಯಾಗಿತ್ತಂತೆ. ಇಂತಹ ಸೇವೆ ಅಪರೂಪಕ್ಕೊಮ್ಮೆ ದೊರೆಯಬಹುದಾದದ್ದು. ಆದುದರಿಂದ ಪ್ರತಿನಿತ್ಯ ಅಥವಾ ಕನಿಷ್ಠ ಮೂರು ದಿವಸಕ್ಕೆ ಒಮ್ಮೆಯಾದರೂ ಸೇವಾ ಕೈಂಕರ್ಯ ನಿರತರಾಗಿರುವವರನ್ನು

ಅಣಕ

ಎಚ್.ಎಲ್. ಕೇಶವಮೂರ್ತಿ

ಈ 'ಅಪ್ಪಣೆ' ಕಂಗೆಡಿಸಲಾಗಿ.... ಇಂತಹ ಮಹಾಶಯರುಗಳು ತಮ್ಮ ಅಧಿಕೃತ ನಿವಾಸವನ್ನು 'ಮಡಿಸೇವೆ'ಗೂ ಸರ್ಕಾರಿ ನಿವಾಸವನ್ನು 'ದೇವರ ಸೇವೆ'ಗೂ ಅರ್ಪಿಸಿದ್ದಾರಂತೆ!

ತಲೆ ಸಮ ಇಲ್ಲದವರು ಯಾವ ಸೂತ್ರವೂ ಇಲ್ಲದೆ ಮಾತನಾಡುವಂತಿತ್ತು ಕ್ಯಾತನ ಮಾತು. 'ಹಲ್ಕಾ ನನ ಮಗನೆ, ವಿಷಯಕ್ಕೆ ಬಾರೋ' ಅಂದೆ. ಬಂದ.

ಶಿವಮೊಗ್ಗದಲ್ಲಿ ಒಂದು ಪತ್ರಿಕಾಗೋಷ್ಠಿ.

ಯಡಿಯೂರಪ್ಪ ಕೆಂಡಮಂಡಲ ಆಗಿದ್ದರು.

ಕಾರಣ? ರಾಮಚಂದ್ರಾಪುರಮಠಕ್ಕೆ ನೀಡಿದ್ದ ಎರಡು ಕೋಟಿ ರೂಪಾಯಿ ದೇಣಿಗೆಯನ್ನು ಯಾರೋ ಪ್ರಶ್ನಿಸಿದ್ದರಂತೆ. 'ಇದು ಸಾರ್ವಜನಿಕರ ಹಣ. ಇದನ್ನು ಮನಸೋ ಇಚ್ಛೆ ನೀಡಲು ಯಾರಿಗೂ ಅಧಿಕಾರ ಇಲ್ಲ' ಅನ್ನುವುದು ಕೆಲವು ಪತ್ರಕರ್ತರ ಧೋರಣೆಯಂತೆ.. ವಿಶ್ವಗೋಸಮ್ಮೇಳನ ನಡೆಸಿದ ಪವಿತ್ರಾತ್ಮನಿಗೆ ನೀಡಿದ ಹಣ ಕುರಿತು ಕೇಳುವುದೇ ಈ ಪ್ರಶ್ನೆಯನ್ನು? ಅದೂ ಅತ್ತೇದ ಅಳಿಯ ದಾನ ಮಾಡಿದ ಅನ್ನುವ ದನಿಯಲ್ಲಿ!!

ಏನು ಮಾಡಿದರು ಯಡಿಯೂರಪ್ಪ?

ಎಷ್ಟೇ ಆಗಲಿ ಹಣಕಾಸು ಮಂತ್ರಿ, ಮೇಲಾಗಿ ಉಪಮುಖ್ಯಮಂತ್ರಿ. ಉದ್ಘೋಷಿಸಿದರು- 'ಇನ್ನು

ಮೆಂಬರ್ ಮಾಡುವಾಗ ಯಾರಿಗೂ ಹೇಳಲಿಲ್ಲ, ಮಾಡಿಬುಟ್ಟ. ಒಂದು ಅಂಗನವಾಡಿ ನೇಮಕ ಮಾಡಕ್ಕೂ ಬಜೆಪಿ ಕೇಳಬೇಕಾಗ್ಯದೆ. ಅಂತನೆ. ಇದು ಸರಿಯೇ ನಕ್ಕ?"

"ಇರಬವುದು ಬುಡ್ಕ, ನಮ್ಮೂರ ಅಂಗನವಾಡಿ ನೇಮಕ ಮಾಡಕ್ಕಾಗಿಲ್ಲ ಅಂದ್ರೆ ಅಂಗೆ ಇರಬೇಕು."

"ಇಲ್ಯಾವ ಬಜೆಪಿಗಳಿದ್ದವಕ್ಕ? ಇಲ್ಲಿರೊ ಬಜೆಪಿಗಳಿಗಿಂತ ನಮ್ಮ ಬಂಗಾರಿ ಸಮಾಜವಾದಿ ಪಾರ್ಟಿನೆ ವಾಸಿ'!

"ಅವ್ರುನ್ಯಾರೊ ಬಂಗಾರಪ್ಪನ ಕಡಿಯೋನು ಬೆಳಗಾಮಲ್ಲಿ ಹೆಂಗುಸರ ಕೆಡುಸದು, ಕ್ವಲೆ ಮಾಡದು, ದರ್ಬಾಡೆ ಮಾಡುತಿದ್ನಂತಲ್ಲಾ, ನಿಮ್ಮ ಬಂಗಾರಪ್ಪನಿಗೆ ಇನ್ಯಾರು ಸಿಕ್ಕಲಿಲವೇನ್ಲ?" ಎಂದಳು ಜುಮ್ಮಿ.

"ಯಕ್ಕ ನಿಮ್ಮ ಬಂಗಾರಪ್ಪ ಅಂತ ಹರಟು ಮಾಡಬ್ಯಾಡ. ಒಂದು ಕಾಲ್ದಲ್ಲಿ ನೀನು ಬಂಗಾರಪ್ಪನ ಪಾಲೋಯರ್ ಆಗಿದ್ಯ."

"ಯಾಕಾಗಿದ್ದೆ ಹೇಳು? ನೀನು ಅಲ್ಲಿರವತ್ತಿಗೆ ನಾನು ಇದ್ದೆ. ಅವುನು ಕ್ವಾಚ ಅನ್ನದು ಗೊತ್ತಾದ ಮ್ಯಾಲೆ ಈಕಡಿಕೆ ಬಂದೆ. ನೀನೀನ್ನು ಅಲ್ಲೇ ಇದ್ದಿ."

"ನಾನು ಎಲ್ಲೂ ಇಲ್ಲ ಕಣಕ್ಕ, ನನ್ನಷ್ಟಕ್ಕೆ ನಾನು ಇದ್ದಿನಿ. ಸೋಷಲಿಸ್ಟರು ಕಡಿಗೆ ವಟ್ರೆ ಇರತರೆ ಗೊತ್ತೆ?"

"ಅದೇನಾರ ಆಗ್ಲಿ, ಅಂತ ಕ್ವಲಿಗಾರ ಬಂಗಾರಪ್ಪನ ಪಾರ್ಟಿಯವನು ಅಂದ್ರೆ ಏನೇಳನಾ?"

"ನೋಡಕ್ಕಾ, ಪೊಲಿಟೀಸಿಯನ್ ಎಲ್ಲಾ ಒಂದೆ. ಇದೇ ದೇವೇಗೌಡರಿಂದೆ ಎಂತೆಂಥಾ ನಟೋರಿಯಸ್ ರೌಡಿಗಳವುರೆ ಅಂತ ಲಿಸ್ಟ್ ಕೊಡ್ಲ?"

"!?"

"ಅದು ಬ್ಯಾಡ, ಕುಮಾರಸ್ವಾಮಿ ಹಿಂದೆ ಎಂತ್ಯಂಥಾ ಕ್ರಿಮಿನಲ್‌ಗಳವುರೆ ಅಂತ ಪಟ್ಟಿ ಕೊಡ್ಲ? ಕುಮಾರಣ್ಣ ಊ ಅಂದ್ರು ಸಾಕು, ಯಾರು ಕಾರನಾದ್ರು ಹೋಗಿ ಸುಟ್ಟು ಬತ್ತರೆ, ಯಾರಿಗಾದ್ರು ಮೆಟ್ಟಲ್ಲಿ ವಡಿತರೆ."

"ಅದಕೆ ಅಲವೇನೊ, ಕರ್ನಾಟಕ ಅವುರು ಮಾಡಿದ್ದನ್ನಲ್ಲ ನೋಡಿಕಂಡು ಸುಮ್ಮನಿರದು."

"ಎಜ್ಞಾಟ್ಲಿ ಕರಟ್ ಕಣೊ ಉಗ್ರಿ, ಕುಮಾರಸ್ವಾಮಿ ಸೀಟಿಂದ ಇಳಿಲಿ ಗೊತ್ತಾಯ್ತದೆ."

"ಇಳಿಯದು ಅಷ್ಟು ಸುಲಬಲ್ಲ ಕಣೊ. ಅದ್ಕೆ ನಾಕಾಮಗುಲ್ಲು ನೋಡತಾ ಕುಂತವುರೆ."

"ಎಸ್ ದೆಪನೆಟ್ಲಿ."

ಹೆಚ್ಚುವರಿಯಾಗಿ ಎಂಬತ್ತೈದು ಲಕ್ಷ ರೂಪಾಯಿ ಬಿಡುಗಡೆ ಮಾಡ್ತೀನಿ!' 'ಎರಡು ಕೋಟಿಗೇ ಹಿಂಗೆ ಬೊಂಬ್ದ ಬಜಾಯಿಸ್ತೀರಲ್ಲೋ ಮುಂಡೆಮಕ್ಕಳ, ಈಗೇನು ಕಿತ್ತಳ್ತೀರಿ ನನ್ನ ಹತ್ತಿರ' ಅನ್ನುವ ಟೋನು!

ಹುಡುಗ ಮುಂಡೇವು ಪತ್ರಕರ್ತರಾಗಿರ್ತಾವೆ. ಇನ್ನೂ ಸತ್ಯ ನ್ಯಾಯ, ಧರ್ಮ, ಹಾಳುಮೂಳು ಅಂತ ಕಿರುಚಾಡ್ತಾವೆ. ಅವು ಕೆದಕಿದವಂತೆ – 'ಈ ಸ್ವಾಮಿ ಸರ್ಕಾರದ ಭೂ ಕಬಳಿಕೆ ಮಾಡಿದ್ದಾನಲ್ಲ?'

ಇದಕ್ಕೇನು ಆಧಾರ?

ತಹಶೀಲ್ದಾರನ ವರದಿ!

ಮಾಲುಸಮೇತ ಕಳ್ಳ ಸಿಕ್ಕಿಬಿದ್ದಿದ್ದ!

ಇದಕ್ಕೇನು ಅಭಿವೃದ್ಧಿ ಪರ ಯಡಿಯೂರಪ್ಪ ಉತ್ತರ?

'ಇವರ ಮೇಲೆ ಕ್ರಮ ತಗೊಳ್ತೀನಿ'

ಹಾಗಾದರೆ ರಾಮಚಂದ್ರಾರಪುರ ಮಠದ ಸ್ವಾಮಿ ಶ್ರೀಕೃಷ್ಣ ಜನ್ಮಸ್ಥಾನ ಕಾಣುವರೆ?

ಛೆ..ಛೆ... ಯಾವ್ಯಾವ್ದೋನೋ ಲೂಟಿ ಮಾಡ್ತಾನೆ. ಅವರನ್ನೆಲ್ಲ ಬಿಟ್ಟು ಈ ಸ್ವಾಮಿಯ ಭೂ ಕಬಳಿಕೆ ಬಗ್ಗೆ ವರದಿ ನೀಡಿದರೆ... ವರದಿ ನೀಡಿದ ತಹಶೀಲ್ದಾರ್ ಮೇಲೆ ಕ್ರಮ ಜರುಗಿಸುತ್ತಾರಂತೆ!

ಆಹಾ! ಎಂತಹ ನ್ಯಾಯ ನಿಷ್ಠುರತೆ!

ವಿಷಯವನ್ನು ಸಂಪೂರ್ಣವಾಗಿ ತಿಳಿದುಕೊಂಡ ಮೇಲೆ ಹೇಳಿದೆ– 'ಸರಿಕಣೊ ಕ್ಯಾತ ನೀನೇಳಿದ್ದು.'

'ಒಪ್ಕಂತೀರಾ ಸಾ ಯಡೂರಿಗೆ ತಲೆ ಕೆಟ್ಟೋಗದೆ ಅಂತಾವ?'

'ಒಪ್ಪಿಕೊಳ್ಳದೆ ಏನು ಮಾಡಲೋ... ತಲೆ ಸರಿಯಾಗಿರೋರು ಯಾರಾದರೂ ಹೀಗೆ ಹೇಳ್ತಾರಾ' ಅಂದೆ.

ಇದೇ ಗುಂಗಿನಲ್ಲಿರಬೇಕಾದರೆ ವೆಂಕಯ್ಯ ನಾಯ್ಡು ಹೇಳಿಕೆ ನೋಡಿದೆ.

ಈ ದೇಶದಲ್ಲಿ ಯಾವುದು ಜಾತ್ಯತೀತ ಪಕ್ಷ?

ಜಾತ್ಯತೀತ ಜನತಾದಳ?

ಅಲ್ಲ, ಅದು ಹೆಸರಿನಲ್ಲಿ ಮಾತ್ರ ಜಾತ್ಯತೀತ.

ಕಾಂಗ್ರೆಸ್, ಕಮ್ಯೂನಿಸ್ಟ್ ಪಕ್ಷಗಳು? ಅವೂ ಅಲ್ಲ,

ಹಾಗಾದರೆ ಯಾವುದು ಅದು?

ಭಾರತೀಯ ಜನತಾ ಪಕ್ಷ!

ಅದು ಹೇಗೆ?

ಬಹುಸಂಖ್ಯಾತರ ಹಿತವೇ ರಾಷ್ಟ್ರದ ಹಿತ ಎಂದು ನಂಬಿರುವ ಪಕ್ಷ ಅದು!

ವೆಂಕಯ್ಯ ನಾಯ್ಡು ಅವರ ಅಮೋಘ ವ್ಯಾಖ್ಯಾನ!

ಬಹುಸಂಖ್ಯಾತರು ಎಂದರೆ ಯಾರು?

ಹಿಂದೂಗಳು?

ಅವರ ಹಿತವೇ ಜಾತ್ಯತೀತತೆ!

ಜಾತ್ಯ ತೀತತೆ ಬಗ್ಗೆ ಇನ್ನೂ ಏನೇನು ವ್ಯಾಖ್ಯಾನ ಬರುತ್ತೋ...!

ಮನಸ್ಸಿಟ್ಟು, ಪ್ರೀತಿಯಿಂದ

ನೀವು ಈ ಬಗ್ಗೆ 'ಪತ್ರಿಕೆ'ಯಲ್ಲಿ ಓದಿದ್ದೀರಿ. ಮೊಳಕಾಲ್ಮೂರು ತಾಲ್ಲೂಕ್ ಕೊಂಡ್ಲಹಳ್ಳಿಯಲ್ಲಿ ಕಾ. ತಿಪ್ಪೇಸ್ವಾಮಿ ಎಂಬ ಮಾಸ್ತರು ಸಾವಿರಾರು ಮರ ನೆಟ್ಟಿರುವುದನ್ನು ವರದಿ ಮಾಡಿದ್ದೇವೆ. ಮೊಳಕಾಲ್ಮೂರು ಒಣಗಿದ ತಾಲ್ಲೂಕು; ಕಲ್ಲು ಬಂಡೆಗಳಿಗೆ, ರೇಷ್ಮೆ ಸೀರೆಗೆ ಪ್ರಸಿದ್ಧವಾದ ತಾಲ್ಲೂಕು. ಇಲ್ಲಿ ಅನೇಕ ಮೈಲುಗಟ್ಟಲೆ ಮರಗಿಡಗಳೇ ಇಲ್ಲ. ಈ ಕೊಂಡ್ಲಹಳ್ಳಿಯಲ್ಲಿ ಕಾ. ತಿಪ್ಪೇಸ್ವಾಮಿ ಒಂದು ಪುಟ್ಟ ವೃಕ್ಷಪ್ರೇಮಿಗಳ ಸಂಘ ಕಟ್ಟಿದರು. ಆರೇಳು ಜನರ ಸಂಘ. ಊರಿನ ಜನಕ್ಕೆ ಮರಗಳ ಪ್ರಾಮುಖ್ಯ ಕುರಿತು ಮಾತಾಡಿ ಮನವೊಲಿಸಿದರು, ಅರಣ್ಯ ಇಲಾಖೆಯವರನ್ನು ಒಪ್ಪಿಸಿದರು. ಸಾವಿರಾರು ಮರ ಬೆಳೆದವು. ಊರು ತಂಪಾಯಿತು. ಕಾ.ತಿ. ಮಾಸ್ತರು ಇವತ್ತು ಕೃತಕೃತ್ಯ ಭಾವನೆ ಪಡೆದ ಮನುಷ್ಯ. ನನ್ನಂಥವನ ಅಭಿಮಾನದ ವ್ಯಕ್ತಿ.



ಇಲ್ಲಿ ಒಂದು ಮುಖ್ಯ ವಿಷಯ ಸೂಚಿಸಲು ಇಚ್ಛಿಸುತ್ತೇನೆ. ಮನುಷ್ಯನ ಪರಿಣಾಮ, ಅರ್ಥಪೂರ್ಣತೆ ಆತನ ಶ್ರೀಮಂತಿಕೆ, ಉನ್ನತ ಸ್ಥಾನ, ವೈಭವವನ್ನು ಅವಲಂಬಿಸುವುದಿಲ್ಲ. ಕೋ.ಲಕ್ಷ್ಮೀ ನಾರಾಯಣ ಕಾರಂತರು ಶಿವರಾಮ ಕಾರಂತರ ಅಣ್ಣ ತಮ್ಮ ಬಹುಪಾಲು ಜೀವನವನ್ನು ಶಾಲೆ ಮಾಸ್ತರರಾಗಿ, ಹೆಡ್‌ಮಾಸ್ಟರಾಗಿ ಕಳೆದವರು. ಆದರೆ ಮಾಸ್ತರಿಕೆಯಲ್ಲಿ ಮಕ್ಕಳಿಗೆ ವಿಜ್ಞಾನ, ವೈಚಾರಿಕತೆ ತರಲು, ತಮ್ಮ ಸುತ್ತಣ ಜನರಿಗೆ ಸರಳ ಅನುಕೂಲ, ನೆಮ್ಮದಿಯ ಬಗ್ಗೆ ತಿಳಿವಳಿಕೆ ನೀಡಲು ಯತ್ನಿಸಿದವರು. ಶಾಲೆಗಳ ಇನ್ಸ್‌ಪೆಕ್ಟರಾಗಿದ್ದ ಡೆಪ್ಯೂಟಿ ಚೆನ್ನಬಸಪ್ಪ, ಪ್ರೈಮರಿ ಮಾಸ್ತರಾಗಿದ್ದ ಮಡಿವಾಳೇಶ್ವರ ಇವರ ಬದುಕಿನ ಅರ್ಥಪೂರ್ಣತೆ ಕೂಡ ಅವರ ಸುಂದರ ಕ್ರಿಯೆಯನ್ನು ಅವಲಂಬಿಸಿದೆ.

ಕಾ. ತಿಪ್ಪೇಸ್ವಾಮಿಯನ್ನು ನಾನು ನೋಡಿದಾಗ... ಈತ ನಮ್ಮ ಅನೇಕ ಮಂತ್ರಿಗಳಿಗಿಂತ, ವಿದ್ಯಾಧಿಕಾರಿಗಳಿಗಿಂತ ಅರ್ಥಪೂರ್ಣವಾಗಿ ಕಂಡರು. ಒಬ್ಬ ವ್ಯಕ್ತಿ ಅಚ್ಚುಕಟ್ಟಾಗಿ ಏಕಾಗ್ರತೆಯಿಂದ ಕೆಲಸ ಮಾಡಿದಾಗ ದೊರೆಯುವ ಚಾರಿತ್ರ್ಯ ತೃಪ್ತಿ ಹಣದಿಂದ ಬರುವುದಿಲ್ಲ, ಇದನ್ನು ಈ ನೀಚ ಸ್ಪರ್ಧೆಯ ಕಾಲದಲ್ಲಿ ಎಲ್ಲರೂ ನೆನಪಿಟ್ಟುಕೊಳ್ಳಬೇಕು.

ಮರೆಯುವ ಮುನ್ನ



ಪಿ. ಲಂಕೇಶ್ ಮಾರ್ಚ್ 12, 1989

ಇನ್ನೊಂದು ಮುಖ

ಮರಗಳು ಮುಖ್ಯ. ಆದರೆ ಮರವೇ ಎಲ್ಲವನ್ನೂ ತರುವುದಿಲ್ಲ. ಕೊಂಡ್ಲಹಳ್ಳಿಯ ಆರೆಸೆಸ್ ಅಬ್ಬರ, ದುಷ್ಟ ರಾಜಕಾರಣಿಗಳ ಕೈವಾಡವನ್ನು ಕ್ಷಣ ಗಮನಿಸಿ ಹೇಳಿದೆ: ಮರಗಿಡಗಳ ಸ್ವರ್ಗದಂತೆ ಕಾಣುವ ಮಲೆನಾಡಲ್ಲಿ ವ್ಯಕ್ತಿಗಳು ಹತಾಶೆಯಿಂದ, ಭಯದಿಂದ ತುಂಬಿದ್ದನ್ನು ಕಂಡಿದ್ದೇನೆ. ಮರದ ಚೈತನ್ಯಕ್ಕೂ ಜನರ ಚೈತನ್ಯಕ್ಕೂ ಸಂಬಂಧವೇ ಇಲ್ಲದ್ದು ಗಮನಿಸಿದ್ದೇನೆ. ವೃಕ್ಷಸಂಪತ್ತಿನ ಕೊಡಗಿನಿಂದ ತಪ್ಪಿಸಿಕೊಂಡು ಬಯಲಿನ ಮೈಸೂರು, ಬೆಂಗಳೂರಿಗೆ ಬಂದು ಸಣ್ಣಪುಟ್ಟ ನೌಕರಿಯಲ್ಲಿ ತೃಪ್ತಿ ಪಡೆವ ಕೊಡವರನ್ನು ನೋಡಿದ್ದೇನೆ. ಆದ್ದರಿಂದ ನಮ್ಮ ಸೂಕ್ಷ್ಮಜ್ಞತೆಯೊಂದಿಗೆ ಹೊಂದಿಕೊಂಡಾಗ, ಮರ ಬೆಳೆಸುವುದು, ಅವುಗಳೊಂದಿಗೆ ಬದುಕುವುದು ಜೀವಂತ ಕ್ರಿಯೆಯಾದಾಗ ಮಾತ್ರ ಮರಗಳು ನಮ್ಮ ವ್ಯಕ್ತಿತ್ವ ಅರಳಿಸುತ್ತವೆ. ಇದು ವರ್ಡ್ಸ್‌ವರ್ತನ, ಫ್ರಕೋವ್ರೋಕಾನ ಕಾಣ್ಕೆ. ಇಲ್ಲದಿದ್ದರೆ ಮರ ನೇಣು ಹಾಕಿಕೊಳ್ಳುವವರಿಗೆ ಅನುಕೂಲ ಮಾಡಿಕೊಡುತ್ತದೆ, ಒಂದು ಕಡೆ ಉಮರ್ ಖಯಾಂನ, ಭಾವುಕತೆಗೆ ನೆರಳು ನೀಡುವ ಮರ, ಇನ್ನೊಂದು ಕಡೆ ಸಾರಾಯಿ ಕುಡಿದು ನಾಶವಾಗುವವರಿಗೆ ನೆರವಾಗುತ್ತದೆ. ಬುದ್ಧನ ಬೋಧಿವೃಕ್ಷವೂ ಜನಸಾಮಾನ್ಯನ ಹೆಮ್ಮೆಯ ಮರವೂ ಆಗುವಂತೆ ಮರಗಳು ಬೆಳೆಯಲಿ. ವೈಚಾರಿಕತೆ ಮತ್ತು ಭಾವುಕತೆಯ ಸ್ಫೂರ್ತಿಯಾಗಲಿ.



ವಿನ್ನಿ

ವಿನ್ನಿ ಮಾಂಡೇಲಾ ಸುದ್ದಿಯಲ್ಲಿದ್ದಾಳೆ. ಮೊನ್ನೆ ತಾನೆ "ದಕ್ಷಿಣ ಆಫ್ರಿಕಾದ ತಾಯಿ", "ಜೋನ್ ಆಫ್ ಆರ್ಕ್", "ಪತಿಯಿಂದ ಬೇರ್ಪಡಿಸಲ್ಪಟ್ಟ ನೊಂದು ನರಳುತ್ತಿರುವ ಹೆಣ್ಣು ಮಗಳು", "ದಕ್ಷಿಣ ಆಫ್ರಿಕಾದ ಭಾವಿ ಪ್ರಧಾನಿ" ಎಂದು ವರ್ಣಿಸಲ್ಪಡುತ್ತಿದ್ದ ವಿನ್ನಿ ಇವತ್ತು ವಿವಾದದ ಬಿರುಗಾಳಿಯಲ್ಲಿ ಸಿಕ್ಕಿಹಾಕಿಕೊಂಡಿರುವ ಮಹಿಳೆ.



ಈಕೆಯ ಪತಿ ನೆಲ್ಸನ್ ಮಾಂಡೇಲಾ ಕವಿ, ರಾಷ್ಟ್ರಪ್ರೇಮಿ; ತನ್ನ ಕಪ್ಪು ಜನರಿಗೆ ಆಗುತ್ತಿರುವ ಅನ್ಯಾಯದ ವಿರುದ್ಧ ಪ್ರತಿಭಟಿಸಿ 26 ವರ್ಷದ ಹಿಂದೆ ಜೈಲು ಸೇರಿದವನು. ಇಡೀ ಜಗತ್ತಿನ ಪ್ರಜ್ಞಾವಂತ ಜನರ ಹೀರೋ ಮಾಂಡೇಲಾ. ಬದುಕಿನ ಬಹುಭಾಗವನ್ನು ಸೆರೆಮನೆಯಲ್ಲಿ ಕಳೆದು ದೈಹಿಕವಾಗಿ ನಶಿಸುತ್ತಿದ್ದರೂ ಈತ ಮಾನಸಿಕವಾಗಿ ಸ್ವಾತಂತ್ರ್ಯದ, ಸ್ವಾಭಿಮಾನದ ಪ್ರತೀತ, ಇಡೀ ಜಗತ್ತಿಗೆ.

ಸುದ್ದಿ ಮತ್ತು ಪ್ರಚಾರದ ಅಪಾಯ ವಿಚಿತ್ರವಾದದ್ದು. ಜಗತ್ತು ಅನುಕಂಪೆಯಿಂದ ನೀಡುತ್ತಿದ್ದ ಪ್ರಚಾರ, ಮೆಚ್ಚಿಗೆಯನ್ನು ವಿನ್ನಿ ಗಂಭೀರವಾಗಿ ತೆಗೆದುಕೊಂಡಳು; ನಾಯಕತ್ವದ ವೈಭವದ ಕಲ್ಪನೆಯಲ್ಲಿ ಮುಳುಗಿದಳು. ಹೆಸರಿನ ಮದ ನೆತ್ತಿಗೇರಿತು. ತನ್ನ ಹಿಂಬಾಲಕರ ಫುಟ್‌ಬಾಲ್ ಟೀಮುಗಳಿಗೆ ಕುಮ್ಮಕ್ಕು ಕೊಟ್ಟಳು; ಕೊಲೆ, ಸುಲಿಗೆ ಈ ಟೀಮಿನ ನಿತ್ಯದ ಕೆಲಸವಾಯಿತು. ಆಗದವರಿಗೆ ಟೈರಿನ ನೆಕ್‌ಲೆಸ್ ಹಾಕಿ ಬೆಂಕಿ ಹಚ್ಚುವುದು, ತನ್ನನ್ನು ಇಷ್ಟಪಡದವರು ಇಲ್ಲದಂತೆ ಮಾಡುವುದು ಈಕೆಯ ಕೆಲಸವಾಯಿತು. ಈ ಮಧ್ಯೆ ತನ್ನ "ನಾಯಕತ್ವ"ಕ್ಕೆ ತಕ್ಕಂಥ ಭವ್ಯ ಬಂಗಲೆಯನ್ನು ಬಡವರ ಗುಡಿಸಲುಗಳ ನಡುವೆ ಕಟ್ಟಿಕೊಂಡಳು. ಈಕೆಯ ಶತ್ರುಗಳು ಅದಕ್ಕೆ ಬೆಂಕಿ ಇಟ್ಟರು.

ಈಚೆಗೆ ಈಕೆ ಕೊಲೆ ಮಾಡಿಸಿದಳೆನ್ನಲಾದ ಹುಡುಗನ ಶವ ಸಿಕ್ಕಿದೆ. ವಿನ್ನಿ ಮತ್ತು ಸುತ್ತಣ ಜನರ ನಡುವೆ ಕಂದಕ ಬೆಳೆದಿದೆ. ಎಲ್ಲರ ಅನುಮಾನಕ್ಕೆ ತುತ್ತಾಗಿರುವ ವಿನ್ನಿ ಏಕಾಂಗಿಯಾಗಿದ್ದಾಳೆ.

ದಕ್ಷಿಣ ಆಫ್ರಿಕಾದ ಕಗ್ಗತ್ತಲೆ ಭೀಕರವಾದದ್ದು. ಇಲ್ಲಿ ಮನುಷ್ಯನಾಳದ ವಾಂಛಲ್ಯಗಳೂ, ಸ್ವಾತಂತ್ರ್ಯಾಕಾಂಕ್ಷೆಯೂ ಒಟ್ಟಾಗಿಯೇ ವ್ಯಕ್ತವಾಗುತ್ತವೆ; ನೆಲ್ಸನ್ ಮಾಂಡೇಲನ ದುರಂತ ಮತ್ತು ಸಾಧನೆಯೊಂದಿಗೇ ವಿನ್ನಿ ಮಾಂಡೇಲಾಳ ಒಬ್ಬಂಟಿತನ ಮತ್ತು ಸಣ್ಣತನ ಒಟ್ಟಾಗಿಯೇ ಹೊರಹೊಮ್ಮುತ್ತವೆ. ಬಿಶಪ್ ಟುಟುನ ಸಹನೆ ಮತ್ತು ನೆಕ್‌ಲೇಸ್ ಪ್ರಿಯರ ಕ್ರೌರ್ಯ ಎಲ್ಲವನ್ನು ದ್ವಂದ್ವದಲ್ಲಿ ಮುಳುಗಿಸುತ್ತವೆ.

ಕಪ್ಪು, ದುಂಡು ಮುಖದ ಸುಂದರಳಾದ ವಿನ್ನಿ ಎಲ್ಲ ವೈಚಿತ್ರ್ಯಗಳ ಸಾಕಾರಮೂರ್ತಿ ಅನ್ನಿಸುತ್ತದೆ.

ವಿವಾಹಿತರಿಗೂ ಅವಿವಾಹಿತರಿಗೂ ಏನು ವ್ಯತ್ಯಾಸ?

ಕಣ್ಣಾ ಮುಚ್ಚಾಲೆ

ಕಾಳೀಹುಂಡಿ ಶಿವಕುಮಾರ್, ಮೈಸೂರು
"ಒಂದೇ ಒಂದು ಸಾರಿ, ಸಿ.ಎಂ. ಛೇರ್ಸ್ ಕಣ್ಮುಂದೆ ಬಾರೋ" ಎಂದು ಯಡ್ಡಿ ಹಾಡುತ್ತಿದ್ದಾರಂತೆ!?
◆ 'ಅಧಿಕಾರ, ಐ ಲವ್ ಯು, ಫಾದರ್ ಮೇಲಾಣೆ' ಎಂದು ಕುಮಾರ ಹಾಡುತ್ತಿದ್ದಾರಂತೆ!

ಮಂಚಾಲಿ ಗುರುರಾಜಚಾರ್, ಬಳ್ಳಾರಿ
ರೇಣುಕಾಚಾರಿ ಮತ್ತು ನರ್ಸ್ ಜಯಲಕ್ಷ್ಮಿಯನ್ನು ಹಾಕಿಕೊಂಡು ಯೋಗರಾಜ್ ಭಟ್ ಸಿನಿಮಾ ತೆಗೆದರೆ?
◆ ಅದು 'ಲಂಗ SSLC' ಎಂಬ 'ಹಿಂಗಾರು' ಕತೆಯಾಗುತ್ತೆ.

ಎಸ್. ಶಶಿಧರ, ದಾವಣಗೆರೆ
ಯಡ್ಡಿ ಮೇಲೆ ನಾನಾ ರೀತಿಯ ರ್‍ಯಾಗಿಂಗ್ ಆಗುತ್ತಿದ್ದರೂ ಆತ ತೆಪ್ಪಗೆ ಸಹಿಸಿಕೊಳ್ಳುತ್ತಿರುವುದೇಕೆ?
◆ 'ಅತ್ಯಾಚಾರ ಅನಿವಾರ್ಯವಾದಾಗ ಅದನ್ನು ಸಂತಸದಿಂದ ಅನುಭವಿಸು' ಎಂಬ ಸಿದ್ಧಾಂತದ ಪ್ರತಿಪಾದಕನಾಗಿರುವುದಕ್ಕೆ!

ಕವಿತಾ ಮಧುಸೂದನ್, ದಾವಣಗೆರೆ
ಎಸ್.ಎಂ. ಕೃಷ್ಣ ಪಾಂಚಜನ್ಯ, ದೇವೇಗೌಡ ಕಹಳೆ, ಯಡ್ಡಿ ಏನನ್ನು ಊದಬಹುದು?
◆ ಬಣ್ಣದ ತಗಡಿನ ತುತ್ತೂರಿ.....!


ಮಸ್ರೂರ್ ಮೊಹಿಯುದ್ದೀನ್, ಚಿತ್ರದುರ್ಗ
ಕಾವಿ ಧರಿಸುವ ಋಷಿ, ಮುನಿ, ಮಠಾಧೀಶರು ಒಳಗಡೆ ಚಡ್ಡಿ ಹಾಕೋತಾರಾ?
◆ ವಿಶ್ವಹಿಂದೂ ಪರಿಷತ್ತನ್ನು ನೋಡಿದರೆ ಅವರೆಲ್ಲಾ ಮನಸ್ಸಿಗೇ ಖಾಕಿ ಚಡ್ಡಿ ಹಾಕಿಕೊಂಡಿರುವುದು ಗೊತ್ತಾಗುತ್ತೆ.

ಹರಳಹಳ್ಳಿ ಪುಟ್ಟರಾಜು, ಮಂಡ್ಯ
ಸದ್ಯದ ಯಡ್ಡಿಯ ಪರಿಸ್ಥಿತಿಯನ್ನು ಕಂಡರೆ ನಿಮಗೇನ ನಿಸುತ್ತದೆ?
◆ ಬೇಜಾರಾಗುವುದಕ್ಕೆ ಅವರ ಚಡ್ಡಿ ಅಡ್ಡಬರುತ್ತಿದೆ ಎಂದಷ್ಟೇ ಹೇಳಬಹುದು!

ಅಬ್ದುಲ್ ರಜಾಕ್, ದೇವದುರ್ಗ
ಈಜು ಕಲಿಸ್ತೀನಿ ಬಾ ಅಂತಾಳಲ್ಲ?
◆ ತಕ್ಷಣವೇ ಧೈರ್ಯದಿಂದ ಡೈವ್ ಹೊಡಿ ಮಗಾ....

ಪಿ.ಎನ್. ಶ್ರೀವತ್ಸ, ಬೆಂಗಳೂರು
ಇತ್ತೀಚೆಗೆ ದೆಹಲಿಯಲ್ಲಿ ಬಸುರಿಯರ ಪ್ರದರ್ಶನ ನಡೆದಂತೆ ನಮ್ಮಲ್ಲೂ ನಡೆದದ್ದೇ ಆದರೆ....?
◆ ಇಪ್ಪತ್ತು ತಿಂಗಳ ಗರ್ಭಿಣಿ 'ಯಡ್ಡಿ'ಯಮ್ಮ ರೆಕಾರ್ಡ್ ಸ್ಥಾಪಿಸಬಹುದು!

ಮಂಚಾಲಿ ವಾಣವಾಗೀಶಚಾರು, ಬಿಜಾಪುರ
ದೇವೇಗೌಡರ ಗೀತೋಪದೇಶ ಶುರುವಾಗಿದೆ, ಯಡ್ಡಿ ರಥವೇರುವುದು ಯಾವಾಗ?
◆ ಆಗಲೇ ರಥವೇರಿರುವ ಯಡ್ಡಿಗೆ ಗೌಡರ ವಿಶ್ವರೂಪ ದರ್ಶನ ಕಂಡು ಎಲ್ಲ ಕಡೆಯಿಂದ ಕಿತ್ತುಕೊಳ್ಳುತ್ತಿದೆ!



ಬಹುಮಾನಿತ ಪ್ರಶ್ನೆ

ಡಿ.ಎಲ್. ಸುರೇಶ್, ಹರಪನಹಳ್ಳಿ
ವಿವಾಹಿತರಿಗೂ ಅವಿವಾಹಿತರಿಗೂ ಏನು ವ್ಯತ್ಯಾಸ?
◆ ಬ್ರಹ್ಮಚಾರಿಗೂ, ಕಾವಿಧಾರಿಗೂ ಇರುವಷ್ಟೇ ವ್ಯತ್ಯಾಸ!

ಬಸವರಾಜ್ ಬೆಸ್ತರ್, ಗುಲ್ಬರ್ಗಾ
ಬ್ರಾಕೆಟ್ ಸೇರಿದ್ದು ಶ್ರೀರಮೇಶ್ ಜಾಕೆಟ್ ಸೇರಿದ್ದು...?
◆ ಜಾತಿವಾದ?!

ಬಿ. ಚಂದ್ರೇಗೌಡ, ಬೆಂಗಳೂರು
ಹೆಂಡತಿಯನ್ನು 'ಚಿನ್ನಾ' ಅನ್ನೋದ್ಯಾಕೆ?
◆ ಸಾಕಷ್ಟು ವರದಕ್ಷಿಣೆ ತಂದಿದ್ದಕ್ಕೆ!

ಒದುಸಿದ್ದೇಗೌಡ ಕೆಬ್ಬೇಹಳ್ಳಿ, ಕನಕಪುರ
ದೇವೇಗೌಡರ 'ಆಟ' ಬಲ್ಲವರಾರು....?
◆ 'ಪಾಠ' ಕಲಿಸಲಿರುವ 'ವೋಟು'ದಾರರು!

ಹಸೀನಾಬಾನು, ಗೋಕಾಕ್
ಅಂದು ಮಕ್ಕಳಿರಲವ್ವ ಮನೆ ತುಂಬಾ ಆದ್ರೆ, ಇಂದು?
◆ "ನಿನ್ನಂಥ ಒಬ್ಬಳು ಮಗಳಿರಲವ್ವ" ಅಂದಿದ್ದಾರೆ ಗೌರಿ ಬಗ್ಗೆ ಸಾರಾ ಅಬೂಬಕ್ಕರ್ ಅವರು. ಗೊತ್ತೆ?!

ನಮ್ಮ ಪ್ರಶ್ನೆಗೆ ನಿಮ್ಮ ಉತ್ತರ!!

ಪ್ರಶ್ನೆ ನಂ: 27
'ಮಾತಾಡ್ ಮಲ್ಲಿಗೆ' ಫ್ರೀ ಶೋ ಜಾಸ್ತಿ ಆಗುತ್ತಿರುವ ಗುಟ್ಟೇನು?

ಪ್ರಶ್ನೆ ನಂ. 25ರ ನಮ್ಮ ಪ್ರಶ್ನೆ: 'ಶ್ರೀರಮೇಶ್'ಗೆ ಬೈ, 'ಗೌಡ'ಗೆ ಹಾಯ್ ಎಂದಿರುವ ತೇಜಸ್ವಿನಿಯ ಹೊಸ ಆಟವೇನು?
ನಿಮ್ಮ ಉತ್ತರ: ಕುಮ್ಮಿ ಜೊತೆ ಹುಡುಗಿ ಆಟ!

ಉತ್ತರ ಕಳುಹಿಸಿ ಬಹುಮಾನ ಪಡೆದಿರುವವರು: ಗೋಪಾಲ್, ಬೆಂಗಳೂರು

ಇಂತಹ ಮಹಿಳಾಮಣಿಗಳೂ ಇದ್ದಾರೆ....!

ಸೆಪ್ಟೆಂಬರ್ 5 ರ ಸಂಚಿಕೆಯಲ್ಲಿ ಪ್ರಕಟವಾದ ಬಹುತೇಕ ಸುದ್ದಿಗಳು ಮಹಿಳೆಯರನ್ನೇ ಕುರಿತದ್ದಾಗಿದ್ದುದು ವಿಶೇಷ. ಹೆಂಗಸರು ಮನಸು ಮಾಡಿದರೆ ಎಂತೆಂಥಾ ಹೀನಕೃತ್ಯಗಳಿಗೆ ಇಳಿದುಬಿಡುತ್ತಾರೆ ಎನ್ನುವುದಕ್ಕೆ ಈ ಸಂಚಿಕೆಯಲ್ಲಿ ಪ್ರಕಟವಾದ ಮಾತೆ(!) ಮಾದೇವಿಯ ಮೋಸದ ಮಹಾದರ್ಶನ, ತೇಜಸ್ವಿನಿ ಎಂಬ ಸಂಸದೆಯ ನಾಟಕ, ರೂಪ ಎಂಬ ಪೊಲೀಸ್ ಅಧಿಕಾರಿಯ ವಸೂಲಾತಿ ಹಾಗೂ ರಾಧಿಕಾ ಎಂಬ ಎಳೆನಟಮಣಿಯ ಸಿನಿಮಾ ದಂಧೆ ವಿಚಾರಗಳು ಹೇಸಿಗೆ ಹಿಡಿಸಿದವು.

ಗಂಡು-ಹೆಣ್ಣೆಂಬ ತಾರತಮ್ಯ ಇರಬಾರದು..... ಎಲ್ಲರಿಗೂ ಸಮಾನತೆ ಬೇಕು...... ಮಹಿಳೆಯರಿಗೂ ಎಲ್ಲಾ ರಂಗದಲ್ಲೂ ಸಮಾನ ಅವಕಾಶ ಲಭಿಸಬೇಕು...... ಎಂದು ಮಹಿಳೆಯರು ಹೋರಾಡಿದ್ದು ಇದಕ್ಕಾಗಿಯೇ?


ಈ ಸದರಿ ಹೆಂಗಸರೇನು ಸಾಮಾನ್ಯ ಪ್ರಜೆಗಳಲ್ಲ, ಎಲ್ಲರೂ ಜನಪ್ರಿಯರು. ಓರ್ವ ಸಮಾಜ ಸೇವಕಿ, ಓರ್ವ ಸಂಸದೆ (ಜನಪ್ರತಿನಿಧಿ), ಓರ್ವ ಸರ್ಕಾರಿ ಸೇವಕಿ, ಒಬ್ಬಳು ಜನರಿಂದಲೇ ಮೇಲೆ ಬಂದ ನಾಯಕಿ(!)

ಮಾತೆ ಎಂದು ಹೇಳಿಕೊಂಡು ಜನರನ್ನು ಮರುಳು ಮಾಡುವ ಮಾದೇವಿ ಎಂಬ ಹೆಂಗಸು ಬಸವಣ್ಣನನ್ನು ಮುಂದಿಟ್ಟುಕೊಂಡು ಲಜ್ಜೆಯಿಲ್ಲದೆ ಬುದ್ಧಿಜೀವಿಗಳನ್ನು ಟೀಕಿಸುತ್ತಾಳೆ, ಸರ್ಕಾರಕ್ಕೆ ಧಮಕಿ ಹಾಕುತ್ತಾಳೆ. ಬಡಬಗ್ಗರನ್ನು ಕಿಂಚಿತ್ತೂ ಕರುಣೆಯಿಲ್ಲದೆ ದಂಡಿಸುತ್ತಾಳೆ. ರಿಯಲ್ ಎಸ್ಟೇಟ್ ದಂಧೆ ಮಾಡುತ್ತಾಳೆ. ಇಂಥಾ ನೀಚ ಹೆಂಗಸಿಂದ ನಾವು ಪ್ರವಚನ ಹೇಳಿಸಿಕೊಳ್ಳಬೇಕು.....!

ನೆಟ್ಟಗೆ ಕನ್ನಡದ ಉಚ್ಚಾರಣೆ ಗೊತ್ತಿರದ ಸಂಸದೆ ತೇಜಸ್ವಿನಿಯಿಂದ ನಾವು ಆಳಿಸಿಕೊಳ್ಳಬೇಕು! ಗಂಡಸರೆಲ್ಲಾ ತನ್ನ ತಾಳಕ್ಕೆ ಕುಣಿಯುತ್ತಾರೆ.... ಎಂತೆಂಥ ಘಟಾನುಘಟಿ ಲೀಡರುಗಳೇ ನನಗೆ ಆತ್ಮೀಯರು ಎನ್ನುತ್ತಲೇ ಜೊಕ್ಕಸ ತುಂಬಿಕೊಳ್ಳುವ ಇಂಥವರನ್ನು ನಮ್ಮ ಜನಪ್ರತಿನಿಧಿಗಳು ಎಂದು ಕೊಂಡಾಡಬೇಕು.......!

ಜನರ ಕಷ್ಟಸುಖಗಳಿಗೆ ಸ್ಪಂದಿಸಿ ದುಷ್ಟರನ್ನು ಶಿಕ್ಷಿಸಿ ಶಿಷ್ಟರಿಗೆ ರಕ್ಷಣೆ ನೀಡಬೇಕಾದ ಪೊಲೀಸ್ ಅಧಿಕಾರಿ ರೂಪಾರಂಥ ವಸೂಲ್ ರಾಣಿಯ ಕೈಗೆ ಕಾನೂನು ನೀಡಿ ನಾವು ಅವರಿಂದ ರಕ್ಷಣೆ ಪಡೆದು ಸೌಖ್ಯವಾಗಿರುವ ಆಸೆಯಿಟ್ಟುಕೊಳ್ಳಬೇಕು....!

ಯಾರದೋ ದುಡ್ಡಲ್ಲಿ ಮಜಾ ಮಾಡುವ, ಬಡವರ ದುಡ್ಡಿನಿಂದಲೇ ಯಶಸ್ಸು ಪಡೆದ ಓರ್ವ ಹೀರೋಯಿನ್ ರಾಧಿಕಾಳಂತಹ ಯಕಶ್ಚಿತ್ ನಟಿಗೆ ಶಿಳ್ಳೆ ಹೊಡೆದು ಜೈಕಾರ ಹಾಕಬೇಕು, ಅವಳು ಅತ್ತರೆ, ನಕ್ಕರೆ, ಕುಣಿದರೆ, ನಲಿದರೆ ನಾವು ಚಪ್ಪಾಳೆ ಹೊಡೆಯಬೇಕು.....! ಎಂಥ ದುರ್ಗತಿ ಬಂತಪ್ಪಾ ಈ ದೇಶಕ್ಕೆ.... ಹೆಂಗಸರ ಈ ಸಣ್ಣತನಗಳಿಗೆ, ಮತ್ಸರಕ್ಕೆ, ದುರಾಚಾರಗಳಿಗೆ ಕೊನೆಯುಂಟೆ?



ಆದರೆ ನಾವು ನಿರಾಶರಾಗಬೇಕಿಲ್ಲ... ದುಷ್ಟ-ದುರ್ಬುದ್ಧಿಯ ಹೆಂಗಸರಂತೆಯೇ, ಶಿಷ್ಟ-ಶೌರ್ಯ-ಸೇವಾ ಮನೋಭಾವದ ಹೆಣ್ಣುಮಕ್ಕಳೂ ತಾಯಂದಿರೂ ನಮ್ಮ ಸಮಾಜದಲ್ಲಿದ್ದಾರೆ. ದುಷ್ಟಶಕ್ತಿಗಳ ವಿರುದ್ಧ ಅಧಿಕಾರ ಚಲಾಯಿಸಿ ಶಿಷ್ಟರನ್ನು ಕಾಪಾಡುವ ಉಕ್ಕಿನ ಮಹಿಳೆ ಮಾಯಾವತಿಯವರು, ದುರ್ಜನರನ್ನು ಅನಾವರಣಗೊಳಿಸುವ ದಿಟ್ಟ ಮಹಿಳೆ ಗೌರಿ ಲಂಕೇಶರೂ, ಇದೇ ಸಂಚಿಕೆಯಲ್ಲಿ ಒಂದು ಶಿಷ್ಟ ಸಮಾಜಕ್ಕೆ ನಾವೇನು ಮಾಡಬೇಕು ಎಂದು ಪಾಠ ಹೇಳಿರುವ ಸಾರಾ ಅಬೂಬಕ್ಕರ್‌ರೂ... ಹಾಗೆಯೇ ಸದಾ ಸಮಾಜಮುಖಿಯಾಗಿ ಆಲೋಚಿಸುವ ಮೇಧಾ ಪಾಟ್ಕರ್‌ರಂತಹ ನೂರಾರು ಮಹಿಳೆಯರೂ ನಮ್ಮೊಳಗಿದ್ದಾರೆ. ಅದೇ ಧೈರ್ಯ, ಅದೇ ಭವರಸೆ.

-ಡಾ. ಕೃಷ್ಣಮೂರ್ತಿ ಚಮರಂ, ಮೈಸೂರು

ತೆಗಳಿಕೆ ಹೊಗಳಿಕೆ

ತೇಜಸ್ವಿನಿ ಎಂಬ ಮಹಿಳಾಮಣಿಯು ರಾಜಕೀಯ ರಂಗಕ್ಕೆ ಬಂದಾಗ ಆಕೆ ಜಾತ್ಯತೀತ ಮೌಲ್ಯಗಳನ್ನು ಮತ್ತು ಕುಟುಂಬ ರಾಜಕಾರಣವನ್ನು ವಿರೋಧಿಸುತ್ತಾಳೆ ಎಂದುಕೊಂಡಿದ್ದೆ. ಆದರೆ ಕೂಗುಮಾರಿ ತೇಜಸ್ವಿನಿ ಇವತ್ತು ಅಪ್ಪಟ ಜಾತಿವಾದಿಗಳು, ಭ್ರಷ್ಟರೂ ಆಗಿರುವ ದೇವೇಗೌಡರ ಕುಟುಂಬದವರ ಪರವಾಗಿ ನಿಂತು ತಾನು ಇತರರಿಗಿಂತ ವಿಭಿನ್ನವೇನಲ್ಲ ಎಂಬುದನ್ನು ಸಾಬೀತು ಪಡಿಸಿದ್ದಾಳೆ. ಈ ಘನ ಕಾರ್ಯಕ್ಕೆ ಆಕೆ ರಾಜಕೀಯಕ್ಕೆ ಬರಬೇಕಿತ್ತೇಕೆ?

- ಡಿ.ಎಲ್. ಚಂದ್ರಿಕಾ, ಹರಪನಹಳ್ಳಿ



ಕೋಟ್ಯಂತರ ರೂಪಾಯಿಗಳ ಬೆಲೆಬಾಳುವ ರೈತರ ಭೂಮಿಯನ್ನು ಕಸಿದು ಐಟಿ ಕಂಪನಿಗಳ ಹೆಸರಲ್ಲಿ ಅಧಿಕಾರಸ್ಥರು ಕಬಳಿಸುತ್ತಿರುವುದರ ಬಗ್ಗೆ ರಾ. ಸೋಮನಾಥರು ವರದಿ ಮಾಡಿದ್ದನ್ನು ಕಂಡು ಸಂತೋಷವಾಯಿತು. ಕರ್ನಾಟಕದ ಜನರಿಗೆ ಆಗುತ್ತಿರುವ ಅನ್ಯಾಯದ ಬಗ್ಗೆ ನಿಮ್ಮ ಪತ್ರಿಕೆ ವರದಿ ಮಾಡುತ್ತಲೇ ಬಂದಿದೆಯಲ್ಲದೆ, ಈ ಜನಪರ ಧೋರಣೆಯನ್ನೇ ಮುಂದುವರೆಸಿ ಎಂದು ಕೇಳಿಕೊಳ್ಳುತ್ತೇನೆ.

- ಬಿ. ಎನ್. ಜನಾರ್ದನ, ಬೆಂಗಳೂರು

ಆಗಸ್ಟ್ 15ರ ಸಂಚಿಕೆ ಅದ್ಭುತವಾಗಿತ್ತು. ತಾವು ಪರಮ ದೇಶಭಕ್ತರು ಎಂಬಂತೆ ನಟಿಸುತ್ತಿರುವ ಬಿಜೆಪಿ ರಾಜಕಾರಣಿಗಳು, ಅದರಲ್ಲೂ ಆರ್. ಅಶೋಕ್ ಎಂಬ ಭೂಗಳ್ಳ ಲಪಟಾಯಿಸಿರುವ ಅಪಾರ ಭೂಮಿಯ ಬಗ್ಗೆ ವರದಿ ಮಾಡಿ ಇವರ ದೇಶದ್ರೋಹದ ಕೆಲಸವನ್ನು ಬಯಲಿಗೆಳೆದಿದ್ದೀರಿ. ಈ ಸರಣಿ ವರದಿಯನ್ನು ಬರೆದ ರಾ.ಸೋಮನಾಥರಿಗೂ, ಪ್ರಕಟಿಸಿದ ನಿಮಗೂ ಧನ್ಯವಾದಗಳು.

-ಬ್ರಹ್ಮಾನಂದ ರೆಡ್ಡಿ, ತುಮಕೂರು

ಮಾತೆ ಮಾದೇವಿಯು ಬಡ ರೈತನ ಭೂಮಿಯನ್ನು ಅಕ್ರಮವಾಗಿ ಕಬಳಿಸಿರುವುದು, ಮತ್ತದನ್ನು ಕಾಯಲಿಕ್ಕೆ ಸಾಕ್ಷಾತ್ ಬಸವಣ್ಣನನ್ನೇ ಕೂರಿಸಿರುವುದು ಆಕೆಯ ಅಸಲಿ ಉದ್ದೇಶಗಳನ್ನು ಜಗಜ್ಜಾಹೀರುಗೊಳಿಸುತ್ತದೆ. ಆಕೆಯ ಈ ಕಪಟತನವನ್ನು ಈ ನಿಮ್ಮ ಪತ್ರಿಕೆ ಮಾತ್ರ ಮಾಡಲು ಸಾಧ್ಯ. ಈ ವರದಿಯನ್ನು ಓದಿ ಹಾಲು ಕುಡಿದಷ್ಟು ಸಂತೋಷವಾಯಿತು ಎಂದು ಮಾತ್ರ ಹೇಳಬಲ್ಲೆ.


- ರಫೀಕ್, ಬಾಗಲಕೋಟೆ

ಈ ಜನ್ಮದಲ್ಲಿ ಬಸವರಾಜ ರಾಯರೆಡ್ಡಿಗೆ ಬುದ್ಧಿ ಬರೊಲ್ಲ. ಅವರ ಆಟೋಟೋಪಗಳನ್ನು ಕಂಡು ಇವರು ಮನುಷ್ಯರಾ, ನಿಜವಾಗಲೂ ಜನಪ್ರತಿನಿಧಿಗಳಾ, ನಮ್ಮದು ಪ್ರಜಾಪ್ರಭುತ್ವವಾ ಎಂಬ ಗೊಂದಲಗಳು ಶುರುವಾಗುತ್ತವೆ.

- ಟಿ. ಯು. ಕುಮಾರ್, ರಾಮದುರ್ಗ


'ಮಂತ್ರಿ ಕಟ್ಟ್ಯಾ ಭಾರಿ ಬಂಗಲೆ ನೆಟ್ಟ' ವರದಿಯನ್ನೋದಿ ದಿಗಿಲಾಯಿತು. ಶಿವಾಜಿನಗರದ ಈ ಚಡ್ಡಿ ಶಾಸಕ ಕಂ ಮಂತ್ರಿ ಬೆಂಗಳೂರಿನ ಬಡವರ ಭೂಮಿ ಕಸಿದು ಇಂತಹದ್ದೊಂದು ಬಂಗಲೆ ಕಟ್ಟಿಸಿರುವುದು ಭ್ರಷ್ಟಾಚಾರದ ಪರಮಾವಧಿಯಾಗಿದೆ. ಜನರೇ ಈ ಭಂಡನಿಗೆ ಮುಂದಿನ ಚುನಾವಣೆಗಳಲ್ಲಿ ಬುದ್ಧಿ ಕಲಿಸಬೇಕಿದೆ.

-ರಮಜಾನ್ ಕೆ. ಕೊರ್ತಿ, ಬಾದಾಮಿ



ಪಟ್ನಾಯಕನ ಚೇಷ್ಟೆಗಳು

ಆರ್.ಪಿ. ಪಟ್ನಾಯಕ್ ಎಂಬ ಸಂಗೀತ ನಿರ್ದೇಶಕ ಕನ್ನಡ ಚಿತ್ರರಂಗಕ್ಕೆ ಅದ್ಯಾವ ಗಳಿಗೆಯಲ್ಲಿ ವಕ್ಕರಿಸಿದರೋ ಏನೋ? ಒಂದೆರಡು ಚಿತ್ರಗಳಿಗೆ ಅವರು ಒಳ್ಳೆಯ ಸಂಗೀತ ನಿರ್ದೇಶನ ನೀಡಿದರು ಎಂಬುದು ನಿಜ. ಅವುಗಳಲ್ಲಿ ಮುಖ್ಯವಾದದ್ದು ಪ್ರೇಮ್ ನಿರ್ದೇಶನದ 'ಎಕ್ಸ್‌ಕ್ಯೂಸ್‌ಮಿ'. ಈ ಚಿತ್ರ ಸೂಪರ್ ಹಿಟ್ ಆಗಲು ಇವರ ಸಂಗೀತವೂ ಕಾರಣವಾಗಿತ್ತು. ಅದಾದನಂತರ ಒಂದರ ಹಿಂದೆ ಒಂದು ಚಿತ್ರಗಳು ಪಟ್ನಾಯಕ್ ಪಾಲಿಗೆ ಒದಗಿಬಂದವು. ಆ ಸಂದರ್ಭದಲ್ಲಿ ಗುರುಕಿರಣ್ ಖಾಲಿ ಕುಳಿತುಕೊಳ್ಳುವಂತಹ ಪರಿಸ್ಥಿತಿ ನಿರ್ಮಾಣವಾಗಿತ್ತು. ಆದರೆ 'ಎಕ್ಸ್‌ಕ್ಯೂಸ್‌ಮಿ' ಥರ ಮತ್ತೊಂದು ಅದ್ಭುತ ಸಂಗೀತವನ್ನು ಪಟ್ನಾಯಕ್ ಮತ್ತೆ ನೀಡಲೇ ಇಲ್ಲ.



ಇದಷ್ಟೇ ಅಲ್ಲದೆ ಪಟ್ನಾಯಕ್ ಕನ್ನಡ ಚಿತ್ರರಂಗವನ್ನು ಬೇರೆ ತರಹವೂ ಕಾಡಲಾರಂಭಿಸಿದರು. ತೆಲುಗು ಚಿತ್ರರಂಗದಲ್ಲಿ ಈ ಮನುಷ್ಯ ಆಟಕ್ಕೂ ಇಲ್ಲ, ಲೆಕ್ಕಕ್ಕೂ ಇಲ್ಲ. ಆದರೂ 'ಎಕ್ಸ್‌ಕ್ಯೂಸ್‌ಮಿ'ಯ ನಿರ್ಮಾಪಕ ಎನ್.ಎಂ. ಸುರೇಶ್ ಅವರನ್ನು ಪುಸಲಾಯಿಸಿ ತೆಲುಗಿನಲ್ಲೊಂದು ಚಿತ್ರವನ್ನು ನಿರ್ಮಿಸುವಂತೆ ಮಾಡಿದರು. ಆ ಚಿತ್ರಕ್ಕೆ ಅವರೇ ನಾಯಕನಟರೂ ಆದರು. ಆ ಮೂಲಕ ತಾನೂ ನಾಯಕ ನಟನಾಗಬೇಕೆಂಬ ತಮ್ಮ ಮಹತ್ವಾಕಾಂಕ್ಷೆಯನ್ನೇನೋ ಈಡೇರಿಸಿಕೊಂಡರು. ಆದರೆ ಆ ಚಿತ್ರ ಬಾಕ್ಸಾಫೀಸಿನಲ್ಲಿ ಅಮೋಘವಾಗಿ ನೆಲಕಚ್ಚಿದ್ದರಿಂದ ಕನ್ನಡದ ನಿರ್ಮಾಪಕನೊಬ್ಬ ಕೇರ್ ಆಫ್ ಫುಟ್‌ಪಾತ್ ಆದರು. ಆ ಚಿತ್ರದ ಶಾಕ್‌ನಿಂದ ಚೇತರಿಸಿಕೊಳ್ಳಬೇಕಾದರೆ ಸುರೇಶ್‌ಗೆ ಬಹಳ ಸಮಯವೇ ತಗುಲಿತು.



ಈಗ ಪಟ್ನಾಯಕ್ ಕನ್ನಡ ಚಿತ್ರರಂಗವನ್ನು ಮತ್ತೊಂದು ರೀತಿಯಲ್ಲಿ ಕಾಡಲಾರಂಭಿಸಿದ್ದಾರೆ. ಅದರಂತೆ ಮೊನ್ನೆ ತಾನೇ 'ಸವಿಸವಿ ನೆನಪು' ಚಿತ್ರದಿಂದಾಗಿ ಕೋಟ್ಯಂತರ ರೂಪಾಯಿಗಳನ್ನು ಕಳೆದುಕೊಂಡ ನಿರ್ಮಾಪಕ ಎಸ್.ವಿ. ಬಾಬು ಈಗ ಪಟ್ನಾಯಕ್ ನಿರ್ದೇಶನದಲ್ಲಿ ತೆಲುಗು ಚಿತ್ರವೊಂದನ್ನು ಅತ್ಯಂತ ಅದ್ಧೂರಿಯಾಗಿ ಆರಂಭಿಸಿದ್ದಾರೆ. ಅಂದಹಾಗೆ ಬಾಕ್ಸ್ ಆಫೀಸಿನಲ್ಲಿ ಮಕಾಡೆ ಮಲಗಿದ 'ಸವಿಸವಿನೆನಪು'ಗೂ ಪಟ್ನಾಯಕ್ ಸಂಗೀತ ನೀಡಿದ್ದರು ಎಂಬುದನ್ನಿಲ್ಲಿ ಸ್ಮರಿಸಬಹುದು. ಈ ಚಿತ್ರವನ್ನು ತೆಲುಗು ಮತ್ತು ಇತರ ಭಾಷೆಗಳಿಗೆ ಡಬ್ ಮಾಡಿ ರಿಲೀಸ್ ಮಾಡಿದರೆ ಕೋಟ್ಯಂತರ ರೂಪಾಯಿ ಲಾಭ ಬರುತ್ತದೆ ಎಂದು ಬಾಬುಗೆ ಆಸೆ ತೋರಿಸಿದ್ದು ಕೂಡ ಇದೇ ಪಟ್ನಾಯಕ್. ಕನ್ನಡದಲ್ಲೇ ಮುಗ್ಗರಿಸಿದ ಆ ಸಿನಿಮಾ ಇನ್ನು ಬೇರೆ ಭಾಷೆಗಳಲ್ಲಿ ಗೆಲ್ಲುವುದುಂಟೇ?

ಈಗ ಚೊಚ್ಚಲ ನಿರ್ದೇಶಕನಾಗಿ ಆರೇಳು ಕೋಟಿ ಬಜೆಟ್‌ನ ಚಿತ್ರ ಮಾಡಲು ಹೊರಟಿರುವ ಪಟ್ನಾಯಕ್ ಎನ್.ಎಂ. ಸುರೇಶ್ ಅವರನ್ನು ಮುಳುಗಿಸಿದಂತೆ ಬಾಬು ಅವರನ್ನು ಮುಳುಗಿಸದಿರಲಿ ಎಂಬುದೇ ಎಲ್ಲರ ಆಶಯ. ■

ರಾಣಿಯನ್ನು ಜರಿದ ಐಶ್ವರ್ಯ




ಐಶ್ವರ್ಯ ರೈಳಿಗೂ, ರಾಣಿ ಮುಖರ್ಜಿಗೂ ಮೊದಲಿನಿಂದಲೂ ಜಿದ್ದಾಜಿದ್ದಿ. ಅದರಲ್ಲೂ ತನ್ನ ಪತಿದೇವ ಅಭಿಷೇಕ್ ಬಚ್ಚನ್ ಮದುವೆಗೆ ಮುನ್ನ ರಾಣಿಯೊಂದಿಗೂ ಸಂಬಂಧ ಹೊಂದಿದ್ದ ಮಾತ್ರವಲ್ಲ, ಅವರಿಬ್ಬರ ಕಾಂಬಿನೇಷನ್ ಚಿತ್ರಗಳು ಗೆದ್ದಿದ್ದವು ಎಂಬುದು ಇವತ್ತಿಗೂ ಐಶ್ವರ್ಯಳಿಗೆ ನುಂಗಲಾರದ ತುತ್ತಾಗಿವೆ. ಅದಷ್ಟೇ ಅಲ್ಲದೆ, ಐಶ್ವರ್ಯ ರೈ ಶಾರುಖ್ ಖಾನ್‌ನೊಂದಿಗೆ ಆತ ನಿರ್ಮಿಸುತ್ತಿದ್ದ 'ಚಲ್ತೆ ಚಲ್ತೆ' ಸಿನಿಮಾದಲ್ಲಿ ನಟಿಸುತ್ತಿದ್ದಾಗ, ಅದರ ಚಿತ್ರೀಕರಣ ನಡೆಯುತ್ತಿದ್ದ ಸೆಟ್ಟಿಗೇ ಬರುತ್ತಿದ್ದ ಆಗಿನ ತನ್ನ ಪ್ರಿಯಕರ ಸಲ್ಮಾನ್ ಖಾನ್ ಗದ್ದಲವನ್ನು ತಡೆಯಲಾಗದೇ ಶಾರುಖ್ ಅವಳನ್ನೇ ಚಿತ್ರದಿಂದ ಬಿಸಾಡಿ ಆ ಜಾಗಕ್ಕೆ ರಾಣಿಯನ್ನು ಹಾಕಿಕೊಂಡಿದ್ದನ್ನೂ ಐಶ್ವರ್ಯ ಇನ್ನೂ ಮರೆತಿಲ್ಲ.

ಇದೆಲ್ಲದರ ಪರಿಣಾಮ ತನ್ನ ಮದುವೆಗೆ ರಾಣಿ ಮುಖರ್ಜಿಯನ್ನು ಅಮಿತಾಭ್ ಆಗಲೀ ಅಭಿಷೇಕ್ ಆಗಲೀ ಆಹ್ವಾನಿಸದಂತೆ ಐಶ್ವರ್ಯ ತಡೆದಿದ್ದಳು. ಅದರಲ್ಲೂ ಅಗತಾನೇ ಅಮಿತಾಭ್ ಮತ್ತು ರಾಣಿ ನಟಿಸಿದ್ದ 'ಬ್ಲಾಕ್' ಚಿತ್ರ ಗೆದ್ದಿದ್ದರೂ, ಆಕೆ ಮನೆಯವರಿಗೆ ಹತ್ತಿರದವಳಾಗಿದ್ದರೂ ಕೂಡ.




ಈಗಲೂ ಐಶ್ವರ್ಯ ತನ್ನ ಈ ವೈರತ್ವವನ್ನು ಮುಂದುವರೆಸಿದ್ದಾಳೆ. ಮೊನ್ನೆ ಅಭಿಷೇಕ್ ಮತ್ತು ರಾಣಿ ನಟಿಸುತ್ತಿರುವ 'ಲಗಾ ಚುನರಿ ಮೆ ದಾಗ್' ಎಂಬ ಸಿನಿಮಾದ ಸೆಟ್ಟಿಗೆ ಹೋದ ಐಶ್ವರ್ಯ ರಾಣಿಯ ಮೇಕಅಪ್‌ಅನ್ನು ಜರಿದು ಬಂದಿದ್ದಾಳೆ. ಇದರಿಂದ ರಾಣಿ ಕುದಿಯಲಾರಂಭಿಸಿದ್ದಾಳೆ. ಇವರಿಬ್ಬರ ಈ ಕೋಳಿ ಜಗಳ ಇನ್ನು ಯಾವ ಯಾವ ರೂಪ ಪಡೆಯುತ್ತದೋ? ■





ಅಮಿತಾಭ್‌ನನ್ನು ಅನುಕರಿಸಲು ನಿರಾಕರಿಸಿದ ರಜನಿ

ಸೂಪರ್ ಡೂಪರ್ ಹಿಟ್ ಆಗಿರುವ ತಮಿಳು ಚಿತ್ರ 'ಶಿವಾಜಿ'ಯನ್ನು ಈಗ ಹಿಂದಿಗೆ ಡಬ್ ಮಾಡಲಾಗುತ್ತಿದೆಯಲ್ಲದೆ ಅದರ ಒಂದು ಹಾಡನ್ನು ಮತ್ತೆ ಚಿತ್ರೀಕರಿಸಲಾಗುತ್ತಿದೆ. ಮೂಲ ತಮಿಳಿನಲ್ಲಿ ರಜನೀಕಾಂತ್‌ರವರು ಕಮಲ್ ಹಾಸನ್, ಎಂಜಿಆರ್ ಮತ್ತು ಶಿವಾಜಿ ಗಣೇಶ್‌ರವರ ರೀತಿಯಲ್ಲಿ ಕುಣಿದಾಡುವುದನ್ನು ತೋರಿಸಲಾಗಿತ್ತು, ಆದರೆ ಅದರ ಹಿಂದಿ ಅವತರಣಿಕೆಯಲ್ಲಿ ಶಾರುಖ್ ಖಾನ್, ದೇವ್ ಆನಂದ್ ಮತ್ತು ಅಮಿತಾಭ್ ಬಚ್ಚನ್‌ರವರನ್ನು ಅನುಕರಿಸುವಂತೆ ಯೋಜಿಸಲಾಗಿತ್ತು.



ಆದರೆ ಅಮಿತಾಭ್‌ರನ್ನು ಬಹಳಷ್ಟು ಮೆಚ್ಚುವ ರಜನಿಕಾಂತ್‌ರವರು ಯಾವುದೇ ಕಾರಣಕ್ಕೂ ತಾವು ಅವರನ್ನು ಅನುಕರಿಸುವುದಿಲ್ಲ ಎಂದು ಹಟತೊಟ್ಟರಂತೆ. ಈಗ ಬೇರೆ ನಟರೊಬ್ಬರನ್ನು ಅನುಕರಿಸುವಂತೆ ಅದನ್ನು ಚಿತ್ರೀಕರಿಸಲಾಗಿದೆ. ಹಿಂದಿ ಅವತರಣಿಕೆಯನ್ನು ಬರುವ ಡಿಸೆಂಬರ್ ತಿಂಗಳಲ್ಲಿ ಬಿಡುಗಡೆಮಾಡುವ ಯೋಜನೆಗಳಿವೆ.

ಅಂದಹಾಗೆ ಉತ್ತರ ಭಾರತದ ಸೂಪರ್‌ಸ್ಟಾರ್ ಅಮಿತಾಭ್ ಬಚ್ಚನ್ ಮತ್ತು ದಕ್ಷಿಣ ಭಾರತದ ಸೂಪರ್‌ಸ್ಟಾರ್ ರಜನಿ ನಡುವೆ ಪರಸ್ಪರ ಅಭಿಮಾನವಿರುವುದು ಈ ಪ್ರಕರಣದ ಮೂಲಕ ಮತ್ತೊಮ್ಮೆ ಸಾಬೀತಾಗಿದೆ. ■

'ತನಿಖೆ'ಗೆ ಯೋಗ್ಯವಾದ ಗುಲ್ಜಾರ್ ಬದುಕು

ಕನ್ನಡ ಚಿತ್ರರಂಗ ತನ್ನ ಇತಿಹಾಸದಲ್ಲೇ ಕಂಡರಿಯದ ನಟ ಭಯಂಕರ ಗುಲ್ಜಾರ್‌ಖಾನ್ ಮೊನ್ನೆಯಷ್ಟೇ ಅನಾರೋಗ್ಯದಿಂದ ನಿಧನ ಹೊಂದಿದ್ದಾರೆ.

ಚಿತ್ರರಂಗದಲ್ಲಿ ನೂರಾರು ಸಿನಿಮಾಗಳನ್ನು ಮಾಡಿ ಲೆಕ್ಕವಿಲ್ಲದಷ್ಟು ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡ ಹಲವಾರು ನಟ, ನಿರ್ದೇಶಕರು ಹೇಳಹೆಸರಿಲ್ಲದಂತೆ ಮರೆತುಹೋಗುವ ಇಂದಿನ ಸಂದರ್ಭದಲ್ಲಿ ಕೇವಲ ಒಂದೇ ಒಂದು ಚಿತ್ರ ಮಾಡಿ ಇನ್ನಿಲ್ಲದಂತೆ ಹೆಸರು ಮಾಡಿದ 'ಭಯಾನಕ ಪ್ರತಿಭೆ' ಗುಲ್ಜಾರ್ ಖಾನ್.

ಹಾಗೆ ನೋಡಿದರೆ ರಿಯಲ್ ಎಸ್ಟೇಟ್ ಉದ್ಯಮಿಗಳು ಚಿತ್ರರಂಗ ಪ್ರವೇಶಿಸುವುದಕ್ಕೆ ನಾಂದಿ ಹಾಡಿದ್ದೇ ಗುಲ್ಜಾರ್. ಗಲ್ಫ್‌ನಲ್ಲಿ ಒಂದಷ್ಟು ದಿನ ನೆಲೆಸಿ ಕೈಲೊಂದಷ್ಟು ಕಾಸು ಮಾಡಿದ್ದ ಈತ ನಂತರ ಬೆಂಗಳೂರಿಗೆ ಬಂದು ರಿಯಲ್‌ಎಸ್ಟೇಟ್ ಉದ್ಯಮದಲ್ಲಿ ಸಿನಿಮಾ ಮಾಡುವಷ್ಟು ದುಡ್ಡು ಸಂಪಾದಿಸಿದ್ದ. ಯಾವಾಗ ಕೈತುಂಬ ಹಣ ಸಂಪಾದಿಸಿದನೋ, ಆಗ ಚಿತ್ರರಂಗದಲ್ಲಿ ಯಾರೂ ಮಾಡದ್ದನ್ನು ತಾನು ಮಾಡಬೇಕು, ದೊಡ್ಡ ಸ್ಟಾರ್ ಆಗಬೇಕು ಎಂಬ ವಿಚಿತ್ರ ಹುಚ್ಚು ಈತನಿಗೆ ತಗುಲಿಕೊಂಡಿತು.



'ತನಿಖೆ' ಈತನ ಮೊದಲ ಮತ್ತು ಕೊನೆಯ ಸಿನಿಮಾವಾಗಿತ್ತು. ಈ ಚಿತ್ರಕ್ಕೆ ಗುಲ್ಜಾರ್ ಬರೀ ನಾಯಕ ಮಾತ್ರವಲ್ಲದೆ, ಕಥೆ, ಚಿತ್ರಕತೆ, ಸಂಗೀತ, ಸಾಹಿತ್ಯ, ಸಂಭಾಷಣೆ ಎಲ್ಲವನ್ನೂ ತಾನೊಬ್ಬನೇ ನಿಭಾಯಿಸಿದ್ದ. ಅಷ್ಟೇ ಅಲ್ಲದೆ ದಕ್ಷಿಣ ಭಾರತದ ಮಹಾನ್ ಗಾಯಕ ಎಸ್.ಪಿ. ಬಾಲಸುಬ್ರಮಣ್ಯಂರಿಂದ ಒಂದು ಗೀತೆಯನ್ನು ಹಾಡಿಸಿ ನಂತರ ಅವರ ಧ್ವನಿ ತನಗಿಷ್ಟವಿಲ್ಲವೆಂದು ತಾನೇ ಮತ್ತೆ ಆ ಹಾಡನ್ನು ಹಾಡಿದ್ದ. ನಲವತ್ತು ಸಾವಿರಕ್ಕೂ ಹೆಚ್ಚು ಗೀತೆಗಳನ್ನು ಹಾಡಿರುವ ಗಾಯಕ ಎಸ್ಪಿಯವರನ್ನು ಮೊಟ್ಟ ಮೊದಲ ಬಾರಿಗೆ ಟ್ರ್ಯಾಕ್‌ಸಿಂಗರ್ ಆಗಿಸಿದ ಕೀರ್ತಿ ಈತನದ್ದು!

ಈತ ಇಷ್ಟಕ್ಕೇ ಸುಮ್ಮನಿರದೆ, ಕೆಂಪೇಗೌಡ ರಸ್ತೆಯಲ್ಲಿ 'ಪರಶುರಾಮ' ಚಿತ್ರದ ಡಾ. ರಾಜ್‌ಕುಮಾರ್ ಕಟೌಟ್‌ಗೆ ಸ್ಪರ್ಧೆಯೆಂಬಂತೆ ತನ್ನ ಬೃಹತ್ ಗಾತ್ರದ ಕಟೌಟೊಂದನ್ನು ನಿಲ್ಲಿಸಿದ್ದ. ಈತನ ಡಬ್ಬಾ ಚಿತ್ರವನ್ನು ನೋಡಲು ಥಿಯೇಟರಿಗೆ ಬರುವ ಪ್ರೇಕ್ಷಕರಿಗೆ ಸ್ಟೀಲ್ ಡಬ್ಬಾಗಳನ್ನು ವಿತರಿಸುವ ವಿಲಕ್ಷಣ ಕೆಲಸವನ್ನೂ ಈತ ಮಾಡಿದ್ದ.

ಅಂತೂ ಇಂತೂ 'ತನಿಖೆ'ಯನ್ನು ನೂರು ದಿನ ಓಡಿಸಿದ ಈತ ಪತ್ರಕರ್ತರ, ಚಿತ್ರವಿಮರ್ಶಕರ ಕಟುವಾದ ಟೀಕೆ ಮತ್ತು ಲೇವಡಿಗಳನ್ನೂ ಅಷ್ಟೇ ಸುಲಭವಾಗಿ ಸ್ವೀಕರಿಸಿದ್ದ. 'ತನಿಖೆ'ಯಿಂದ ಈ ಪರಿ ಹೆಸರು ಮಾಡಿದ ಗುಲ್ಜಾರ್ ಕೋಲಾರದಲ್ಲಿ ಜಮೀನಿನ ವಿಷಯಕ್ಕೆ ಸಂಬಂಧಿಸಿದಂತೆ ದಲಿತ ನಾಯಕನೊಬ್ಬನ ಕೊಲೆ ಕೇಸಿನಲ್ಲಿ ಸಿಕ್ಕುಬಿದ್ದು ಜೈಲು ಪಾಲಾಗಿದ್ದ. ಬರಬರುತ್ತಾ ಗುಲ್ಜಾರ್ ಖಾನ್ ಪೊಲೀಸರ 'ತನಿಖೆ'ಯಿಂದ ಸಿಕ್ಕಾಪಟ್ಟೆ ತಲೆ ಕೆಡಿಸಿಕೊಂಡು ಅಪ್ಸೆಟ್ ಆಗಿಬಿಟ್ಟ. ನಂತರ ಜಾಮೀನಿನ ಮೇಲೆ ಜೈಲಿನಿಂದ ಹೊರಬಂದು 'ಸಾರಥಿ' ಎಂಬ ಸಿನಿಮಾವನ್ನು ಆರಂಭಿಸಿದನಾದರೂ ಅದು ಮುಂದೆ ಸಾಗಲೇ ಇಲ್ಲ.

ಈಗ ಆ ಸಾರಥಿಯ ರಥವಾದ ದೇಹವೇ ಕೈಕೊಟ್ಟು ಗುಲ್ಜಾರ್ ಖಾನ್ ಕೊನೆಯುಸಿರೆಳೆದಿದ್ದಾನೆ. ■

ಸುಧಾರಾಣಿ ಕುಟುಂಬದಿಂದ ಮತ್ತೊಬ್ಬಳು ನಟಿ



ಸುಧಾರಾಣಿ ಮನೆಯಿಂದ ಮತ್ತೊಂದು ಸುದ್ದಿ ಹೊರಬಿದ್ದಿದೆ. ಇತ್ತೀಚೆಗೆ ಅವರ ಸಹೋದರ ಮುರಳಿ 'ಬಾ ಬೇಗ ಚಂದಮಾಮ' ಎಂಬ ಚಿತ್ರದ ನಿರ್ದೇಶನಕ್ಕೆ ಇಳಿದು ತಂಗಿಯ ರೀತಿಯಲ್ಲಿ ಚಿತ್ರರಂಗಕ್ಕೆ ಕಾಲಿಟ್ಟಿದ್ದರು. ಇದೀಗ ಸುಧಾರಾಣಿಯ ಮತ್ತೊಬ್ಬ ಸಹೋದರ ಅರುಣ್‌ರ ಮಗಳು ನಾಯಕಿಯಾಗಿ ಚಿತ್ರರಂಗಕ್ಕೆ ಆರಂಗೇಟ್ರಂ ಮಾಡಿದ್ದಾಳೆ. ಈಕೆಯ ಹೆಸರು ಗಾಯತ್ರಿ ರಾವ್. ದುಂಡುದುಂಡಾಗಿರುವ ಈ ಮುದ್ದಾದ ಕನ್ನಡತಿ ನಟಿಸುತ್ತಿರುವುದು ತೆಲುಗು ಚಿತ್ರದಲ್ಲಿ. ಅದರ ಹೆಸರು 'ಹ್ಯಾಪಿ ಡೇಸ್'. ಈ ಚಿತ್ರದ ನಿರ್ದೇಶಕ ಶೇಖರ್ ಕಮುನುಲ್ಲಾ. ಟೀನೇಜರ್ಸ್ ಲವ್‌ಸ್ಟೋರಿಯನ್ನು ಹೊಂದಿರುವ ಈ ಚಿತ್ರದ ಹಾಡುಗಳು ಈಗಾಗಲೇ ಅಲ್ಲಿಯ ಹದ್ದೆಹುಡುಗರನ್ನು ಆಕರ್ಷಿಸಿದೆ.

ಕನ್ನಡದ ಅನೇಕ ನಿರ್ಮಾಪಕರು ಈಕೆಯನ್ನು ಮಾತನಾಡಿಸಿದ್ದರೂ ಯಾವುದೂ ಇನ್ನೂ ಫಿಕ್ಸ್ ಆಗಿಲ್ಲ. ಅಂತೂ ಇಂತೂ ನಾಯಕಿಯರ ಕೊರತೆ ಇರುವ ಈಗಿನ ಸಂದರ್ಭದಲ್ಲಿ ಈ ಹುಡುಗಿ ಇಲ್ಲಿ ಅವಕಾಶ ಗಿಟ್ಟಿಸಿದರೂ ಆಶ್ಚರ್ಯವಿಲ್ಲ. ಅದೇನೇ ಇರಲಿ, ಸುಧಾರಾಣಿ ಕುಟುಂಬವೂ ಫುಲ್‌ಟೈಂ ಕನಸಿನ ಲೋಕಕ್ಕೆ ಅರ್ಪಿಸಿಕೊಳ್ಳುತ್ತಿರುವುದು ಸ್ವಾಗತಾರ್ಹ.


'ಭಾರ' ಕಳೆದುಕೊಂಡ ರಾಂಪ್ರಸಾದ್



ದಷ್ಟಪುಷ್ಟ ದೇಹದಾರ್ಢ್ಯದ ನಿರ್ಮಾಪಕ ಅಶ್ವಿನಿ ರಾಂಪ್ರಸಾದ್ ವಿಥೀರನ ಸುಮಾರು ಇಪ್ಪತ್ತು ಕೆ.ಜಿ. ತೂಕವನ್ನು ಇಳಿಸಿದ್ದಾರೆ. ಹಾಗಂತ ಅಶ್ವಿನಿ ರಾಂ ಪ್ರಸಾದ್ ತೂಕ ಇಳಿಸಿದ್ದಕ್ಕೂ, ಅವರ ನಿರ್ಮಾಣದ 'ಪ್ರೀತಿ ಏಕೆ ಭೂಮಿ ಮೇಲಿದೆ' ಚಿತ್ರ ಇನ್ನೂ ಸಂಪೂರ್ಣವಾಗದಿರುವುದಕ್ಕೂ ಯಾವುದೇ ಸಂಬಂಧವಿಲ್ಲ. ಹೀಗಾಗಿ ಅವರ ತೂಕ ಇಳಿಸಿದ ಕ್ರೆಡಿಟ್ಟನ್ನು ನಿರ್ದೇಶಕ ಪ್ರೇಮ್ ಕ್ಲೈಮ್ ಮಾಡುವಂತಿಲ್ಲ.

ವಾಸ್ತವ ಸಂಗತಿಯೇನೆಂದರೆ, ಸುಮಾರು ಎರಡು ವರ್ಷಗಳ ಹಿಂದೆ ಅಶ್ವಿನಿ ರಾಂಪ್ರಸಾದ್ ಕಾರಿನಲ್ಲಿ ಪ್ರಯಾಣಿಸುತ್ತಿದ್ದಾಗ ಮೂಳೆ ಮುರಿದುಕೊಂಡಿದ್ದರು. ಇದರಿಂದಾಗಿ ಸುಮಾರು ಒಂದೂವರೆ ತಿಂಗಳು ಆಸ್ಪತ್ರೆಯಲ್ಲಿದ್ದರು. ಆಗ ವೈದ್ಯರು 'ನೀವು ನಿಮ್ಮ ತೂಕ ಇಳಿಸದಿದ್ದರೆ, ಮುಂಬರುವ ದಿನಗಳಲ್ಲಿ ಬಹಳ ಕಷ್ಟವಾಗುತ್ತದೆ' ಎಂದು ಸೂಚನೆ ನೀಡಿದ್ದರಂತೆ. ಹೀಗಾಗಿ ರಾಂಪ್ರಸಾದ್ ಈಗ ತೂಕ ಇಳಿಸಿದ್ದಾರೆ. ಆದರೆ ಗಾಂಧಿನಗರದ ಕುಹಕಿಗಳು ಹೇಳುತ್ತಿರುವುದೇನೆಂದರೆ "ರಾಂಪ್ರಸಾದ್ ಪಾಲಿಗೆ 'ಪ್ರೀಏಭೂಮೇ' ಚಿತ್ರ ಭಾರವಾಗಿದೆ. ಆ ಭಾರವನ್ನು ಹೊತ್ತು ಹೊತ್ತು ಇವರು ಸ್ಲಿಂ ಆಗಿದ್ದಾರೆ" ಎಂಬುದು! ಇನ್ನು ಚಿತ್ರ ಬಿಡುಗಡೆಯಾದ ಮೇಲೆ ರಾಂಪ್ರಸಾದ್ ಸಂಪೂರ್ಣವಾಗಿ ಕರಗಿಹೋದರೆ? ಎಂಬ ಪ್ರಶ್ನೆಗೆ ಯಾರಲ್ಲೂ ಉತ್ತರವಿಲ್ಲ....

ಸದ್ದುಗದ್ದಲದ ನಡುವೆ 'ಏಕಲವ್ಯ'



ಒಂದೆಡೆ ಅತ್ಯುತ್ತಮ ಗೀತರಚನೆಕಾರ ಎಂಬ ರಾಷ್ಟ್ರ ಪ್ರಶಸ್ತಿ ಪಡೆದು ಸುದ್ದಿ ಮಾಡಿದ, ಇನ್ನೊಂದು ಕಡೆ ರಾಜ್ಯ ಪ್ರಶಸ್ತಿಗಳ ವಿರುದ್ಧ ನ್ಯಾಯಾಲಯದಲ್ಲಿ ಮೊಕದ್ದಮೆ ಹೂಡಿ ಗದ್ದಲ ಮಾಡಿದ ಬರಗೂರು ರಾಮಚಂದ್ರಪ್ಪ ಈಗ ಯಾವ ಸದ್ದುಗದ್ದಲವಿಲ್ಲದೆ ಚಿತ್ರವೊಂದನ್ನು ಸಂಪೂರ್ಣಗೊಳಿಸಿದ್ದಾರೆ. ಅವರದೇ ನಿರ್ದೇಶನವಾದ 'ತಾಯಿ' ಚಿತ್ರವನ್ನು ಸಾರ್ವಜನಿಕರಿಗೆ ಪ್ರದರ್ಶಿಸುವ ಮುನ್ನವೇ ಅವರು 'ಏಕಲವ್ಯ'ವನ್ನು ಮಾಡಿ ಮುಗಿಸಿದ್ದಾರೆ.

ಅಂದಹಾಗೆ, ಮುಂದಿನ ವರ್ಷ ರಾಜ್ಯ ಪ್ರಶಸ್ತಿಗಳ ಆಯ್ಕೆ ಸಮಿತಿಗೆ ಅಧ್ಯಕ್ಷರಾಗುವವರು 'ಏಕಲವ್ಯ'ದ ಬಗ್ಗೆ ಎಚ್ಚರದಿಂದಿರುವುದು ಒಳಿತು ಎಂದು ಹಲವರು ತಮಾಷೆ ಮಾಡುತ್ತಿರುವುದು ಸುಳ್ಳಲ್ಲ!

'ಅನಾಥರ' ನೆರವಿಗೆ ನಿಂತ ಅಣ್ಣ, ತಂಗಿ



ಮುಂದಿನ ವಾರ ಬಿಡುಗಡೆಯಾಗಲಿರುವ 'ಅನಾಥರು' ಚಿತ್ರದ ಕ್ಯಾಸೆಟ್ ರಿಲೀಸ್ ಸಮಾರಂಭ ಮೊನ್ನೆ ಅಂಬೇಡ್ಕರ್ ಭವನದಲ್ಲಿ ನಡೆಯಿತು.

ಈ ಸಮಾರಂಭವನ್ನು ವಿಭಿನ್ನವಾಗಿ ಮಾಡಬೇಕೆಂದು ತೀರ್ಮಾನಿಸಿದ್ದ ನಿರ್ಮಾಪಕ ಮುನಿರತ್ನರವರು ಮೈಸೂರಿನ ಅನಾಥಾಶ್ರಮದ ಮಕ್ಕಳನ್ನು ಕರೆಸಿ ಅವರಿಂದ ಕೆಸೆಟ್ ಬಿಡುಗಡೆ ಮಾಡಿಸಿದರು. ಅಷ್ಟೇ ಅಲ್ಲ, ಈ ಚಿತ್ರದ ಬಿಡುಗಡೆಯ ದಿನದ ಮೊದಲ ದೇಖಾವೆಯ ಎಲ್ಲಾ ಗಳಿಕೆಯನ್ನು ಮೈಸೂರಿನಲ್ಲಿ ಮಾಜಿ ಪೊಲೀಸ್ ಕಮಿಷನರ್ ರೇವಣಸಿದ್ದಯ್ಯ ನಡೆಸುತ್ತಿರುವ ಅನಾಥಾಶ್ರಮಕ್ಕೆ ನೀಡಲು ನಿರ್ಧರಿಸಿದ್ದಾರೆ. ಒಂದು ಅಂದಾಜಿನ ಪ್ರಕಾರ ಸುಮಾರು ಐವತ್ತೆರಡು ಕೇಂದ್ರಗಳಲ್ಲಿ ಈ ಚಿತ್ರ ಬಿಡುಗಡೆಯಾಗಲಿದ್ದು ಇದರಿಂದ ಬರುವ ಮೊತ್ತ ಸುಮಾರು ಹದಿನೈದು ಲಕ್ಷ ಆಗುವ ಸಾಧ್ಯತೆಯಿದೆ. ಅಂದಹಾಗೆ ಇಷ್ಟು ದೊಡ್ಡ ಮಹಾದಾನವನ್ನು ಮಾಡಲು ಮುಂದೆ ಬಂದಿದ್ದು ನಾಯಕಿ ರಾಧಿಕಾಳ ಸಹೋದರ. ಆತನೇ ಈ ಚಿತ್ರದ ಹಂಚಿಕೆದಾರ. ಅನಾಥ ಮಕ್ಕಳಿಗೆ ಹಣ ನೀಡಿ ಎಂದು ಅಣ್ಣ-ತಂಗಿಗೆ ಸಲಹೆ ನೀಡಿದ್ದು ಸಾ.ರಾ. ಗೋವಿಂದು.

ತಾನೇ ನಾಯಕಿ, ತನ್ನ ಸಹೋದರನೇ ಹಂಚಿಕೆದಾರನಾದರೂ ಈ ಸಮಾರಂಭಕ್ಕೂ ಎಂದಿನಂತೆ ರಾಧಿಕಾ ಗೈರುಹಾಜರಾಗಿದ್ದಳು. ನಾಯಕರಾದ ಉಪ್ಪಿ ಮತ್ತು ದರ್ಶನ್ ಸಮಾರಂಭದಲ್ಲಿದ್ದರು. ಅಂತೂ ಅನಾಥರು ಚಿತ್ರದಿಂದ ಅನೇಕ ಜನರ ಬಾಳು ಹಸನಾಗುತ್ತಿರುವುದು ಒಳ್ಳೆಯದೆ.

ಪತಾಜೆ ಮತ್ತು ಪ್ರಾಮೀಸ್





'ಸವಿಸವಿ ನೆನಪು' ಚಿತ್ರದ ನಿರ್ದೇಶಕ ಸಂತೋಷ್ ರೈ ಪತಾಜೆಗೆ ಈ ಚಿತ್ರ ಹಂಡ್ರೆಡ್ ಡೇಸ್ ಓಡುತ್ತೆ ಎಂಬ ಆತ್ಮವಿಶ್ವಾಸವಿತ್ತಂತೆ. ಒಂದು ವೇಳೆ ಆ ಚಿತ್ರ ನೂರು ದಿನ ಓಡದೇ ಇದ್ದಲ್ಲಿ ತಾನು ನಿರ್ಮಾಪಕ ಎಸ್.ವಿ. ಬಾಬು ಜೊತೆ ಆರು ತಿಂಗಳ ಕಾಲ ಗುಲಾಮನಾಗಿ ಕೆಲಸ ಮಾಡುತ್ತೇನೆ ಎಂದು ಹೇಳಿದ್ದರಂತೆ.

ಚಿತ್ರ ಸೋತಿರಬಹುದು, ಆದರೆ ಪತಾಜೆ ಗೆದ್ದಿದ್ದಾರೆ. ಯಾಕೆಂದರೆ ಅವರಂದು ಕೊಟ್ಟ ಮಾತನ್ನು ಉಳಿಸಿಕೊಂಡಿದ್ದಾರೆ. ಈ ಚಿತ್ರ ಸೋತ ಕಾರಣಕ್ಕಾಗಿ ಈಗ ಬಾಬು ನಿರ್ಮಾಣದ ತೆಲುಗು ಚಿತ್ರಕ್ಕೆ ಪತಾಜೆ ಛಾಯಾಗ್ರಾಹಕರಾಗಿ ಕೆಲಸ ಮಾಡುತ್ತಿದ್ದಾರೆ. ಈ ಮಾತನ್ನು ಸ್ವತಃ ಪತಾಜೆಯೇ ಮೊನ್ನೆ ಹೇಳಿದರು.

ಆದರೆ ಗಾಂಧಿನಗರಿಗಳು ಇದನ್ನು ವ್ಯಾಖ್ಯಾನಿಸಿರುವ ಪರಿಯೇ ಬೇರೆ. ಕರಾವಳಿ ತೀರದ ಚಾಲಾಕು ಪತಾಜೆ ಒಂದೇ ಕಲ್ಲಿನಲ್ಲಿ ಎರಡು ಹಣ್ಣನ್ನು ಬೀಳಿಸಿದ್ದಾನೆ ಎನ್ನುತ್ತಿದ್ದಾರೆ ಗಾಂಧಿನಗರಿಗಳು. ಏಕೆಂದರೆ ಚಿತ್ರ ನಿರ್ದೇಶನವೂ ಸಿಕ್ಕಿತು, ತೆಲುಗಿನಲ್ಲಿ ಛಾಯಾಗ್ರಹಣದ ಅವಕಾಶವೂ ದೊರಕಿತು! ಯಾರಿಗುಂಟು ಯಾರಿಗಿಲ್ಲ ಇಂತಹ ಸೌಭಾಗ್ಯ!



ವಾರಸ್ದಾರ ಚಿತ್ರದಲ್ಲಿ ರವಿ ಬೆಳಗೆರೆ

'ಆಗ್' ನಲ್ಲಿ ಭಸ್ಮವಾದ ರಾಮ್‌ಗೋಪಾಲ್ ವರ್ಮ

ರಾಮ್‌ಗೋಪಾಲ್ ವರ್ಮ ಎಂಬ ಮಾಂತ್ರಿಕನ ಖದರು ಕುಂದಿಹೋಗಿದೆ. 'ರಂಗೀಲಾ' ಎಂಬ ಚಿತ್ರದ ಮುಖಾಂತರ ಬಾಲಿವುಡ್‌ನಲ್ಲಿ ತನ್ನ ಚಾರ್ಮನ್ನು ತೋರಿಸಿದ್ದ ವರ್ಮಾ ನಿರ್ದೇಶನದ ಸಿನಿಮಾದಲ್ಲಿ ನಟಿಸಲು ಬಾಲಿವುಡ್ ದೊಡ್ಡ ದೊಡ್ಡ ನಟರೆಲ್ಲಾ ಮುಗಿಬೀಳುತ್ತಿದ್ದರು. ವರ್ಮಾ ಕೂಡಾ ಅಷ್ಟೇ, ಆತ ನಿರ್ದೇಶಿಸಿದ ಸಿನಿಮಾಗಳೆಲ್ಲ ಹಿಟ್ ಆಗಿ ಕೊನೆಗೆ ಆತ ರಾಮ್‌ಗೋಪಾಲ್ ವರ್ಮಸ್ ಫ್ಯಾಕ್ಟರಿ ಎಂಬ ಚಿತ್ರ ನಿರ್ಮಾಣ ಸಂಸ್ಥೆಯನ್ನೇ ಪ್ರಾರಂಭಿಸಿದ. ವರ್ಷಕ್ಕೆ ಹತ್ತಾರು ಸಿನಿಮಾಗಳನ್ನು ತಯಾರಿಸುವ ಕಂಪೆನಿ ಅದಾಗಿದೆ.

ಹೀಗೆ ಕ್ರಿಯೇಟಿವ್ ಕೆಲಸವನ್ನೂ ವ್ಯಾಪಾರೀಕರಿಸಿದ ರಾಮ್‌ಗೋಪಾಲ್ ವರ್ಮಾ ಮಾತ್ರ ಆನಂತರ ಸೋಲನ್ನೇ ಕಾಣಲಾರಂಭಿಸಿದ. ಆತನ ಸಂಸ್ಥೆಯ ಬ್ಯಾನರ್ ಅಡಿ ಬೇರೆ ಬೇರೆ ನಿರ್ದೇಶಕರು ಮಾಡಿದ ಸಿನಿಮಾಗಳು ಬಾಕ್ಸಾಫೀಸಿನಲ್ಲಿ ತರಗೆಲೆಯಂತೆ ಉದುರಲಾರಂಭಿಸಿದವು. ಜೊತೆಗೆ ಸ್ವತಃ ವರ್ಮಾ ನಿರ್ದೇಶಿಸಿದ್ದ ಚಿತ್ರಗಳು ಕೂಡ ಒಂದೊಂದೇ ಮಕಾಡೆ ಮಲಗಿದವು. ಈಗ ಬಹಳ ನಿರೀಕ್ಷೆಯ 'ಶೋಲೆ' ಚಿತ್ರದ ರಿಮೇಕ್ 'ಆಗ್' ಕೂಡಾ ವ್ಯಾಪಕ ಟೀಕೆಗೆ ಗುರಿಯಾಗಿದೆ. ಮಾತ್ರವಲ್ಲ, ವರ್ಮಾ ಬತ್ತಳಿಕೆ ಖಾಲಿಯಾಗಿದೆ ಎಂದು ದೇಶದ ಉದ್ದಗಲಕ್ಕೂ ಪ್ರೇಕ್ಷಕರು ಮತ್ತು ವಿಮರ್ಶಕರು ಹೇಳುತ್ತಿದ್ದಾರೆ. ರಮೇಶ್ ಸಿಪ್ಪಿ ನಿರ್ದೇಶನದ 'ಶೋಲೆ' ಬಾಲಿವುಡ್‌ನಲ್ಲಿ ಇತಿಹಾಸವನ್ನು ಸೃಷ್ಟಿಸಿದ್ದರೆ, ಈ ಚಿತ್ರ ಅದರ ನೆರಳು ಕೂಡಾ ಆಗಿಲ್ಲ ಎಂಬುದು ವರ್ಮಾ 'ಖಾಲಿ'ತನಕ್ಕೆ ನಿದರ್ಶನವಾಗಿದೆ.



ಇದರ ಜೊತೆಜೊತೆಗೆ ವರ್ಮಾ ನಿರ್ದೇಶನದ ಮತ್ತೊಂದು ಚಿತ್ರ 'ಡಾರ್ಲಿಂಗ್' ತೆರೆ ಕಂಡಿದೆ. ಈ ಚಿತ್ರ ಎಷ್ಟು ಚೆನ್ನಾಗಿದೆ ಎಂದರೆ, ಇಂಗ್ಲಿಷ್ ಪತ್ರಿಕೆಯೊಂದು ಇದೇ ಮೊದಲ ಬಾರಿಗೆ ಅರ್ಧ ಸ್ಟಾರ್‌ಅನ್ನು ನೀಡಿದೆ!

PRINTER, PUBLISHER, PROPRIETOR AND EDITOR : GAURI LANKESH, No. 9, E.A.T.Street, Basavanagudi, Bangalore -4, Phone : 26676427
Fax : 26604536, E-mail :lankesh70@rediffmail.com, Printed at Rajhans Enterprises, # 134, 4th Main, Industrial ...